ಸಂಪುಟ: 04 ಸಂಚಿಕೆ: 97 ಪುಟಗಳು: 08 ಗುರುವಾರ 20 ಜೂನ್ 2024

www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 +91 8035841833 ₹5

ಮುಂಜಾನೆ ಮಾತು

ಸೋತಾಗ ಬೇಸರ ಬೇಡ, ನಿಜವಾಗಿ ನಮ್ಮವರಾರು ಎಂದು ತಿಳಿಯುವುದೇ ನಾವು ಬಿದ್ದಾಗ...

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಇನ್ನುಂದೆ ಕಣ್ಣು ಕುಕ್ಕುವ ಲೈಟ್ ಅಳವಡಿಸಿದ್ರೆ ಬೀಳುತ್ತೆ ಕೇಸ್

• ಉದಯವಾಹಿನಿ, ಬೆಂಗಳೂರು

ವಾಹನ ಸವಾರರೇ ನಿಮ್ಮ ಗಾಡಿಗೆ ಇನ್ನುಂದೆ ಕಣ್ಣು ಕುಕ್ಕುವ ಲೈಟ್ ಅಳವಡಿಸಿದ್ರೆ ಕೇಸ್ ಬೀಳೋದಂತು ಗ್ಯಾರಂಟಿ. ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಕಠಿಣ ಕ್ರಮಕ್ಕೆ ಮುಂದಾಗಿದೆ.

ಹೌದು, ಇತ್ತೀಚಿನ ದಿನಗಳಲ್ಲಿ ಹೆಚ್ಚು ಬೆಳಕು ಹೊರಹಾಕುವ ಎಲ್ಇಡಿ ದೀಪಗಳನ್ನು ವಾಹನಗಳಿಗೆ ಅಳವಡಿಸುತ್ತಿದ್ದು, ಇದರಿಂದ ಎದುರು ಮುಖದಲ್ಲಿ ಸಂಚರಿಸುವ ಇತರೆ ವಾಹನ ಸವಾರರಿಗೆ ತೀವ್ರ ತೊಂದರೆ ಆಗುತ್ತಿದೆ. ಕೇಂದ್ರ ಮೋಟಾರು ಕಾಯ್ದೆ (ಸಿಎಂವಿ) ಯಲ್ಲಿ ನಮೂದಿಸಿರುವ ಮಾನದಂಡದಂತೆ ವಾಹನ ಸವಾರರು ಹೆಡ್ಲೈಟ್ ಅಳವಡಿಕೆ ಮಾಡಿಕೊಳ್ಳಬೇಕು. ಕಾಯ್ದೆ ಉಲ್ಲಂಘಿಸಿದರೆ ಅಂತಹ ವಾಹನ ಸವಾರರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗುವುದು ಎಂದು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಕುಮಾರ್ ತಿಳಿಸಿದ್ದಾರೆ.

ಜನ ಒಲವು ತೋರಿದರೆ ನನ್ನ ಸ್ಪರ್ಧೆ ಬಿಟ್ಟು ಬೇರೆ ವಿಧಿಯಿಲ್ಲ

• ಉದಯವಾಹಿನಿ, ಬೆಂಗಳೂರು

ಉಪಚುನಾವಣೆಯಲ್ಲಿ ಚನ್ನಪಟ್ಟಣದ ಜನ ನನ್ನ ಮೇಲೆ ಒಲವು ತೋರಿದರೆ, ಪಕ್ಷ ತೀರ್ಮಾನಿಸಿದರೆ ನಾನು ಸ್ಪರ್ಧೆ ಮಾಡದೇ ಬೇರೆ ವಿಧಿ ಇಲ್ಲ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಚನ್ನಪಟ್ಟಣ ಪ್ರವಾಸಕ್ಕೂ ಮುನ್ನ ಸದಾಶಿವನಗರ ನಿವಾಸದ ಬಳಿ ಶಿವಕುಮಾರ್ ಅವರು ಮಾಧ್ಯಮಗಳ ಪ್ರಶ್ನೆಗಳಿಗೆ ಬುಧವಾರ ಪ್ರತಿಕ್ರಿಯೆ ನೀಡಿದರು. ಚನ್ನಪಟ್ಟಣ ಪ್ರವಾಸದ ಬಗ್ಗೆ ಹಾಗೂ ಮುಂಬರುವ ಉಪಚುನಾವಣೆ ಅಭ್ಯರ್ಥಿ ಬಗ್ಗೆ ಕೇಳಿದಾಗ ಅವರು, ಚನ್ನಪಟ್ಟಣ ನನ್ನ ಹೃದಯದಲ್ಲಿದೆ. ಇದು ಈ ಹಿಂದೆ ಸಾತನೂರು ವಿಧಾನಸಭಾ ಕ್ಷೇತ್ರದ ಭಾಗವಾಗಿತ್ತು. ಆಮೂಲಕ ಈ ಭಾಗ ನನಗೆ ರಾಜಕೀಯವಾಗಿ ಜನ್ಮ ನೀಡಿದ ಸ್ಥಳ. ಈ ಭಾಗದ ಜನ ಕಷ್ಟಕಾಲದಲ್ಲಿ ನಮಗೆ ಹೆಚ್ಚಿನ ಮತ ನೀಡಿ ಬೆಂಬಲ ನೀಡಿದ್ದಾರೆ. ನಾನು ಅವರ ಋಣ ತೀರಿಸಬೇಕು. ಕನಕಪುರ ಯಾವ ರೀತಿ ಅಭಿವೃದ್ಧಿ ಮಾಡಿದ್ದೇನೋ ಅದಕ್ಕಿಂತ ಹೆಚ್ಚಿನ ಅಭಿವೃದ್ಧಿಗೆ ಅವಕಾಶವಿದೆ. ಹೀಗಾಗಿ ಈ ಕ್ಷೇತ್ರದ ಮೇಲೆ ನನಗೆ ವಿಶೇಷವಾದ ಕಾಳಜಿ ಇದೆ. ಚನ್ನಪಟ್ಟಣ ಅಭಿವೃದ್ಧಿ ಹಾಗು ಬದಲಾವಣೆಗೆ ನಾನು ಬದ್ಧವಾಗಿದ್ದೇನೆ. ಹೀಗಾಗಿ ಇಂದು ಅಲ್ಲಿನ ದೇವಾಲಯಗಳಿಗೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿ ಮತದಾರರು ಹಾಗು ನಾಯಕರ ಜತೆ ಮಾತನಾಡುತ್ತೇನೆ. ಅಲ್ಲಿನ ಜನ ಏನು ಹೇಳುತ್ತಾರೆ ಎಂದು ತಿಳಿದು ನಂತರ ತೀರ್ಮಾನ ಮಾಡುತ್ತೇನೆ ಎಂದು ತಿಳಿಸಿದರು.

ನಮ್ಮ ಸಿಎಂ ಯಾರ ಒತ್ತಡಕ್ಕೂ ಮಣಿಯುವವರು ಅಲ್ಲ: ಸಚಿವ

• ಉದಯವಾಹಿನಿ, ಮಂಡ್ಯ

ರೇಣುಕಾಸ್ವಾಮಿ ಕೊಲೆ ಆರೋಪದಲ್ಲಿರುವ ನಟ ದರ್ಶನ್ ಬಿಡುಗಡೆಗೆ ಯಾವ ಸಚಿವರು ಒತ್ತಡ ಹಾಕಿಲ್ಲ. ನಮ್ಮ ಮುಖ್ಯಮಂತ್ರಿ ಒತ್ತಡಕ್ಕೆ ಮಣಿಯುವವರು ಅಲ್ಲ ಎಂದು ಕೃಷಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು. ಕೆಆರ್ಎಸ್ ಜಲಾಶಯದ ಖಾಸಗಿ ಹೋಟೆಲ್‌ನಲ್ಲಿ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳೊಂದಿಗೆ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೊಲೆ ಪ್ರಕರಣದಲ್ಲಿ ಕಾನೂನು ಪ್ರಕಾರ ಕ್ರಮ ಆಗಲಿದೆ ಎಂದರು. ನಟ ದರ್ಶನ್ ಜೊತೆಗೆ ಆತ್ಮೀಯತೆ ಇರಬಹುದು. ಆದರೆ ಆತ್ಮೀಯತೆ ಬೇರೆ, ವಿಶ್ವಾಸವೇ ಬೇರೆ. ಆದರೆ ಪ್ರಕರಣದಲ್ಲಿ ತನಿಖೆ ನಡೆಯುತ್ತಿದ್ದು, ನ್ಯಾಯಾಲಯದಲ್ಲಿ ತೀರ್ಮಾನ ಆಗಲಿದೆ. ಕಲಾವಿದ ಎಂಬ ಹಿನ್ನೆಲೆಯಲ್ಲಿ ಎಲ್ಲಾರಿಗೂ ಪರಿಚಯ ಇರುತ್ತಾರೆ. ಹಾಗಂತ ತನಿಖೆ ಹಳ್ಳ ಹಿಡಿಯುತ್ತೆ ಅಂತ ಅಲ್ಲ, ನಮ್ಮ ಸರ್ಕಾರ ನೂರಕ್ಕೆ ನೂರು ನಿಷ್ಪಕ್ಷಪಾತ ತನಿಖೆಗೆ ಬದ್ಧವಾಗಿದೆ ಎಂದು ತಿಳಿಸಿದರು.

ಡೆಂಗ್ಯೂ ನಿಯಂತ್ರಣಕ್ಕೆ ಸಚಿವ ಕೆ.ಜೆ.ಜಾರ್ಜ್ ಖಡಕ್ ಸೂಚನೆ

• ಉದಯವಾಹಿನಿ, ಚಿಕ್ಕಮಗಳೂರು

ಇಂಧನ ಸಚಿವರೂ ಆಗಿರುವ ಚಿಕ್ಕಮಗಳೂರು ಜಿಲ್ಲಾ ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್ ಅವರು ಬುಧವಾರ ಅರಳಗುಪ್ಪೆ ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಗೆ ಭೇಟಿ ನೀಡಿ ಡೆಂಗ್ಯೂ ಜ್ವರದಿಂದ ಚೇತರಿಸಿಕೊಳ್ಳುತ್ತಿರುವ ರೋಗಿಗಳ ಆರೋಗ್ಯ ವಿಚಾರಿಸಿದರಲ್ಲದೆ, ಆಸ್ಪತ್ರೆಯ ವ್ಯವಸ್ಥೆ ಪರಿಶೀಲಿಸಿದರು. ಇದೇ ವೇಳೆ ಸಚಿವರು ಚಿಕ್ಕಮಗಳೂರು ಜಿಲ್ಲೆಯಲ್ಲಿ ಇತ್ತೀಚೆಗೆ ಹೆಚ್ಚಾಗುತ್ತಿರುವ ಡೆಂಗ್ಯೂ ಪ್ರಕರಣಗಳ ನಿಯಂತ್ರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳು, ಆಸ್ಪತ್ರೆಯ ವ್ಯವಸ್ಥೆ ಸುಧಾರಣೆ, ಉತ್ತಮ ಚಿಕಿತ್ಸಾ ಸೌಲಭ್ಯ ಕಲ್ಪಿಸುವ ಕುರಿತು ಜಿಲ್ಲಾ ಆರೋಗ್ಯಾಧಿಕಾರಿಗಳು, ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು, ವೈದ್ಯರ ತಂಡದೊಂದಿಗೆ ಸಚಿವರು ಚರ್ಚಿಸಿದರು. ಆಸ್ಪತ್ರೆಗೆ ಭೇಟಿ ನೀಡಿದ ಸಂದರ್ಭದಲ್ಲಿ ರೋಗಿಗಳು, ಸಂಬಂಧಿಕರಿಗೆ ಧೈರ್ಯ ತುಂಬಿದರಲ್ಲದೆ, ಉತ್ತಮ ಚಿಕಿತ್ಸೆ, ಆರೈಕೆಯ ಭರವಸೆ ನೀಡಿದರು. ಡೆಂಗ್ಯೂ ಹಿನ್ನೆಲೆಯಲ್ಲಿ ಸಾರ್ವಜನಿಕ ಜಾಗೃತಿ ಅಭಿಯಾನ ನಡೆಸಿ, ಜನರಲ್ಲಿ ಅರಿವು ಮೂಡಿಸುವಂತೆ ಆರೋಗ್ಯ ಅಧಿಕಾರಿಗಳಿಗೆ ಸಲಹೆ ನೀಡಿದರು.

ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ಆರಂಭದಲ್ಲಿ ತನಿಖಾಧಿಕಾರಿಗಳ ಮುಂದೆ ತನಗೆ ಏನೂ ಗೊತ್ತಿಲ್ಲ ಎಂದೇ ವಾದಿಸುತ್ತಿದ್ದ ದರ್ಶನ್, ಸತತ ವಿಚಾರಣೆ ಬಳಿಕ ಕೃತ್ಯದ ಬಗ್ಗೆ ಸತ್ಯ ಬಾಯ್ಬಿಟ್ಟಿದ್ದಾರೆ. ಚಿತ್ರದುರ್ಗದ ರೇಣುಕಾಸ್ವಾಮಿ ಪ್ರಕರಣದಲ್ಲಿ ಬಂಧನವಾಗಿರುವ ನಟ ದರ್ಶನ್ ಕೊನೆಗೂ ಖಾಕಿ ಎದುರು ಪ್ರಕರಣದಲ್ಲಿ ತನ್ನ ಹೆಸರು ಎಲ್ಲಿಯೂ ಬರದಂತೆ ನೋಡಿಕೊಳ್ಳಲು 30 ಲಕ್ಷ ರೂ. ನೀಡಿರುವು ದರ್ಶನ್ ಹೇಳಿರುವ ಸ್ವ-ಇಚ್ಛಾ ಹೇಳಿಕೆ ಪೊಲೀಸರು ರಿಮ್ಯಾಂಡ್ ಕಾಪಿಯಲ್ಲಿ ದಾಖಲಿಸಿದ್ದಾರೆ.

ವಿಚಾರಣೆ ಇನ್ನೂ ಬಾಕಿ ಸತ್ಯ ಕಕ್ಕಿಸಿದ ಖಾಕಿ

ಬಗೆದಷ್ಟೂ ಬಯಲಾಗ್ತಿದೆ ಡಿ ಗ್ಯಾಂಗ್‌ನ ಕರಾಳ ಮುಖ..! ಖಾಕಿ ಮ್ಯಾನೇಜ್‌ಗಾಗಿ 30 ಲಕ್ಷ ರೂ.ನೀಡಿದ್ದೆ..! ತಪ್ಪೊಪ್ಪಿಕೊಂಡ ದರ್ಶನ್

1 ಕೊಲೆ ಕೇಸ್‌ನಲ್ಲಿ ತಮ್ಮ ಹೆಸರು ಎಲ್ಲಿಯೂ ಹೊರಬರದಂತೆ ತಡೆಯಲು ಪರಮಾಪ್ತ ಪ್ರದೂಶ್‌ಗೆ 30 ಲಕ್ಷ ರೂ. ಕೊಟ್ಟಿದ್ದೆ "

2 ಮೊದಲ ಬಾರಿಗೆ ಆರೋಪಿ ನಟ ದರ್ಶನ್ ಪೊಲೀಸರ ಮುಂದೆ ತಪ್ಪೊಪ್ಪಿಗೆ ಹೇಳಿಕೆ ದಾಖಲಿಸಿದ್ದಾರೆ

3 ಜೂ.8ರಂದು ದರ್ಶನ್ ಧರಿಸಿದ್ದ ಬಟ್ಟೆ, ನೀಲಿಬಣ್ಣದ ಶೂ, ಮನೆಯ ಸಿಸಿಟಿವಿ ಡಿವಿಆರ್ ಸಹ ಜಪ್ತಿ ಮಾಡಿದೆ.

ವಿಡಿಯೋ ಚಿತ್ರೀಕರಣ

ಪಟ್ಟಣಗೆರೆ ಶೆಡ್‌ನಲ್ಲಿ ರೇಣುಕಾಸ್ವಾಮಿ ಮೇಲೆ ನಡೆಸಲಾದ ಹಲ್ಲೆಯನ್ನು ಈ ಮೊಬೈಲ್ ಗಳಲ್ಲಿ ಆರೋಪಿಗಳು ವಿಡಿಯೋ ಚಿತ್ರೀಕರಣ ಮಾಡಿಕೊಂಡಿದ್ದರು. ಈ ಪ್ರಕರಣದಲ್ಲಿ ರೇಣುಕಾಸ್ವಾಮಿ, ಆರೋಪಿ ರಾಘವೇಂದ್ರರ ಮೊಬೈಲ್‌ಗಳು ಪ್ರಮುಖ ಸಾಕ್ಷಿಯಾಗಿವೆ. ಇಬ್ಬರ ಮೊಬೈಲ್‌ಗಳನ್ನೂ ರಾಜಕಾಲುವೆಗೆ ಬಿಸಾಡಿದ್ದಾಗಿ ಪ್ರದೂಶ್ ಹೇಳಿಕೆ ನೀಡಿದ್ದಾನೆ. ಆತ ತೋರಿಸಿದ ಸುಮನಹಳ್ಳಿ ರಾಜಕಾಲುವೆಯ ಬಳಿ ಪೊಲೀಸ್ ಅಧಿಕಾರಿಗಳು ಮಹಜರು ನಡೆಸಿದ್ದಾರೆ. ಬಿಬಿಎಂಪಿ ಪೌರ ಕಾರ್ಮಿಕರ ಸಹಾಯದಿಂದ ರಾಜಕಾಲುವೆಯಲ್ಲಿ ಮೊಬೈಲ್ ಹುಡುಕಾಡಿಸಿದ್ದಾರೆ. ಆದರೆ ಪತ್ತೆಯಾಗಿಲ್ಲ.

• ಉದಯವಾಹಿನಿ, ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ಆರಂಭದಲ್ಲಿ ತನಿಖಾಧಿಕಾರಿಗಳ ಮುಂದೆ ತನಗೆ ಏನೂ ಗೊತ್ತಿಲ್ಲ ಎಂದೇ ವಾದಿಸುತ್ತಿದ್ದ ದರ್ಶನ್, ಸತತ ವಿಚಾರಣೆ ಬಳಿಕ ಕೃತ್ಯದ ಬಗ್ಗೆ ಸತ್ಯ ಬಾಯ್ಬಿಟ್ಟಿದ್ದಾರೆ. ಚಿತ್ರದುರ್ಗದ ರೇಣುಕಾಸ್ವಾಮಿ ಪ್ರಕರಣದಲ್ಲಿ ಬಂಧನವಾಗಿರುವ ನಟ ದರ್ಶನ್ ಕೊನೆಗೂ ಖಾಕಿ ಎದುರು ಪ್ರಕರಣದಲ್ಲಿ ತನ್ನ ಹೆಸರು ಎಲ್ಲಿಯೂ ಬರದಂತೆ ನೋಡಿಕೊಳ್ಳಲು 30 ಲಕ್ಷ ರೂ. ನೀಡಿರುವು ದರ್ಶನ್ ಹೇಳಿರುವ ಸ್ವ-ಇಚ್ಛಾ ಹೇಳಿಕೆ ಪೊಲೀಸರು ರಿಮ್ಯಾಂಡ್ ಕಾಪಿಯಲ್ಲಿ ದಾಖಲಿಸಿದ್ದಾರೆ. ವಿಚಾರಣೆ ವೇಳೆ ದರ್ಶನ್, ಕೊಲೆಯಾದ ರೇಣುಕಾಸ್ವಾಮಿ ಮೃತದೇಹವನ್ನ ವಿಲೇವಾರಿ ಮಾಡಿ, ಈ ಪ್ರಕರಣದಲ್ಲಿ ತನ್ನ ಹೆಸರು ಎಲ್ಲಿಯೂ ಬರದಂತೆ ಮಾಡಲು ಡೀಲ್ ಕೊಟ್ಟಿದ್ದಾಗಿ ಒಪ್ಪಿಕೊಂಡಿದ್ದಾರೆ. ಪೊಲೀಸ್, ಲಾಯರ್ ಮತ್ತು ಶವ ಸಾಗಿಸೋ ವ್ಯಕ್ತಿಗಳಿಗೆ ತಗುಲುವ ವೆಚ್ಚವನ್ನ ಬರಿಸಲು ಪ್ರದೋಶ್‌ಗೆ 30 ಲಕ್ಷ ರೂ. ಹಣ ನೀಡಿರೋದಾಗಿ ತಪ್ಪೊಪ್ಪಿಕೊಂಡಿದ್ದಾರೆ.

ಜೂ.8ರಂದು ಪಟ್ಟಣಗೆರೆ ಶೆಡ್‌ನಲ್ಲಿ ಕರೆಂಟ್ ಶಾಕ್, ಮಾರಣಾಂತಿಕ ಹಲ್ಲೆಯಿಂದ ರೇಣುಕಾಸ್ವಾಮಿ ಮೃತಪಟ್ಟಿರುವ ವಿಚಾರ ಗೊತ್ತಾಗುತ್ತಿದ್ದಂತೆ ಕನಲಿ ಹೋಗಿದ್ದ ನಟ ದರ್ಶನ್, ಈ ಕೃತ್ಯದ ಬಲೆಯಿಂದ ಬಚಾವಾಗಲು ಥೇಟ್ ಸಿನಿಮಾ ಶೈಲಿಯಲ್ಲಿಯೇ ಸ್ಕೆಚ್ ಹಾಕಿದ್ದರು.

ಗಿರಿನಗರದ ಆಪ್ತ ಪ್ರದೂಶ್‌ಗೆ ಕರೆ ಮಾಡಿ ಕರೆಸಿಕೊಂಡು ವಿಚಾರ ತಿಳಿಸಿದ್ದ. ಬಳಿಕ ರೇಣುಕಾಸ್ವಾಮಿ ಹತ್ಯೆಯಲ್ಲಿ ತನ್ನ ಪಾತ್ರ ಎಲ್ಲಿಯೂ ಬಯಲಾಗಬಾರದು, ಪೊಲೀಸರನ್ನು ಮ್ಯಾನೇಜ್ ಮಾಡಬೇಕು. ಮೃತದೇಹ ವಿಲೇವಾರಿ ಮಾಡಬೇಕು ಎಂದು ತಿಳಿಸಿ ಅಡ್ವಾನ್ಸ್ ರೂಪದಲ್ಲಿ 30 ಲಕ್ಷ ರೂ. ನೀಡಿದ್ದರು. ಈ ಸಂಗತಿಯನ್ನು ದರ್ಶನ್ ಪೊಲೀಸರ ವಿಚಾರಣೆ ವೇಳೆ ಬಾಯ್ಬಿಟ್ಟಿದ್ದಾರೆ. ದರ್ಶನ್ ಕೊಟ್ಟ ಹಣವೇ ಶರಣಾಗತಿಯಾಗಿದ್ದ ನಿಖಿಲ್, ಕೇಶವಮೂರ್ತಿಗೆ ಅಡ್ವಾನ್ಸ್ ರೂಪದಲ್ಲಿ ತಲಾ 5 ಲಕ್ಷ ರೂ. ಸಂದಾಯವಾಗಿತ್ತು.ಈ ಹಣವನ್ನೂ ಪೊಲೀಸರು ಜಪ್ತಿ ಮಾಡಿದ್ದಾರೆ.

ಮೊಬೈಲ್‌ಗೆ ಶೋಧ

ನಟ ದರ್ಶನ್ ಗ್ಯಾಂಗ್‌ನಿಂದ ಕೊಲೆಯಾದ ರೇಣುಕಾಸ್ವಾಮಿ ಹಾಗೂ ಆರೋಪಿ ರಾಘವೇಂದ್ರನ ರಾಜಕಾಲುವೆ ಪಾಲಾಗಿರುವ ಮೊಬೈಲ್‌ಗಳಿಗಾಗಿ ತೀವ್ರ ಹುಡುಕಾಟ ನಡೆಸಲಾಗುತ್ತಿದೆ. ಪ್ರಕರಣದ ಬಗ್ಗೆ ಮಹತ್ವದ ಸಾಕ್ಷಿಗಳನ್ನು ಇದು ಹೊಂದಿದ್ದು, ಇದೀಗ ಶೋಧಕ್ಕಾಗಿ ಅಗ್ನಿಶಾಮಕ ದಳದ ಮೊರೆ ಹೋಗಲಾಗಿದೆ. ಸತತ 11 ದಿನಗಳಿಂದ ಮೃತ ರೇಣುಕಾಸ್ವಾಮಿ ಮೊಬೈಲ್‌ಗಾಗಿ ತೀವ್ರ ಶೋಧ ನಡೆಯುತ್ತಿದೆ, ಜೂ. 8ರಂದು ಕೊಲೆಯಾದ ರೇಣುಕಾಸ್ವಾಮಿ, ಎ5 ಆರೋಪಿ ರಾಘವೇಂದ್ರ ಇಬ್ಬರ ಮೊಬೈಲ್ ಅನ್ನು ಪಡೆದು ಸುಮನಹಳ್ಳಿಯ ರಾಜಕಾಲುವೆ ಬಳಿ ಮತ್ತೊಬ್ಬ ಆರೋಪಿ ಪ್ರದೂಶ್ ಎಸೆದಿದ್ದ.

ತನಿಖೆ ಇನ್ನಷ್ಟು ತೀವ್ರ

ಬೆಂಗಳೂರಿನ ಜಯಣ್ಣ ಶೆಡ್, ಮೈಸೂರಿನ ಹೋಟೆಲ್ ಮತ್ತು ಫಾರ್ಮ್‌ಹೌಸ್‌ನಲ್ಲಿ ಪೊಲೀಸರು ಮಹಜರು ನಡೆಸಿದ್ದಾರೆ. ಮೂರು ಬೈಕ್ ಸೀಜ್ ಮಾಡಿದ್ದಾರೆ. ಸರಿಯಾಗಿ ಊಟ ಮಾಡದ ಕಾರಣ ಅಸ್ವಸ್ಥರಾಗಿದ್ದ ನಟಿ ಪವಿತ್ರಾಗೌಡಗೆ ಮಲ್ಲತ್ತಹಳ್ಳಿ ಬಿಬಿಎಂಪಿ ಆಸ್ಪತ್ರೆಯಲ್ಲಿ ಪೊಲೀಸರು ಚಿಕಿತ್ಸೆ ಕೊಡಿಸಿದ್ದಾರೆ. ಇನ್ನು, ಕ್ರೈಂ ಸೀನ್‌ನಲ್ಲಿಯೇ ಇಲ್ಲದ ಕೇಶವಮೂರ್ತಿ, ನಿಖಿಲ್ ಮತ್ತು ಕಾರ್ತಿಕ್ 30 ಲಕ್ಷ ರೂ. ಆಸೆಗಾಗಿ ಕೊಲೆ ಆರೋಪ ಹೊತ್ತು ಪೊಲೀಸರ ಮುಂದೆ ಶರಣಾಗಿದ್ದ ವಿಚಾರವೂ ಬೆಳಕಿಗೆ ಬಂದಿದೆ. ಈ ಮಧ್ಯೆ, ಪ್ರಕರಣದಲ್ಲಿ ಯಾವುದೇ ಒತ್ತಡ ಇಲ್ಲ. ಪೊಲೀಸರು ಪರಿಣಾಮಕಾರಿಯಾಗಿ ಕೆಲಸ ಮಾಡ್ತಿದ್ದಾರೆ ಎಂದು ಪೊಲೀಸ್ ಕಮೀಷನರ್ ದಯಾನಂದ್ ಸ್ಪಷ್ಟಪಡಿಸಿದ್ದಾರೆ.

ಠಾಣೆಗೆ ಹಾಜರಾದ ದರ್ಶನ್ ಪತ್ನಿ

ಚಿತ್ರದುರ್ಗ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿರುವ ನಟ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಎಪಿ ನಗರ ಪೊಲೀಸ್ ಠಾಣೆಗೆ ಹಾಜರಾಗಿದ್ದಾರೆ. ಹೇಳಿಕೆ ದಾಖಲು ಮಾಡುವ ಸಲುವಾಗಿ ಪೊಲೀಸರು ವಿಜಯಲಕ್ಷ್ಮಿಯವರನ್ನು ಕರೆಸಿಕೊಂಡಿದ್ದಾರೆ ಎನ್ನಲಾಗಿದೆ. ಪ್ರಕರಣದ ಬಗ್ಗೆ ತನಿಖೆ ಹಾಗೂ ಮನೆಯಲ್ಲಿ ಸಿಕ್ಕ ಶೂ ಬಗ್ಗೆ ಮಾಹಿತಿ ಕೊಡಲು ಕಾಮಾಕ್ಷಿಪಾಳ್ಯ ಪೊಲೀಸರು ವಿಜಯಲಕ್ಷ್ಮಿ ಅವರಿಗೆ ನೋಟಿಸ್ ನೀಡಿದ್ದರು. ಇಂದು ಬೆಳಗ್ಗೆ ವಿಜಯಲಕ್ಷ್ಮಿಗೆ ಪೊಲೀಸರು ತನಿಖೆಗೆ ಬರುವಂತೆ ಸೂಚಿಸಿದ್ದರು. ಪೊಲೀಸರು ನೋಟಿಸ್ ಕೊಟ್ಟ ಹಿನ್ನೆಲೆಯಲ್ಲಿ ಎಪಿ ನಗರ ಪೊಲೀಸ್ ಠಾಣೆಗೆ ತನಿಖೆಗಾಗಿ ವಿಜಯಲಕ್ಷ್ಮಿ

ಹಾಜರಾಗಿದ್ದು, ವಿಚಾರಣೆ ಎದುರಿಸಿದ್ದಾರೆ. ಮನೆಯಲ್ಲಿ ದರ್ಶನ್ ಶೂ ಸಿಕ್ಕ ಬಗ್ಗೆ ವಿಜಯಲಕ್ಷ್ಮಿ ಹೇಳಿಕೆ ದಾಖಲಿಸಿ ಅನ್ನಪೂರ್ಣೇಶ್ವರಿ ನಗರ ಠಾಣೆಯಿಂದ ಹೊರಟಿದ್ದಾರೆ. ಸುಮಾರು ಐದೂವರೆ ಗಂಟೆಗಳ ಕಾಲ ವಿಜಯಲಕ್ಷ್ಮಿ ಅವರನ್ನು ವಿಚಾರಣೆ ನಡೆಸಿದ ಪೊಲೀಸರು ಅವರ ಹೇಳಿಕೆಯನ್ನು ದಾಖಲಿಸಿಕೊಂಡಿದ್ದಾರೆ. ಇತ್ತ ರೇಣುಕಾಸ್ವಾಮಿ ಮೇಲೆ ಚಪ್ಪಲಿಯಿಂದ ಹಲ್ಲೆ ಮಾಡಿದ್ದ ಪವಿತ್ರಾ ಗೌಡ ಚಪ್ಪಲಿ ,ಅಂದು ಧರಿಸಿದ್ದ ಬಟ್ಟೆಯನ್ನು ಕೂಡ ಸೀಜ್ ಮಾಡಲಾಗಿದೆ. ಒಟ್ಟಾರೆ ರೇಣುಕಾಸ್ವಾಮಿ ಕೊಲೆ ಪ್ರಕರಣ ದರ್ಶನ್ ಹಾಗೂ ಪವಿತ್ರಾಗೆ ಮುಳ್ಳಾಗಿ ಪರಿಣಮಿಸಿದೆ.

ಕೇಂದ್ರಕ್ಕೆ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ದಿಢೀರ್ ಭೇಟಿ
ಆಹಾರ ಪದಾರ್ಥಗಳ ಗುಣಮಟ್ಟ ಪರಿಶೀಲನೆ

• ಉದಯವಾಹಿನಿ, ಬೆಂಗಳೂರು

ಉತ್ತರ ತಾಲೂಕಿನ ಚಿಕ್ಕಬಾಣಾವರದಲ್ಲಿರುವ ಕೇಂದ್ರ ಮತ್ತು ರಾಜ್ಯ ಪುರಸ್ಕೃತ ಮಹಿಳೆಯರ ಮತ್ತು ಮಕ್ಕಳ ಪೌಷ್ಟಿಕ ಆಹಾರ ತಯಾರಿಕೆ ಮತ್ತು ತರಬೇತಿ ಕೇಂದ್ರ (ಎಂಎಸ್ ಪಿಸಿ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ದಿಢೀರ್ ಭೇಟಿ ನೀಡಿ, ಅಂಗನವಾಡಿ ಕೇಂದ್ರಗಳಿಗೆ ಸರಬರಾಜಾಗುವ ಆಹಾರ ಗುಣಮಟ್ಟವನ್ನು ಪರಿಶೀಲಿಸಿದರು.

ಅಂಗನವಾಡಿ ಕೇಂದ್ರಗಳ ಮಕ್ಕಳಿಗೆ ನೀಡಲಾಗುವ ಆಹಾರ ಪದಾರ್ಥಗಳ ತಯಾರಿ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು. ಯಾವುದೇ ಲೋಪದೋಷ ಆಗದಂತೆ, ಎಚ್ಚರ ವಹಿಸಿ ಆಹಾರ ಪದಾರ್ಥಗಳನ್ನು ಪೂರೈಸಲು ಸೂಚನೆ ನೀಡಿದರು. ಜೊತೆಗೆ ಪ್ರತಿಯೊಂದು ಆಹಾರ ಪದಾರ್ಥಗಳನ್ನು ಪರಿಶೀಲಿಸಿ, ಮಾಹಿತಿ ನೀಡಿದರು. ಈ ವೇಳೆ ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಡಾ.ಜಿ.ಸಿ.ಪ್ರಕಾಶ್, ಹಿರಿಯ ನಾಗರೀಕರ, ವಿಶೇಷ ಚೇತನರ ಇಲಾಖೆಯ ನಿರ್ದೇಶಕರಾದ ಎನ್.ಸಿದ್ದೇಶ್ವರ್, ವಿಶೇಷಾಧಿಕಾರಿ ಎನ್. ಎಚ್. ನಿಶ್ಚಲ್, ಬೆಂಗಳೂರು ನಗರ ಜಿಲ್ಲೆಯ ಉಪ ನಿರ್ದೇಶಕ ಸಿದ್ದರಾಮಪ್ಪ ಉಪಸ್ಥಿತರಿದ್ದರು.

ತೈಲ ಬೆಲೆ ಏರಿಕೆ ಖಂಡಿಸಿ ಬಿಜೆಪಿಯಿಂದ ಜಾಥಾ

• ಉದಯವಾಹಿನಿ, ಬೆಂಗಳೂರು

ಇವರೇನು ಮನುಷ

ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

ಮನದಂದವ ಕರುಣಿಸಬೇಕೆಂದು

ನಿಜಗುಣರ ಪರಮಾರ್ಥ ಗೀತೆಯ ಮಾತು. ರೂಪವಿಲ್ಲದ ಮನಸ್ಸು ಮರ್ಕಟ. ನೆಲೆ ನಿಲ್ಲದು. ಎಲ್ಲೆಂದರಲ್ಲಿ ಜಿಗಿತ. ಮನೆಯಲ್ಲಿ ರಾಮ ಹೊರಗೆ ಬೇರೆ. ಹೊರಗೆ ರಾಮ ಒಳಗೆ ಬೇರೆ. ಮನಸ್ಸು ಅಳತೆಗೆ ಸಿಗದು. ಚಿತ್ರ ವಿಚಿತ್ರ ವಿಕೃತಿ. ಮನ ಬಂದಂತೆ ನಡೆ. ಬಹುತೇಕ ಎಲ್ಲಾಮನೋದಾಸ,ಮನೋಬಲಿ! ಜನರ ದಾರಿ ತಪ್ಪಿಸುವುದು ಮೋಹ ಹುಟ್ಟಿಸುವುದು. ಈ ಮನಸ್ಸು ಇರಬೇಕಾದದ್ದು ನಮ್ಮ ಹತೋಟಿಯಲ್ಲಿ. ಆಗ ನೆಮ್ಮದಿ. ಮನವಶರಾದರೆ ಇಲ್ಲ ನೆಮ್ಮದಿ. ಇಂಥ ಮನಸ್ಸಿನ ಸ್ವರೂಪ ಏನು ಎಂದು ಕೇಳಿದ ರಾಮ ವಶಿಷ್ಠರಿಗೆ. ವಶಿಷ್ಠರೆಂದರು: ವಾಯುವಿನ ಪ್ರಧಾನ ಅಂಶ ಮನಸ್ಸು. ರೂಪ ಇಲ್ಲದ್ದು ಸದಾ ಚಂಚಲ. ಸಂಕಲ್ಪ ವಿಕಲ್ಪ ಚೇತನ ಮನಸ್ಸು. ಹತ್ತು ಇಂದ್ರಿಯಗಳ ಪ್ರೇರಕ. ಇಂದ್ರಿಯಗಳ ವ್ಯವಹಾರದಿಂದ ಮನಸ್ಸನ್ನು ಊಹಿಸಬಹುದು ಹೊರತು ನೋಡಲಾಗದು ಮುಟ್ಟಲಾಗದು ಮೂಸಲಾಗದು ರುಚಿಸಲಾಗದು ಕೇಳಲಾಗದು. ಮನೋಮೂಲಕವೇ ಎಲ್ಲಾಗೋಚರ. ಅದಿಲ್ಲದಿದ್ದರೆ ಏನಿಲ್ಲ, ಎಲ್ಲಾಮೋಹ ಸಂಬಂಧ ಬಂಧಕ್ಕೆ ಮನಸ್ಸೇ ಕಾರಣ. ಮನಸ್ಸು ಒಡೆದರೆ ಹಿಂದೆ ಸರಿದರೆ ಎಲ್ಲಾದೂರ! ಮನಸ್ಸು ಮಾಯೆ ಅವಿದ್ಯೆ ಚಿತ್ ಬುದ್ಧಿ ಅಹಂಕಾರ.

ಮಕ್ಕಳು ಮೌಢ್ಯದಿಂದ ಹೊರಗೆ ಬರಬೇಕು: ಸಿದ್ದರಾಮಯ್ಯ ಕರೆ

ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ 833 ವಸತಿ ಶಾಲೆಗಳಿವೆ, ಒಟ್ಟು 946 ವಸತಿ ಶಾಲೆಗಳಿವೆ

• ಉದಯವಾಹಿನಿ, ಬೆಂಗಳೂರು

ವಿದ್ಯಾವಂತರಲ್ಲೇ ಜಾತಿಪ್ರಜ್ಞೆ ಹೆಚ್ಚಾಗುತ್ತಿದೆ. ಡಾಕ್ಟರ್ ಓದಿದವರು ಇನ್ನೂ ಮೌಢ್ಯ ಬಿಟ್ಟಿಲ್ಲ. ಓದಿದವರೇ ಇನ್ನೂ ಹಣೆಬರಹದಲ್ಲಿ, ಕರ್ಮ ಸಿದ್ಧಾಂತದಲ್ಲಿ ನಂಬಿಕೆ ಇಟ್ಟುಕೊಂಡಿದ್ದಾರೆ. ಹೀಗಾಗಿ ವಿದ್ಯಾರ್ಥಿಗಳು ಇಂಥಾ ಮೌಢ್ಯದಲ್ಲಿ ನಂಬಿಕೆ ಇಡಬಾರದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಉತ್ತೇಜನ

ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಂಯುಕ್ತಾಶ್ರಯದಲ್ಲಿ SSLC ಮತ್ತು PUCಯಲ್ಲಿ ಉತ್ತಮ ಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಉತ್ತೇಜಿಸಿ ಮಾತನಾಡಿದ ಅವರು, ದಲಿತ ಸಂಘರ್ಷ ಸಮಿತಿ ರಾಜ್ಯದಲ್ಲಿ ನಡೆಸಿದ, ನಮಗೆ ಸರಾಯಿ ಅಂಗಡಿ ಬೇಡ. ವಸತಿ ಶಾಲೆ ಬೇಕು ಎನ್ನುವ ಹೋರಾಟದಿಂದ ಪ್ರೇರಿತನಾಗಿ ಮೊದಲ ಬಜೆಟ್ ಮಂಡಿಸುವ ವೇಳೆ ಗ್ರಾಮೀಣ ಭಾಗದಲ್ಲಿ ಮೊರಾರ್ಜಿ ಶಾಲೆಗಳನ್ನು ಆರಂಭಿಸಿದೆ. ಅವತ್ತಿನಿಂದ ನಿರಂತರವಾಗಿ ಮೊರಾರ್ಜಿ ವಸತಿ ಶಾಲೆಗಳನ್ನು ತೆರೆಯುತ್ತಲೇ ಇದ್ದೇನೆ. ಸದ್ಯ ಸಮಾಜ ಕಲ್ಯಾಣ ಇಲಾಖೆ ಅಡಿಯಲ್ಲಿ 833 ವಸತಿ ಶಾಲೆಗಳಿವೆ. ಅಲ್ಪ ಸಂಖ್ಯಾತ ಇಲಾಖೆಯಡಿಯಲ್ಲಿರುವುದೂ ಸೇರಿ ಒಟ್ಟು 946 ವಸತಿ ಶಾಲೆಗಳಿವೆ ಎಂದು ವಿವರಿಸಿದರು. ಕೆಲವು ಹೋಬಳಿಯಲ್ಲಿ ಒಂದಕ್ಕಿಂತ ಹೆಚ್ಚು ವಸತಿ ಶಾಲೆಗಳಿವೆ. ಆದ್ದರಿಂದ ಕೆಲವು ಹೋಬಳಿಗಳಲ್ಲಿ ಇಲ್ಲವಾಗಿತ್ತು.

ಹೀಗಾಗಿ ಈ ವರ್ಷ 20 ವಸತಿ ಶಾಲೆಗಳನ್ನು ಆರಂಭಿಸಲು ಅನುಮತಿ ನೀಡಿದ್ದೇನೆ. ಹೋಬಳಿಗೊಂದು ವಸತಿ ಶಾಲೆ ನನ್ನ ಗುರಿ ಮತ್ತು ಉದ್ದೇಶವಾಗಿದೆ ಎಂದರು.

ಗ್ರಾಮೀಣ ಭಾಗದಲ್ಲಿ ಸರ್ವರಿಗೂ ಗುಣಮಟ್ಟದ ವೈಚಾರಿಕತೆ, ವೈಜ್ಞಾನಿಕತೆಯಿಂದ ಕೂಡಿದ ಶಿಕ್ಷಣ ದೊರೆಯಬೇಕು.

ಜಾತಿ ವ್ಯವಸ್ಥೆ ಕಾರಣದಿಂದ ಸಮಾಜದಲ್ಲಿ ಅಸಮಾನತೆ ಸೃಷ್ಟಿಯಾಗಿದೆ ಎಲ್ಲಾ ಜಾತಿ, ಜನವರ್ಗದ ಮಕ್ಕಳಿಗೆ ಓದುವ ಅವಕಾಶ ಕಲ್ಪಿಸಿದ್ದು ನಮ್ಮ ಸಂವಿಧಾನ ಎಂದರು. ಜಾತಿ ವ್ಯವಸ್ಥೆ ಕಾರಣದಿಂದ ಸಮಾಜದಲ್ಲಿ ಅಸಮಾನತೆ ಸೃಷ್ಟಿಯಾಗಿದೆ. ಇದನ್ನು ಹೋಗಲಾಡಿಸಬೇಕಾಗಿ ದೆ. ನನಗೆ ಶಿಕ್ಷಣ ಸಿಕ್ಕಿದ್ದರಿಂದಲೇ ಮುಖ್ಯಮಂತ್ರಿ ಆಗುವ ಅವಕಾಶ ದೊರೆಯಿತು. ಇಲ್ಲದಿದ್ದರೆ ನಾನೂ ಎಮ್ಮೆ, ಹಸು ಮೇಯಿಸುತ್ತಾ ಅಷ್ಟಕ್ಕೇ ಸೀಮಿತ ಆಗಬೇಕಾಗಿತ್ತು ಎಂದರು.

ಬುದ್ಧ, ಬಸವಣ್ಣ ಎಷ್ಟು ಶತಮಾನಗಳ ಹಿಂದೆ ಜಾತಿ ವ್ಯವಸ್ಥೆ ಅಳಿಸಲು ಶ್ರಮಿಸಿದರು.

> ಮಕ್ಕಳಿಗೆ ಜಾತಿ, ಧರ್ಮದ ತಾರತಮ್ಯ ಕಲಿಸುವವರೇ ನಾವು. ಆದ್ದರಿಂದ ಪೋಷಕರು, ಶಿಕ್ಷಕರು ಮೊದಲು ಕಂದಾಚಾರ,ಮೌಢ್ಯದಿಂದ ಹೊರಗೆ ಬರಬೇಕು. ಆಗ ಮಕ್ಕಳೂ ವೈಜ್ಞಾನಿಕವಾಗಿ ಬೆಳೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳುತ್ತಾರೆ. ಹುಟ್ಟುವಾಗ ಎಲ್ಲಾ ಮಕ್ಕಳೂ ವಿಶ್ವ ಮಾನವರಾಗಿ ಹುಟ್ಟಿ ಬೆಳೆಯುತ್ತಾ ಅಲ್ಪ ಮಾನವರಾಗುತ್ತಾರೆ ಎನುಚ್ಚಿವ ಕುವೆಂಪು ಅವರ ಮಾತು ಪ್ರಸ್ತಾಪಿಸಿದ ಮುಖ್ಯಮಂತ್ರಿಗಳು ಮಕ್ಕಳು ಅಲ್ಪ ಮಾನವರಾಗದಂತೆ ಕಾಪಾಡುವ ಜವಾಬ್ದಾರಿ ಶಿಕ್ಷಕರು, ಪೋಷಕರ ಮೇಲಿದೆ ಎಂದರು.

> ಬಸವಣ್ಣನವರು 12ನೇ ಶತಮಾನದಲ್ಲೇ ದಲಿತರು ಮತ್ತು ಬ್ರಾಹ್ಮಣರ ನಡುವೆ ಅಂತರ್ಜಾತಿ ವಿವಾಹ ಮಾಡಿಸಿ ಗೆದ್ದರು. ಜಾತಿ ವ್ಯವಸ್ಥೆ ಶಿಥಿಲವಾಗಬೇಕಾದರೆ ದಲಿತರು, ಹಿಂದುಳಿದವರಿಗೆ ಆರ್ಥಿಕ ಶಕ್ತಿ ಬರಬೇಕು, ಸಾಮಾಜಿಕವಾಗಿಯೂ ಶಕ್ತಿ ಬರಬೇಕು . ಈ ಬಗ್ಗೆ ಅಂಬೇಡ್ಕರ್ ಅವರು ಸಂವಿಧಾನ ಸಭೆಯಲ್ಲಿ ಆಡಿದ ಮಾತುಗಳು ಇವತ್ತಿಗೂ ಬಹಳ ಪ್ರಸ್ತುತವಾಗಿದೆ ಎಂದರು. ಸರ್ಕಾರಿ ವಸತಿ ಶಾಲೆಗಳ ಮಕ್ಕಳು ಈ ಬಾರಿ ಶೇ96 ರಷ್ಟು ಫಲಿತಾಂಶ ಪಡೆದಿದ್ದಾರೆ. ಮುಂದಿನ ಬಾರಿ ಶೇ100 ರಷ್ಟು ಅಂಕ ಪಡೆಯಬೇಕು ಎಂದು ಕರೆ ನೀಡಿದರು.

ಆದರೆ ವಿದ್ಯಾವಂತರಲ್ಲೇ ಜಾತಿಪ್ರಜ್ಞೆ ಹೆಚ್ಚಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು. SSLC ಮತ್ತು PUCಯಲ್ಲಿ ಹೆಚ್ಚು ಅಂಕ ಗಳಿಸಿದ, ಸಾಧನೆ ಮಾಡಿದ ಎಲ್ಲಾ ವಿದ್ಯಾರ್ಥಿಗಳಿಗೆ ಮತ್ತು ಈ ವಿದ್ಯಾರ್ಥಿಗಳ ಸಾಧನೆಗೆ ನೆರವಾದ ಎಲ್ಲಾ ಶಿಕ್ಷಕರಿಗೆ ಮುಖ್ಯಮಂತ್ರಿಗಳು ಇದೇ ಸಂದರ್ಭದಲ್ಲಿ ಅಭಿನಂದಿಸಿದರು.

ಶ್ರೀ ಶ್ರೀನಿವಾಸ ಕಲ್ಯಾಣ ಪ್ರವಚನ ಮಾಲಿಕೆ-3

• ಉದಯವಾಹಿನಿ, ಬೆಂಗಳೂರು

ವಜ್ರಕ್ಷೇತ್ರ' ಶ್ರೀ ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದ ವತಿಯಿಂದ ಜೂನ್ 20 ರಿಂದ 26ರ ವರೆಗೆ ಪ್ರತಿದಿನ ಸಂಜೆ 7-00ಕ್ಕೆ ಡಾ|| ಮಾದನೂರು ಪವಮಾನಾಚಾರ್ಯರಿಂದ ಶ್ರೀ ಶ್ರೀನಿವಾಸ ಕಲ್ಯಾಣ (ಪ್ರವಚನ ಮಾಲಿಕೆ-3) ಏರ್ಪಡಿಸಿದೆ. ಸ್ಥಳ : ಶ್ರೀ ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, 7ನೇ ಮುಖ್ಯರಸ್ತೆ 7ನೇ ಅಡ್ಡರಸ್ತೆ 3ನೇ ಬ್ಲಾಕ್, ತ್ಯಾಗರಾಜನಗರ ಬೆಂಗಳೂರು-28 ಸರ್ವರಿಗೂ ಆದರದ ಸುಸ್ವಾಗತ

ನೀರಿನ ದರ ಹೆಚ್ಚಳ ಅನಿವಾರ್ಯ - ಸುಳಿವು ನೀಡಿದ ಡಿಕೆಶಿ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಕುಡಿಯುವ ನೀರಿನ ದರ ಕಳೆದ 14 ವರ್ಷದಿಂದ ಏರಿಕೆಯಾಗಿಲ್ಲ. ನಗರದ ಪರಿಸ್ಥಿತಿಯಲ್ಲಿ ನೀರಿನ ದರ ಹೆಚ್ಚಳ ಅನಿವಾರ್ಯವಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ರು ಬಗ್ಗೆ ಮಾತನಾಡಿದ ಅವರು, ಹಲವು ವರ್ಷಗಳಿಂದ ನೀರಿನ ದರ ಏರಿಕೆಗೆ ಪ್ರಸ್ತಾವನೆ ಸಲ್ಲಿಸುತ್ತಿರುವ ಬೆಂಗಳೂರು ಜಲಮಂಡಳಿಗೆ ಅಂದಿನ ರಾಜ್ಯ ಸರ್ಕಾರಗಳು ಹಲವು ಕಾರಣ ಹೇಳಿ ಮಂದೂಡಿತ್ತು ಆದರೆ ಈ ಬಾರಿ ದರ ಏರಿಕೆ ಮಾಡುತ್ತೇವೆ ಎಂದರು. ಬೆಂಗಳೂರು ಜಲ ಮಂಡಳಿಯಲ್ಲಿ ಕೆಲಸ ಮಾಡುವ ಸಿಬ್ಬಂದಿಗಳಿಗೆ ಸಂಬಳ, ವಿದ್ಯುತ್ ಬಿಲ್ ಕಟ್ಟಲು ಕೂಡ ಹಣವಿಲ್ಲದಂತಾಗಿದೆ. ಅಪಾರ ಜನಸಂಖ್ಯೆ, ಕಾರ್ಖಾನೆಗಳು, ಕಚೇರಿಗಳು ಸಾಕಷ್ಟು ಇರುವ ಬೆಂಗಳೂರಿಗೆ ಕುಡಿಯುವ ನೀರು ಬೇಕು. ನೀರಿನ ದರ ಹೆಚ್ಚು ಮಾಡಬೇಕೆ ಬೇಡವೇ ಎಂದು ಸಾರ್ವಜನಿಕರೇ ಹೇಳಲಿ ಎಂದು ಡಿಕೆಶಿ ಹೇಳಿದರು.

ವಾಹನ ಸವಾರರಿಗೆ ಮತ್ತೆ ಹೆಚ್‌ಎಸ್‌ಆರ್‌ಪಿ ನಂಬರ್ ಪ್ಲೇಟ್' ಅಳವಡಿಕೆ ಗಡುವು

• ಉದಯವಾಹಿನಿ, ಬೆಂಗಳೂರು

ಈಗಾಗಲೇ ಹಲವು ಬಾರಿ ವಾಹನಗಳಿಗೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಅಳವಡಿಕೆ ಗಡುವನ್ನು ರಾಜ್ಯ ಸರ್ಕಾರ ವಿಸ್ತರಣೆ ಮಾಡಿತ್ತು. ಈಗ ಮತ್ತೊಮ್ಮೆ ವಾಹನ ಸವಾರರಿಗೆ ಬಿಗ್ ರಿಲೀಫ್ ಎನ್ನುವಂತೆ ಊಖಖಕ ನಂಬರ್ ಪ್ಲೇಟ್ ಅಳವಡಿಕೆ ಗಡುವು ಸೆ.15ರವರೆಗೆ ವಿಸ್ತರಣೆ ಮಾಡಿ ಆದೇಶಿಸಿದೆ. ರಾಜ್ಯ ಸರ್ಕಾರದಿಂದ ವಾಹನಗಳಿಗೆ ಹೈ ಸೆಕ್ಯೂರಿಟಿ ನಂಬರ್ ಪ್ಲೇಟ್ ಅಳವಡಿಸೋದನ್ನು ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಕಡ್ಡಾಯಗೊಳಿಸಲಾಗಿತ್ತು. ಕರ್ನಾಟಕದಲ್ಲಿ ಈ ಆದೇಶವನ್ನು ಜಾರಿಗೊಳಿಸಲಾಗಿದೆ. ಈಗಾಗಲೇ ಅನೇಕ ವಾಹನ ಸವಾರರು ಹೆಚ್ ಎಸ್ ಆರ್ ಪಿ ನಂಬರ್ ಪ್ಲೇಟ್ ಕೂಡ ಅಳವಡಿಸಿಕೊಂಡಿದ್ದಾರೆ. ಇನ್ನೂ ಕೆಲವರು ಅಳವಡಿಸಿಕೊಳ್ಳೋದು ಬಾಕಿ ಇದೆ. ಈ ಹಿನ್ನಲೆಯಲ್ಲಿ ಈ ಹಿಂದೆ ಕರ್ನಾಟಕ ಹೈಕೋರ್ಟ್ ಹೆಚ್‌ಎಸ್ ಆರ್ ಪಿ ನಂಬರ್ ಪ್ಲೇಟ್ ಅಳವಡಿಸದವರ ವಿರುದ್ಧ ಜುಲೈ.4ರವರೆಗೆ ಯಾವುದೇ ಕ್ರಮ ಕೈಗೊಳ್ಳದಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಜೊತೆಗೆ ಗಡವನ್ನು ವಿಸ್ತರಿಸಲು ಒಪ್ಪಿಗೆ ನೀಡಿತ್ತು. ಈ ಬೆನ್ನಲ್ಲೇ ರಾಜ್ಯ ಸರ್ಕಾರದಿಂದ ಸೆಪ್ಟೆಂಬರ್.15ರವರೆಗೆ ಹೆಚ್ ಎಸ್ ಆರ್ ಪಿ ನಂಬರ್ ಪ್ಲೇಟ್ ಅಳವಡಿಕೆಗೆ ಗಡುವು ವಿಸ್ತರಣೆ ಮಾಡಿ ಆದೇಶಿಸಿದೆ. ಈ ಮೂಲಕ ವಾಹನ ಸವಾರರಿಗೆ ಬಿಗ್ ರಿಲೀಫ್ ನೀಡಿದೆ.

ನೀಟ್ ಪರೀಕ್ಷೆ ಅಕ್ರಮ: ಕಾಂಗ್ರೇಸ್ ದೇಶಾದ್ಯಂತ ಪ್ರತಿಭಟನೆಗೆ ಕರೆ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸರ್ಕಾರದ ನೀಟ್ ಅಕ್ರಮದ ವಿರುದ್ಧ ಕಾಂಗ್ರೇಸ್ ಪಕ್ಷ ಸಿಡಿದೆದ್ದಿದೆ. ನೀಟ್ ಅಕ್ರಮ ಖಂಡಿಸಿ, ಅನ್ಯಾಯವಾದಂತ ವಿದ್ಯಾರ್ಥಿಗಳಿಗೆ ನ್ಯಾಯದೊರಕಿರಿಸಿ ಕೊಡುವಂತೆ ಆಗ್ರಹಿಸಿ, ಜೂನ್.21ರಂದು ದೇಶಾದ್ಯಂತ ಪ್ರತಿಭಟನೆಗೆ ಕರೆ ನೀಡಿದೆ. ಈ ಕುರಿತಂತೆ ಪತ್ರಿಕಾ ಪ್ರಕಟಣೆಯಲ್ಲಿ ಮಾಹಿತಿ ಹಂಚಿಕೊಂಡಿರುವಂತ ಎಐಸಿಸಿ ಜನರಲ್ ಸೆಕ್ರೇಟರಿ ಕೆ.ಸಿ ವೇಣುಗೋಪಾಲ್ ಅವರು, ನೀಟ್-ಯುಜಿ 2024 ನಡವಳಿಕೆ, ಫಲಿತಾಂಶಗಳ ಸುತ್ತಲಿನ ಹಲವಾರು ದೂರುಗಳು ಮತ್ತು ಕಳವಳಗಳನ್ನು ಪರಿಹರಿಸುವ ತುರ್ತು ಅವಶ್ಯಕತೆಯಿದೆ. ನಿಮಗೆ ತಿಳಿದಿರುವಂತೆ, ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್ಟಿಎ) ನೀಟ್-ಯುಜಿ 2024ರ ಫಲಿತಾಂಶಗಳನ್ನು ಜೂನ್ 4, 2024 ರಂದು ಬಿಡುಗಡೆ ಮಾಡಿತು. ಆಕಾಂಕ್ಷಿಗಳ ಅಂಕಗಳು ಹೆಚ್ಚಾದ ನಂತರ ಅಕ್ರಮಗಳು ಪ್ರಶ್ನೆ ಪತ್ರಿಕೆ ಸೋರಿಕೆಯ ಆರೋಪಗಳಿಂದ ಫಲಿತಾಂಶಗಳು ವಿದ್ಯಾರ್ಥಿಗಳ ಜೀವನ ಹಾಳು ಮಾಡಿದ್ದಾವೆ ಅಂತ ಕಿಡಿಕಾರಿದ್ದಾರೆ. ಹೆಚ್ಚಿದ ಅಂಕಗಳು ಮತ್ತು ಅಕ್ರಮಗಳ ಬಗ್ಗೆ ಗಮನಾರ್ಹ ಕಳವಳಗಳಿವೆ. ವಿಧಾನವನ್ನು ಬಹಿರಂಗಪಡಿಸದೆ ಗ್ರೇಸ್ ಅಂಕಗಳನ್ನು ನೀಡುವುದು ಮತ್ತಷ್ಟು ಅನುಮಾನಗಳನ್ನು ಹುಟ್ಟುಹಾಕುತ್ತದೆ. ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ತಾಂತ್ರಿಕ ದೋಷಗಳು, ದುಷ್ಕೃತ್ಯ, ಅನ್ಯಾಯದ ವಿಧಾನಗಳಿಂದ ಪರೀಕ್ಷೆಯು ತೊಂದರೆಗೀಡಾಗಿದೆ. ಬಿಹಾರ, ಗುಜರಾತ್, ಹರಿಯಾಣದಲ್ಲಿ ನಡೆದ ಬಂಧನಗಳಿಂದ ಸಂಘಟಿತ ಭ್ರಷ್ಟಾಚಾರವು ಸ್ಪಷ್ಟವಾಗಿದೆ, ಇದು ಬಿಜೆಪಿ ಆಡಳಿತದ ರಾಜ್ಯಗಳಲ್ಲಿನ ದುಷ್ಕೃತ್ಯದ ಮಾದರಿಯನ್ನು ಬಹಿರಂಗಪಡಿಸುತ್ತದೆ ಎಂದಿದ್ದಾರೆ.

ಬದುಕು ಸುಂದರವಾದದ್ದು

• ಉದಯವಾಹಿನಿ, ಬೆಂಗಳೂರು

ನಟ ದರ್ಶನ್ ತೂಗುದೀಪ ಕೊಲೆ ಪ್ರಕರಣದಲ್ಲಿ ಪೊಲೀಸರ ವಶದಲ್ಲಿದ್ದಾರೆ. ಆದರೆ, ಅವರ ಅಭಿಮಾನಿಗಳು ಮಾತ್ರ ತನ್ನ ಬಾಸ್ ಪರವಾಗಿ ನಿಂತಿದ್ದು, ಅವರ ವಿರುದ್ಧ ಮಾತನಾಡುವವರ ಕಿಡಿ ಕಾರುತ್ತಿದ್ದಾರೆ. ಜೊತೆಗೆ ಪ್ರಕರಣದ ಬಗ್ಗೆ ನೆಗೆಟಿವ್ ಆಗಿ ಮಾತನಾಡುವವರಿಗೆ ಬೆದರಿಕೆಯನ್ನು ಹಾಕುತ್ತಿದ್ದಾರೆ. ನಟ ದರ್ಶನ್ ಬಂಧನದ ಬಳಿಕ ನಟನ ಅಭಿಮಾನಿಗಳಿಗೆ ಬುದ್ಧಿವಾರ ಹೇಳಿದ್ದ ಬಿಗ್ ಬಾಸ್ ಕನ್ನಡ 4 ನೇ ಸೀಸನ್‌ನ ವಿನ್ನರ್ ಮತ್ತು ನಟ ಪ್ರಥಮ್ ಅವರಿಗೆ ಕೆಲ ಕಿಡಿಗೇಡಿಗಳು ಬೆದರಿಕೆ ಕರೆ ಮಾಡಿದ್ದಾರೆ. ಹೀಗಾಗಿ ನಟ ಪ್ರಥಮ್ ಪೊಲೀಸ್ ಠಾಣೆ ಮೆಟ್ಟಿಲೇರಿದ್ದು, ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವ ಹಬ್ಬದ ಪ್ರಯುಕ್ತ 2024ರ ನವಂಬರ್ 16ನೇ ತಾರೀಖು ಉತ್ತರಖಂಡ್ ರಾಜ್ಯದ ಹರಿದ್ವಾರ, ಗಂಗಾನದಿ ತೀರದಲ್ಲಿ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಉತ್ತರಪ್ರದೇಶ ಕಾಶಿಯಲ್ಲಿ ಮತ್ತು ನೇಪಾಳದಲ್ಲಿ ಅಂತರಾಷ್ಟ್ರೀಯ ಕನ್ನಡ ರಾಜ್ಯೋತ್ಸವ ಆಚರಿಸಲಾಗಿತ್ತು 2024ರ ನವಂಬರ್ 16ನೇ ತಾರೀಖು ಹರಿದ್ವಾರ, ಗಂಗಾನದಿ ತೀರದಲ್ಲಿ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಹರಿದ್ವಾರದಲ್ಲಿ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವದಲ್ಲಿ ಭಾಗವಹಿಸುವ ಕನ್ನಡಾಭಿಮಾನಿಗಳು 15-8-2024ರ ಒಳಗೆ ಕಛೇರಿಯಲ್ಲಿ ನೋಂದಣಿ ಮಾಡಿಕೊಳ್ಳಬೇಕು.

ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಕಾರ್ಯ ಕ್ರಮದಲ್ಲಿ ಭಾಗವಹಿಸಲು ಹೋಗಿ, ಬರಲು ವಿಮಾನ ಪ್ರಯಾಣ, ಊಟ, ವಸತಿ ನಾಲ್ಕು ದಿನಗಳ ಪ್ರವಾಸವೆಚ್ಚ 25000ಸಾವಿರ ಪಾವತಿ ಮಾಡಬೇಕು.15ನೇ ನವಂಬರ್ ಬೆಂಗಳೂರಿನಿಂದ ಹರಿದ್ವಾರಕ್ಕೆ ವಿಮಾನದಲ್ಲಿ ಪ್ರಯಾಣ 16ನೇ ತಾರೀಖು ಬೆಳಗ್ಗೆ ನಯನದೇವಿ, ಮಾನಸದೇವಿ ಗಂಗಾರತಿ ವೀಕ್ಷಣೆ ನಂತರ ಸಂಜೆ 6ಗಂಟೆಗೆ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಸಭಾ ಕಾರ್ಯಕ್ರಮ. 17ನೇ ತಾರೀಖು ಋಷಿಕೇಶ (ರಾಮ ಝೂಲಾ, ಲಕ್ಷಣ ಝೂಲಾ) ವೀಕ್ಷಣೆ ಕಾರ್ಯಕ್ರಮ. ಕನ್ನಡ ನಾಡಿನ ಹೆಸರಾಂತ ಕಲಾವಿದರು ಮತ್ತು ಸಾಹಿತಿಗಳು ಗಣ್ಯಮಹನೀಯರುಗಳು ಭಾಗವಹಿಸಲಿದ್ದಾರೆ. ಕನ್ನಡ ನಾಡಿಗೆ ಗಣನೀಯ ಸೇವೆ ಸಲ್ಲಿಸಿದ ಸಾಧಕ/ಸಾಧಕಿಯರಿಗೆ ಸನ್ಮಾನಿಸಲಾಗುತ್ತಿದೆ.

> 2500ವರ್ಷಗಳ ಇತಿಹಾಸವಿರುವ ಕನ್ನಡ ಭಾಷೆ. ವಿಶ್ವದಲ್ಲಿ ಎಲ್ಲಾ ಕಡೆಯಲ್ಲಿ ಕನ್ನಡಿಗರು ನೆಲಸಿದ್ದಾರೆ. ಮನೆ, ಮನಗಳಲ್ಲಿ ಕನ್ನಡ ಭಾಷೆ ಉಳಿಸಿ, ಬೆಳಸಬೇಕು ಎಂಬ ಉದ್ದೇಶದಿಂದ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪ್ರತಿವರ್ಷ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಅದ್ದೂರಿಯಾಗಿ ಅಚರಿಸಿಕೊಂಡು ಬರಲಾಗುತ್ತಿದೆ.
> ಅಧ್ಯಕ್ಷರಾದ ಎ.ಅಮೃತ್ ರಾಜ್

ಸಿದ್ದು ಸರ್ಕಾರ ಪತನ ಸ್ಫೋಟಕ ಭವಿಷ್ಯ

• ಉದಯವಾಹಿನಿ, ಬೆಂಗಳೂರು

ಉದಯವಾಹಿನಿ ಚಿತ್ರ

ಪ್ರಕೃತಿ ವಿಕೋಪ, ರಾಜ್ಯ ರಾಜಕಾರಣ, ದೇಶದ ರಾಜಕಾರಣ, ದೇಶ ವಿದೇಶದ ಸಂಘರ್ಷಗಳು, ಬಾಂಬ್ ಸ್ಫೋಟ ಸೇರಿದಂತೆ ಹಲವು ವಿಚಾರಗಳಬಗ್ಗೆ ಸ್ಫೋಟಕ ಭವಿಷ್ಯ ನುಡಿಯುವ ಕೋಡಿಮಠದ ಡಾ. ಶ

ಕರಾರಿನಂತೆ ಸಂಸ್ಕರಿಸಿದ ನೀರು ಹರಿಸಿ: ಸಚಿವ ಬಿ.ಎಸ್. ಸುರೇಶ್

● ಕೆ.ಸಿ. ವ್ಯಾಲಿ ಸಂಸ್ಕರಣ ಘಟಕದಿಂದ ಕರಾರಿನಂತೆ 310 ದಶಲಕ್ಷ ಲೀಟರ್ ನೀರನ್ನು ಕೆರೆಗಳಿಗೆ ತುಂಬಿಸಬೇಕು ಎಂದು ತಾಕೀತು

• ಉದಯವಾಹಿನಿ ಕೋಲಾರ

ನಗರದ ಕೋರಮಂಗಲ ಮತ್ತು ಚಲ್ಲಟ್ಟದಿಂದ ತ್ಯಾಜ್ಯ ನೀರನ್ನು ಸಂಸ್ಕರಿಸಿ ಕೋಲಾರ ಮತ್ತು ಚಿಕ್ಕ ಬಳ್ಳಾಪುರದ 126 ಕೆರೆಗಳನ್ನು ತುಂಬಿಸಲು ಈ ಹಿಂದೆ ಆಗಿರುವ ಕರಾರಿನಂತೆ ನೀರನ್ನು ಹರಿಸಬೇಕು ಎಂದು ನಗರಾಭಿವೃದ್ಧಿ ಸಚಿವ ಬಿ.ಎಸ್.ಸುರೇಶ್ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ನೀರಾವರಿ ಇಲಾಖೆ ಅಧಿಕಾರಿಗಳಿಗೆ ಸೂಚನೆ

ವಿಧಾನಸೌಧದ ಸಚಿವರ ಕಚೇರಿಯಲ್ಲಿ ಚಿಕ್ಕ ಬಳ್ಳಾಪುರ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ ಸುಧಾಕರ್, ಕೋಲಾರ ಜಿಲ್ಲೆ ಶಾಸಕರು ಹಾಗೂ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಕೆ.ಸಿ. ವ್ಯಾಲಿ ಸಂಸ್ಕರಣ ಘಟಕದಿಂದ ಕರಾರಿನಂತೆ 310 ದಶಲಕ್ಷ ಲೀಟರ್ ನೀರನ್ನು ಕೆರೆಗಳಿಗೆ ತುಂಬಿಸಬೇಕು ಎಂದು ತಾಕೀತು ಮಾಡಿದರು. ಕಳೆದ ಕೆಲವು ತಿಂಗಳಿನಿಂದ 140 ದಶಲಕ್ಷ ಲೀಟರ್ ನೀರು ಮಾತ್ರ ನೀಡಲಾಗುತ್ತಿದೆ. ಕೋಲಾರ ಜಿಲ್ಲೆಯಲ್ಲಿ ಒಂದು ವರ್ಷದಿಂದ ಸತತ ಬರಗಾಲವಿದ್ದು, ಮಳೆ ಪ್ರಮಾಣ ಕಡಿಮೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಕೋಲಾರ ಜಿಲ್ಲೆ ಮತ್ತು ಚಿಂತಾಮಣಿ ತಾಲ್ಲೂಕಿನ ಕೆರೆಗಳಿಗೆ ಹರಿಸಬೇಕಾದ ಸಂಸ್ಕರಿಸಿದ ನೀರನ್ನು ಹೊಸಕೋಟೆ ಮತ್ತು ಆನೇಕಲ್ ಪಟ್ಟಣಗಳಿಗೆ ಬಿಡುತ್ತಿರುವುದು ಸರಿಯಾದ ಕ್ರಮವಲ್ಲ ಎಂದು ಸಣ್ಣ ನೀರಾವರಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಕೆ.ಸಿ. ವ್ಯಾಲಿ ತ್ಯಾಜ್ಯನಿರು ಸಂಸ್ಕರಣದ ಎರಡು ಘಟಕಗಳಲ್ಲಿ ಹೊಸ ಯಂತ್ರೋಪಕರಣಗಳಿವೆ. ಅದರಲ್ಲಿ ಒಂದು ದುರಸ್ತಿಯಲ್ಲಿದೆ ಎಂದು ಹೇಳುತ್ತೀರಿ ಇನ್ನೊಂದು ಯಂತ್ರ ದ ಮೂಲಕ ಆನೇಕಲ್ ತಾಲ್ಲೂಕಿಗೆ ಏಕೆ ನೀರು ಹರಿಸುತ್ತಿದ್ದೀರಿ ಎಂದು ಏರು ಧ್ವನಿಯಲ್ಲಿ ಸಣ್ಣ ನೀರಾವರಿ ಇಲಾಖೆಯ ಮುಖ್ಯ ಅಭಿಯಂತರರಿಗೆ ಸಚಿವರು ಪ್ರಶ್ನಿಸಿದರು. ಈ ವೇಳೆ ಮಧ್ಯ ಪ್ರವೇಶಿಸಿದ ಸಚಿವರಾದ ಬಿ. ಎಸ್. ಸುರೇಶ ಮತ್ತು ಡಾ. ಎಂ. ಸಿ. ಸುಧಾಕರ್, ಬೆಂಗಳೂರು ಜಲಮಂಡಳಿ ಅಧ್ಯಕ್ಷ ಅವರನ್ನು ಪ್ರಶ್ನಿಸಿದರು.

ಉದಯವಾಹಿನಿ ಚಿತ್ರ

ಕೆ.ಸಿ. ವ್ಯಾಲಿ ಟಕದಿಂದ ಸಂಸ್ಕರಿಸಿದ ತ್ಯಾಜ್ಯ ನೀರು ಕೋಲಾರ ತಾಲ್ಲೂಕಿನ ನರಸಾಪುರ ಕೆರೆ ನಂತರ ಮಾಲೂರು ಕೆರೆಗಳು ತದನಂತರ ಬಂಗಾರಪೇಟೆ, ಕೆ.ಜಿ.ಎಫ್. ಮುಳಬಾಗಿಲು ಮತ್ತು ಶ್ರೀನಿವಾಸಪುರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ಕೆರೆಗಳಿಗೆ ಹರಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಇದಕ್ಕೆ ಉತ್ತರಿಸಿದ ಅಧ್ಯಕ್ಷ ರಾಮ್ ಮನೋಹರ್ ಪ್ರಸಾದ್, ತ್ಯಾಜ್ಯನಿರನ್ನು ಸಂಸ್ಕರಿಸಿ ನೀರನ್ನು ಸಣ್ಣ ನೀರಾವರಿ ಇಲಾಖೆಯ ಕೆ.ಸಿ. ವ್ಯಾಲಿ ಘಟಕಕ್ಕೆ ಹರಿಸುವುದಷ್ಟೆ ನಮ್ಮ ಕೆಲಸ ಯಾವ ಜಿಲ್ಲೆಗೆ ಯಾವ ತಾಲ್ಲೂಕಿಗೆ ಎಷ್ಟು ನೀರು ಹರಿಸಬೇಕು ಎಂಬುದು ನಮ್ಮ ಕೆಲಸವಲ್ಲ ಎಂದರು.

ಕೋಲಾರ ಜಿಲ್ಲೆಗೆ ಮೊದಲು ನೀರು ಹರಿಸಿ: ಸಚಿವದ್ವಯರು ಸೇರಿ ಜಿಲ್ಲೆಯ ಶಾಸಕರು ಕೋಲಾರ ಜಿಲ್ಲೆಗೆ ಮೊದಲು ನೀರನ್ನು ಹರಿಸಿ ನಂತರ ಬೇಕಿದ್ದರೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ಮತ್ತು ಆನೇಕಲ್‌ಗೆ ನೀಡಲಿ ಎಂದು ಒಕ್ಕೊರಲಿನಿಂದ ತಾಕೀತು ಮಾಡಿದರು. ಬೆಂಗಳೂರು ಜಲಮಂಡಳಿ ಕೈಗೆತ್ತಿಕೊಂಡಿರುವ 218 ದಶಲ ಲೀಟರ್ ಸಂಸ್ಕರಣ ಟಕದ ಉನ್ನತಿಕರಣ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಜಲಮಂಡಳಿ ಅಧ್ಯರಿಗೆ ಸಚಿವ ಸುರೇಶ ಸೂಚಿಸಿದರು. ವಿಧಾನ ಪರಿಷತ್ ಸದಸ್ಯ ನಸೀರ್ ಅಹಮದ್, ಕೋಲಾರ ಜಿಲ್ಲೆಯ ಶಾಸಕರಾದ ಕೆ.ವೈ.ನಂಜೇಗೌಡ, ಎಸ್.ಎನ್. ನಾರಾಯಣಸ್ವಾಮಿ, ಕೊತ್ತೂರು ಮಂಜುನಾಥ, ಸಮೃದ್ಧಿ ಮಂಜುನಾಥ, ಎಂ.ಎಲ್. ಅನಿಲ್ ಕುಮಾರ್, ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ದೀಪ ಚೋಳನ್, ಕೋಲಾರ ಜಿಲ್ಲಾಧಿಕಾರಿ ಅಕ್ರಂಪಾಷಾ, ಸಣ್ಣ ನೀರಾವರಿ ಇಲಾಖೆಯ ಮುಖ್ಯ ಅಭಿಯಂತರ ರಾವನ್‌ಇತರರು ಇದ್ದರು.

ಅಧಿಕಾರಿಗಳ ಸಭೆಯನ್ನು ಕರೆದು ಪರಿಶೀಲನೆ

ಸಣ್ಣ ನೀರಾವರಿ ಸಚಿವ ಎನ್.ಎಸ್ ಬೋಸರಾಜುಗೆ ಕರೆ ಮಾಡಿದ ಸುರೇಶ ಮತ್ತು ಡಾ. ಎಂ.ಸಿ. ಸುಧಾಕರ್, ಸಣ್ಣ ನೀರಾವರಿ ಇಲಾಖೆ ಮುಖ್ಯ ಅಭಿಯಂತ ಮತ್ತು ಅಧಿಕಾರಿಗಳು ಮಾಡಿರುವ ಅಚಾತುರ್ಯವನ್ನು ಗಮನಕ್ಕೆ ತಂದರು. ನಿಮ್ಮ ಇಲಾಖೆ ಮುಖ್ಯ ಅಭಿಯಂತರರು, ಅಧಿಕಾರಿಗಳು ಮೂಲ ಒಪ್ಪಂದ ಉಲ್ಲಂಸಿ ಕೋಲಾರ ಜಿಲ್ಲೆಗೆ ಹರಿಯುವ ಸಂಸ್ಕರಿಸಿದ ತ್ಯಾಜ್ಯನಿರಿನ ದೊಡ್ಡಕೊಳವೆಯಲ್ಲಿ ರಂಧ್ರ ಮಾಡುವ ಮೂಲಕ ಹೊಸಕೋಟೆ ತಾಲೂಕಿನ ಕೆರೆಗಳಿಗೆ ಹರಿಸುತ್ತಿದ್ದಾರೆ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಬೋಸರಾಜು, ಈ ಬಗ್ಗೆ ಅಧಿಕಾರಿಗಳ ಸಭೆಯನ್ನು ಕರೆದು ಪರಿಶೀಲಿಸುವುದಾಗಿ ಹೇಳಿದರು.

ಕಿಡಿಗೇಡಿಗಳಿಂದ ಸರ್ಕಾರಿ ಜಾಗ ಒತ್ತುವರಿಗೆ ಪ್ರಯತ್ನ

• ಉದಯವಾಹಿನಿ, ಬಂಗಾರಪೇಟೆ

ಕೆಲ ಕಿಡಿಗೇಡಿಗಳು ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಳ್ಳಲು ಸಕ್ಕನಹಳ್ಳಿ ಗ್ರಾಮದಲ್ಲಿರುವ ಸ್ಮಶಾನ ಜಾಗವನ್ನು ಮಹೇಶ್ ರೆಡ್ಡಿ ಎಂಬುವವರ ಹೆಸರಿಗೆ ನಕಲಿ ಖಾತೆಗಳನ್ನು ಮಾಡಲು ಮುಂದಾಗಿದ್ದಾರೆ ಎಂದು ಗ್ರಾಮ ಪಂಚಾಯಿತಿ ಸದಸ್ಯ ಕುಪೇಂದ್ರ ದೂರು ನೀಡಿದ ಹಿನ್ನೆಲೆ ಸ್ಥಳಕ್ಕೆ ತಹಶೀಲ್ದಾರ್ ರಶ್ಮಿ ಭೇಟಿ ಕೊಟ್ಟು ಪರಿಶೀಲನೆ ನಡೆಸಿದರು.

ಈ ವೇಳೆ ತಹಶೀಲ್ದಾರ್ ರಶ್ಮಿ ಮಾತನಾಡಿ,ಸಕ್ಕನಹಳ್ಳಿ ಗ್ರಾಮದ ಸರ್ವೆ ನಂ.19 ರಲ್ಲಿ ಪೌತಿ ಖಾತೆಗಾಗಿ ಅರ್ಜಿಯನ್ನು ಸಲ್ಲಿಸಿದ್ದರು. ಈ ವೇಳೆ ಗ್ರಾಮಸ್ಥರಿಂದ ತಕರಾಲು ಅರ್ಜಿ ಬಂದ ಹಿನ್ನೆಲೆ, ಕೆಲವೊಂದು ಸರ್ವೇ ನಂಬರಗಳಲ್ಲಿ ಸ್ಮಶಾನ ಹಾಗೂ ಕೆರೆಕುಂಟೆಗಳಿವೆ ಎಂದು ಗಮನಕ್ಕೆ ಬಂದ ಹಿನ್ನೆಲೆ ಸ್ಥಳಕ್ಕೆ ಇಂದು ಬೇಟಿ ನೀಡಲಾಗಿದೆ ಎಂದರು.

ಸ್ಥಳೀಯ ಗ್ರಾಮಸ್ಥರಿಂದ ಮಾಹಿತಿಯನ್ನು ಪಡೆಯಲಾಗಿದೆ ಹಾಗೂ ನಮಗೆ ಕಂಡು ಬಂದಂತೆ ಸರ್ವೇ ನಂಬರ್ 19ರಲ್ಲಿ ಸ್ಮಶಾನ ಇರುವುದು ಕಂಡು ಬಂದಿದೆ ಸುಮಾರು ಜನರನ್ನು ಇಲ್ಲಿ ಉಳಿದ್ದಾರೆ.ಈ ಒಂದು ಜಾಗದ ಸರ್ವೇ ದಾಖಲೆಗಳು ಹಾಗೂ ಕಂದಾಯ ಇಲಾಖೆಯ ದಾಖಲೆಗಳನ್ನು ಪರಿಶೀಲಿಸಿ ಗ್ರಾಮಕ್ಕೆ ಸ್ಮಶಾನ ಜಾಗವನ್ನು ಉಳಿಸಿಕೊಡುವ ಕೆಲಸವನ್ನು ಮಾಡುತ್ತೇವೆ ಎಂದು ತಿಳಿಸಿದರು.

ಉದಯವಾಹಿನಿ ಚಿತ್ರ

ಈ ವೇಳೆ ಸಕ್ಕನಹಳ್ಳಿ ಗ್ರಾಮದ ಸದಸ್ಯರಾದ ಕುಪೇಂದ್ರ ಮಾತನಾಡಿ, ಗ್ರಾಮದ ಸ್ಮಶಾನ ಜಾಗವನ್ನು ನಕಲಿ ಖಾತೆಗಳನ್ನು ಮಾಡಿ ಜಮೀನುಗಳನ್ನು ಹೊಡೆಯಲು ಪ್ರಯತ್ನ ಮಾಡುತ್ತಿರುವುದು ಕಂಡುಬಂದ ಹಿನ್ನೆಲೆ ಯಾವುದೇ ಕಾರಣಕ್ಕೂ ಗ್ರಾಮದ ಸ್ಮಶಾನ ಜಾಗವಾದ ಸರ್ವೇ ನಂಬರ್ 19ನ್ನು ಖಾತೆ ಮಾಡಬಾರದೆಂದು ತಕರಾರು ಅರ್ಜಿ ಸಲ್ಲಿಸಲಾಗಿತ್ತು ಅದರಂತೆ ಎಂದು ತಹಶೀಲ್ದಾರ್ ರಶ್ಮಿ ರವರು ಭೇಟಿಕೊಟ್ಟು ಸ್ಥಳ ಪರಿಶೀಲನೆ ಮಾಡಿ ಸರ್ಕಾರಿ ಜಾಗ ಹಾಗೂ ಸ್ಮಶಾನವನ್ನು ಉಳಿಸಿಕೊಡುತ್ತೇವೆ ಎಂದು ಭರವಸೆ ನೀಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಗ್ರಾಮ ಲೇಕ್ಕಾಧಿಕಾರಿ ರಂಜಿತಾ ಮತ್ತು ಸಂಖ್ಯೆಯಲ್ಲಿ ಗ್ರಾಮಸ್ಥರು ಮುಖಂಡರು ಇದ್ದರು.

ಅಪಾಯದ ಸ್ಥಿತಿಯಲ್ಲಿ 678 ಶಾಲಾ ಕೊಠಡಿಗಳು

• ಉದಯವಾಹಿನಿ, ಚಿಕ್ಕಬಳ್ಳಾಪುರ

ಮಳೆಗಾಲ ಆರಂಭವಾಗಿದೆ. ಎಲ್ಲಾ ಇಲಾಖೆಗಳು ಸಹ ತಮ್ಮ ಇಲಾಖೆಗೆ ಸಂಬಂಧಿಸಿದಂತೆ ಮಳೆಗಾಲದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುತ್ತಿದೆ. ಶಿಕ್ಷಣ ಇಲಾಖೆ ಸಹ ಮಳೆಗಾಲದ ಮುನ್ನೆಚ್ಚರಿಕೆ ಕ್ರಮವಾಗಿ ಶಿಥಿಲವಾಗಿರುವ ಶಾಲಾ ಕೊಠಡಿಗಳ ಪಟ್ಟಿ ಮಾಡಿದೆ. ಅವುಗಳಲ್ಲಿ ಅಪಾಯದ ಸ್ಥಿತಿ ಯಲ್ಲಿರುವ ಕೊಠಡಿಗಳನ್ನು ನೆಲಸಮ ಮಾಡಿದರೆ, ಹಾಳಾದ ಕೊಠಡಿಗಳನ್ನು ದುರಸ್ತಿ ಮಾಡಿಸಲು ಮುಂದಾಗಿದೆ.

ಜಿಲ್ಲೆಯ 437 ಶಾಲೆಗಳಲ್ಲಿನ 678 ಕೊಠಡಿಗಳು ದುರಸ್ತಿಗೆ ಬಂದಿವೆ. ಹೀಗೆ ದುರಸ್ತಿಗೆ ಬಂದಿರುವ ಶಾಲೆಗಳಲ್ಲಿ ಒಟ್ಟು 2,174 ಕೊಠಡಿಗಳು ಇವೆ. ಇವುಗಳ ಪೈಕಿ 1,496 ಕೊಠಡಿಗಳು ಉತ್ತಮ ಸ್ಥಿತಿಯಲ್ಲಿ ಇವೆ. ಉಳಿದ ಕೊಠಡಿಗಳು ದುರಸ್ತಿಯ ಭಾಗ್ಯ ಕಾಣಬೇಕಾಗಿದೆ.

ಉದಯವಾಹಿನಿ ಚಿತ್ರ

ಹೆಚ್ಚು ಹಣದ ಅಗತ್ಯ

ಕೆಲವು ಕೊಠಡಿಗಳು ಸಣ್ಣ ಪುಟ್ಟ ರಿಪೇರಿ ಇದ್ದರೆ ಮತ್ತೊಂದಿಷ್ಟು ಕೊಠಡಿಗಳ ದುರಸ್ತಿಗೆ ಹೆಚ್ಚು ಹಣದ ಅಗತ್ಯವಿದೆ. ಮಳೆ ನೀರು ಸೋರುವುದು, ಚಾವಣಿ ಕಿತ್ತು ಬಂದಿರುವುದು, ನೆಲಹಾಸು ಹಾಳಾಗಿರುವುದು, ಸುಣ್ಣ ಬಣ್ಣ ಅಗತ್ಯವಿರುವುದು-ಹೀಗೆ ನಾನಾ ರೀತಿ ದುರಸ್ತಿಗಳನ್ನು ಇಲಾಖೆ ಮಾಡಿಸಬೇಕಾಗಿದೆ.

ಜಿಲ್ಲೆಯ ಗೌರಿಬಿದನೂರು ವಿಧಾನಸಭಾ ಕ್ಷೇತ್ರದಲ್ಲಿಯೇ ಅತಿ ಹೆಚ್ಚು ಕೊಠಡಿಗಳು ದುರಸ್ತಿಗೆ ಬಂದಿವೆ. ಈ ತಾಲ್ಲೂಕಿನಲ್ಲಿ 262 ಕೊಠಡಿಗಳು ದುರಸ್ತಿ ಕೈಗೊಳ್ಳಬೇಕಾಗಿದೆ. ಶಿಡ್ಲಘಟ್ಟ ಹೊರತುಪಡಿಸಿ ಉಳಿದ ತಾಲ್ಲೂಕುಗಳಲ್ಲಿ ದುರಸ್ತಿಗೆ ಬಂದಿರುವ ಕೊಠಡಿಗಳ ಸಂಖ್ಯೆ 100ರ ಒಳಗೆ ಇದೆ.

10 ಲಕ್ಷ ಮಂಜೂರು

ನಂಜುಂಡಪ್ಪ ವರದಿಯ ಪ್ರಕಾರ ಬಾಗೇಪಲ್ಲಿ ಮತ್ತು ಗೌರಿಬಿದನೂರು ಅತಿ ಹಿಂದುಳಿದ ತಾಲ್ಲೂಕುಗಳ ಪಟ್ಟಿಯಲ್ಲಿವೆ. ಈ ಕಾರಣದಿಂದ 44 ಶಾಲೆಗಳ 47 ಕೊಠಡಿಗಳ ದುರಸ್ತಿಗೆ ಸರ್ಕಾರದಿಂದ ವಿಶೇಷ ಅನುದಾನ ದೊರೆತಿದೆ. ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ 34 ಶಾಲೆಗಳಲ್ಲಿನ ಕೊಠಡಿಗಳ ದುರಸ್ತಿಗೆ ತಲಾ 10 ಲಕ್ಷ ಸಹ ಮಂಜೂರಾಗಿದೆ ಎನ್ನುತ್ತದೆ ಶಿಕ್ಷಣ ಇಲಾಖೆ.

ಕುಡುಗೋಲು ಕಣ ರಕ್ತಹೀನತೆ ವಿರುದ್ಧದ ಹೋರಾಟ

• ಉದಯವಾಹಿನಿ, ಮೈಸೂರು

ಚಾಮರಾಜನಗರ, ಮೈಸೂರು ಹಾಗೂ ಕೊಡಗು ಜಿಲ್ಲೆಗಳ ಬುಡಕಟ್ಟು ಜನರಲ್ಲಿ ದೃಢಪಟ್ಟಿರುವ ಕುಡುಗೋಲು ಕಣ ರಕ್ತಹೀನತೆ' (ಸಿಕಲ್ ಸೆಲ್ ಅನೀಮಿಯಾ) ಕಾಯಿಲೆ ವಿರುದ್ಧದ ಹೋರಾಟಕ್ಕೆ ರಾಜ್ಯ ಸರ್ಕಾರದಿಂದ ಜಾರಿಗೊಳಿಸಿರುವ ಪ್ರಾಜೆಕ್ಟ್ ಚಂದನ ಕಾರ್ಯಕ್ರಮಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಸಚಿವ ದಿನೇಶ್ ಗುಂಡೂರಾವ್ ಇಲ್ಲಿ ಚಾಲನೆ ನೀಡಿದರು.

ಉದಯವಾಹಿನಿ ಚಿತ್ರ

ಚಂದನ ಕಾರ್ಯಕ್ರಮಕ್ಕೆ ಚಾಲನೆ

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಆರೋಗ್ಯ ಇಲಾಖೆ ಹಾಗೂ ಪರಿಶಿಷ್ಟ ವರ್ಗ ಗಳ ಕಲ್ಯಾಣ ಇಲಾಖೆ ಸಹಯೋಗದಲ್ಲಿ ಇಲ್ಲಿನ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಬುಧವಾರ ನಡೆದ ರಾಜ್ಯಮಟ್ಟದ ಸಿಕಲ್ ಸೆಲ್ ಅನೀಮಿಯಾ ನಿರ್ಮೂಲನೆ ಕಾರ್ಯಕ್ರಮದಲ್ಲಿ ಯೋಜನೆಯನ್ನು ಸಚಿವರು ಉದ್ಘಾಟಿಸಿದರು.

ಈ ಕಾಯಿಲೆಯ ತಪಾಸಣೆ ಕಾರ್ಯಕ್ಕೆ ಹೋದ ವರ್ಷ ಮೈಸೂರಿನಲ್ಲೇ ಚಾಲನೆ ನೀಡಲಾಗಿತ್ತು. ಕೊಡಗು, ಉತ್ತರ ಕನ್ನಡ, ಚಿಕ್ಕಮಗಳೂರು, ಉಡುಪಿ, ಮೈಸೂರು, ಚಾಮರಾಜನಗರ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ 55,503 ಮಂದಿ ಆದಿವಾಸಿಗಳನ್ನು ತಪಾಸಣೆಗೆ ಒಳಪಡಿಸಲಾಗಿದ್ದು, 2,018 ಮಂದಿಗೆ ರೋಗ ಲಕ್ಷಣ ಕಂಡುಬಂದಿದೆ. ಇವರಲ್ಲಿ ಮೈಸೂರಿನಲ್ಲಿ 86, ಚಾಮರಾಜನಗರದಲ್ಲಿ 75 ಹಾಗೂ ಕೊಡಗು ಜಿಲ್ಲೆಯಲ್ಲಿ 31 ಮಂದಿಯಲ್ಲಿ ಈ ರೋಗವಿರುವುದು ದೃಢಪಟ್ಟಿದೆ. ಅವರಿಗೆ ನೆರವಾಗುವುದು 'ಚಂದನ ಯೋಜನೆ'ಗೆ ಉದ್ದೇಶವಾಗಿದೆ.

ಒಪ್ಪಂದ ಪತ್ರ ವಿನಿಮಯ

ರೋಗಿಗಳಿಗೆ ಮುಂದಿನ 2 ವರ್ಷಗಳ ಅವಧಿಗೆ ಸಂಪೂರ್ಣ ತಪಾಸಣೆ, ತರಬೇತಿ, ಜಾಗೃತಿ, ಮಾದರಿ ಸಾರಿಗೆ ಮತ್ತು ಸಂಪರ್ಕ ಸೇವೆಗಳಿಗಾಗಿ ಐಐಎಸ್ಸಿ (ಭಾರತೀಯ ವಿಜ್ಞಾನ ಸಂಸ್ಥೆ)ಯು ಮೈಸೂರು, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗಳನ್ನು ದತ್ತು ತೆಗೆದುಕೊಂಡಿದ್ದು, ಈ ಸಂಬಂಧ ಆರೋಗ್ಯ ಇಲಾಖೆ ಜೊತೆ ಮಾಡಿಕೊಂಡಿರುವ ಒಪ್ಪಂದ ಪತ್ರವನ್ನು ವಿನಿಮಯ ಮಾಡಿಕೊಳ್ಳಲಾಯಿತು.

ನಾಲೆಗೆ ಚರಂಡಿ ನೀರು: ತಡೆಗೆ ಗ್ರಾಮಸ್ಥರು ಆಗ್ರಹ

• ಉದಯವಾಹಿನಿ, ಪಾಂಡವಪುರ

ವಿಶ್ವೇಶ್ವರಯ್ಯ ನಾಲೆಗೆ(ವಿ.ಸಿ) ಪಟ್ಟಣದ ಚರಂಡಿ ನೀರು ಸೇರುತ್ತಿರುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿ ತಾಲ್ಲೂಕಿನ ವಿವಿಧ ಗ್ರಾಮಗಳ ಗ್ರಾಮಸ್ಥರು ಮಂಗಳವಾರ ಪ್ರತಿಭಟನೆ ನಡೆಸಿದರು. ಪಟ್ಟಣದ ಮಧ್ಯೆ ಭಾಗದಲ್ಲಿ ಹರಿಯುವ ವಿ.ಸಿ.ನಾಲಾ ಏರಿ ಮೇಲೆ ಜಮಾವಣೆಗೊಂಡ ಪ್ರತಿಭಟನಾಕಾರರು ಕಾವೇರಿ ನೀರಾವರಿ ನಿಗಮ ಮತ್ತು ಪುರಸಭೆ ಅಧಿಕಾರಿ ಸಮಸ್ಯೆಗೆ ಪರಿಹಾರ ಹುಡುಕುವಲ್ಲಿ ವಿಫಲರಾಗಿದ್ದಾರೆ ಎಂದು ಆಕ್ರೋಶವ್ಯಕ್ತಪಡಿಸಿದರು.

ಪಟ್ಟಣದ ಹೌಸಿಂಗ್ ಬೋರ್ಡ್ ಕಾಲೋನಿ, ಶಾಂತಿ ನಗರ, ಮಹಾಂಕಾಳೇಶ್ವರಿ ಬಡಾವಣೆ, ಮಹಾತ್ಮಗಾಂಧಿ ನಗರ ನಿವಾಸಿಗಳು ಬಳಸುವ ಮಲಿನ ನೀರು ಹಾಗೂ ಒಳ ಚರಂಡಿ ವ್ಯವಸ್ಥೆಯ ತ್ಯಾಜ್ಯ ನೀರು ನಾಲೆಗೆ ಹರಿಯದಂತೆ ಕ್ರಮವಹಿಸಬೇಕೆಂದು ಮನವಿ ಮಾಡಲಾಗಿದೆ. ಆದರೆ, ಇದುವರೆಗೂ ಯಾವುದೇ ಕ್ರಮವಹಿಸಿಲ್ಲ, ಪ್ರತಿ ಬಾರಿ ಮನವಿ ಮಾಡಿದಾಗಲೂ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದ್ದ ಅಧಿಕಾರಿಗಳು ಅಗತ್ಯ ಕ್ರಮವಹಿಸಿಲ್ಲ' ಎಂದು ದೂರಿದರು. ಬಿಜೆಪಿ ಮುಖಂಡ ಎಚ್.ಎನ್. ಮಂಜುನಾಥ್ ಮಾತನಾಡಿ, ಮಹತ್ಮಾಗಾಂಧಿ ನಗರ ಮತ್ತು ಹನುಮಂತನಗರದ ಬಳಿ ಹಂದಿ ಸಾಕಾಣಿಕೆ ಮಾಡಲಾಗುತ್ತಿದ್ದು, ಇದರ ತ್ಯಾಜ್ಯವೂ ನಾಲೆಗೆ ಸೇರುತ್ತಿದೆ. ಇದರಿಂದ ನಾಲಾ ಕೆಳಭಾಗದ ರೈತರು ಮತ್ತು ನಿವಾಸಿಗಳು ನೀರನ್ನು ಬಳಸಲು ಯೋಚಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ನಾಲಾ ಕೆಳಭಾಗದಲ್ಲಿ ಹಲವು ಗ್ರಾಮಗಳಿದ್ದು, ಬಟ್ಟೆ, ಪಾತ್ರೆ ತೊಳೆಯಲು ಹಾಗೂ ಹಸು-ಕರುಗಳಿಗೆ ನೀರು ಕುಡಿಸಲು ಈ ನಾಲೆ ನೀರನ್ನೇ ಬಳಸಬೇಕಿದೆ. ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಬೇಜಾಬ್ದಾರಿತನದಿಂದ ನಾಲೆ ನೀರು ಮಲಿನವಾಗುತ್ತಿದೆ. ಕೆಳಭಾಗದ ಜನರು ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಇದೆ' ಎಂದು ಹೇಳಿದರು.

ಉದಯವಾಹಿನಿ ಚಿತ್ರ

ತಮ್ಮನ ಸೋಲು ನನಗೆ ಪಾಠ : ಡಿಸಿಎಂ ಡಿ.ಕೆ ಶಿವಕುಮಾರ್

• ಉದಯವಾಹಿನಿ, ಚನ್ನಪಟ್ಟಣ

ನನ್ನ ರಾಜಕೀಯ ಜೀವನದ ಬದಲಾವಣೆ ಚನ್ನಪಟ್ಟಣದಿಂದಲೇ ಆಗಿದೆ. ಬಂಗಾರಪ್ಪನವರು ಸಿಎಂ ಆದಾಗ ಅವರ ಸಂಪುಟದಲ್ಲಿ ಚಿಕ್ಕ ವಯಸ್ಸಿನಲ್ಲೇ ನಾನು ಮಂತ್ರಿಯಾಗಿ ಸೇರಿಕೊಂಡೆ. ಆದರೆ ಈ ಬಾರಿ ಇಲ್ಲಿನ ಜನರು ನೀಡಿದ ತೀರ್ಪನ್ನು ನಾನು ಒಪ್ಪಿಕೊಳ್ಳಬೇಕಾಗಿದೆ. ನನ್ನ ತಮ್ಮ ಡಿಕೆ ಸುರೇಶ್ ಅವರ ಸೋಲನ್ನು ಪಾಠ ಎಂದುಕೊಂಡು ತಿದ್ದಿಕೊಳ್ಳುತ್ತೇನೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ಹೇಳಿಕೆ ನೀಡಿದರು.

**ಇಲ್ಲಿ ಯಾವುದೇ ಜಾತಿ, ಧರ್ಮದ ಬೇಧವಿಲ್ಲದೆ ಎಲ್ಲರೂ ಒಗ್ಗಟ್ಟಾಗಿ ಇರೋ ಪವಿತ್ರ ಕ್ಷೇತ್ರ. ಕಳೆದ ಚುನಾವಣೆಯಲ್ಲಿ ಕಾಂಗ್ರೇಸ್ ಅಭ್ಯರ್ಥಿಗೆ ಕಡಿಮೆ ಮತ ಬಂದಿತ್ತು. ಆದರೂ ನಾಲ್ಕ

ಅಂತರಾಳದಿಂದ... EDITORIAL

ಕಾಂಚನ್‌ಜುಂಗಾ ರೈಲು ಅಪಘಾತ

ಪ್ರಯಾಣಿಕರ ಸುರಕ್ಷತೆ ಆದ್ಯತೆಯಾಗಲಿ

ಉದಯವಾಹಿನಿ ಚಿತ್ರ

ಪಶ್ಚಿಮ ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯಲ್ಲಿ ನಡೆದ ರೈಲು ಅಪಘಾತದಲ್ಲಿ ಕನಿಷ್ಠ ಒಂಬತ್ತು ಮಂದಿ ಮೃತಪಟ್ಟಿದ್ದಾರೆ. ಹಲವರಿಗೆ ಗಾಯಗಳಾಗಿವೆ. ರೈಲ್ವೆ ಇಲಾಖೆಯು ಪ್ರಯಾಣಿಕರ ಸುರಕ್ಷತೆಯ ವಿಚಾರವಾಗಿ ಹೆಚ್ಚಿನ ಆಸ್ಥೆ ತೋರುತ್ತಿಲ್ಲ ಎಂಬುದಕ್ಕೆ ಇದು ಇನ್ನೊಂದು ನಿದರ್ಶನ. ನಿಂತಿದ್ದ ಕಾಂಚನ್ ಜುಂಗಾ ಎಕ್ಸ್‌ಪ್ರೆಸ್ ಪ್ರಯಾಣಿಕ ರೈಲಿಗೆ ಸರಕು ಸಾಗಣೆ ರೈಲೊಂದು ಡಿಕ್ಕಿ ಹೊಡೆದಾಗ ಈ ದುರ್ಘಟನೆ ಸಂಭವಿಸಿದೆ. ಈ ಅಪಘಾತಕ್ಕೆ ಮನುಷ್ಯನ ಲೋಪವೇ ಕಾರಣ ಎಂದು ಭಾವಿಸಲಾಗಿದೆ. ಆದರೆ ಇದು ತನಿಖೆಯಿಂದ ಇನ್ನಷ್ಟೇ ಖಚಿತವಾಗಬೇಕಿದೆ. ಒಡಿಶಾದ ಬಾಲೇಶ್ವರದಲ್ಲಿ ಕಳೆದ ವರ್ಷ ನಡೆದ ರೈಲ್ವೆ ಅಪಘಾತದಲ್ಲಿ ಕನಿಷ್ಠ 290 ಮಂದಿ ಪ್ರಾಣ ಕಳೆದುಕೊಂಡಿದ್ದರು. ಇದಾದ ನಂತರ ಚೆನ್ನೈ ಹೌರಾ ರೈಲು ಮಾರ್ಗದಲ್ಲಿ ನಡೆದ ಅಪಘಾತವೊಂದರಲ್ಲಿ 15 ಮಂದಿ ಸತ್ತಿದ್ದರು. ಈ ವರ್ಷದ ಫೆಬ್ರುವರಿಯಲ್ಲಿ ಸರಕು ಸಾಗಣೆ ರೈಲೊಂದು ಚಾಲಕನೇ ಇಲ್ಲದೆ ಜಮ್ಮುವಿನಿಂದ ಪಂಜಾಬ್ ಕಡೆಗೆ ಅಂದಾಜು 70 ಕಿ.ಮೀ. ಚಲಿಸಿತ್ತು ದೇಶದ ಇತರ ಹಲವೆಡೆ ರೈಲು ಅಪಘಾತಗಳು ನಡೆದಿವೆ. ಅಲ್ಲೆಲ್ಲ ಮೃತರ ಸಂಖ್ಯೆ ಕಡಿಮೆ ಇದ್ದಿರಬಹುದು. ರೈಲು ಅಪಘಾತಗಳು ಪ್ರಾಣಹರಣಕ್ಕೆ ಕಾರಣವಾಗುತ್ತವೆ. ರೈಲ್ವೆ ಇಲಾಖೆಗೆ ನಷ್ಟ ಉಂಟುಮಾಡುತ್ತವೆ ಹಾಗೂ ರೈಲ್ವೆ ಸೇವೆಗಳಿಗೆ ಅಡ್ಡಿ ಸೃಷ್ಟಿಸುತ್ತವೆ.

> ಲಕ್ಷಾಂತರ ಮಂದಿಯ ಪ್ರಯಾಣಕ್ಕೆ ಹಾಗೂ ಭಾರಿ ಪ್ರಮಾಣದ ಸರಕು ಸಾಗಣೆಗೆ ನೆರವು ಒದಗಿಸುತ್ತ, ದೇಶದಲ್ಲಿ ಸಾರಿಗೆ ಸೇವೆ ಒದಗಿಸುವ ಅತಿದೊಡ್ಡ ವ್ಯವಸ್ಥೆಯಾಗಿರುವ ರೈಲ್ವೆಯ ಪಾಲಿಗೆ ಇವು ಕೆಟ್ಟ ಹೆಸರು ತರುತ್ತವೆ. ಕಾಂಚನ್‌ಜುಂಗಾ ಎಕ್ಸ್‌ಪ್ರೆಸ್‌ನ ದುರಂತಕ್ಕೆ ಸಂಬಂಧಿಸಿದಂತೆ. ರೈಲು ಮಾರ್ಗದ ಒಂದು ಕಡೆ ಸ್ವಯಂಚಾಲಿತ ಸಿಗ್ನಲಿಂಗ್ ವ್ಯವಸ್ಥೆಯು ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ. ಸರಕು ಸಾಗಣೆ ರೈಲಿನ ಚಾಲಕ ಸಿಗ್ನಲ್‌ಗಳನ್ನು ಅಲಕ್ಷಿಸಿದ ಎಂದು ಕೆಲವು ವರದಿಗಳು ಹೇಳಿವೆ. ಬಾಲೇಶ್ವರದ ದುರಂತ ನಡೆದ ನಂತರದಲ್ಲಿ ದುರ್ಘಟನೆಗಳನ್ನು ತಡೆಯಲು ಅಥವಾ ಅವುಗಳ ಸಂಖ್ಯೆಯನ್ನು ಕನಿಷ್ಠ ಮಟ್ಟಕ್ಕೆ ತರಲು ಸುರಕ್ಷಾ ಕ್ರಮಗಳನ್ನು ಜಾರಿಗೆ ತರಲಾಗುತ್ತದೆ ಎಂದು ಘೋಷಿಸಲಾಗಿತ್ತು.

ರೈಲುಗಳು ಪರಸ್ಪರ ಡಿಕ್ಕಿಯಾಗುವುದನ್ನು ತಡೆಯುವ ಕವಚ್ ವ್ಯವಸ್ಥೆಯನ್ನು ಕೆಲವು ವರ್ಷಗಳ ಹಿಂದೆ ಅನಾವರಣಗೊಳಿಸಲಾಗಿದೆ. ಆದರೆ ಈ ವ್ಯವಸ್ಥೆಯನ್ನು ರೈಲ್ವೆ ಜಾಲದ ಆದ್ಯಂತ ಇನ್ನೂ ಅಳವಡಿಸಲಾಗಿಲ್ಲ. ಕವೆಚ್ ವ್ಯವಸ್ಥೆಯ ಅಳವಡಿಕೆ ಕಾರ್ಯವು ಈಗಿನ ವೇಗದಲ್ಲೇ ನಡೆದರೆ, ಅಳವಡಿಕೆ ಪೂರ್ಣಗೊಳ್ಳಲು ಇನ್ನೂ ಹಲವು ವರ್ಷಗಳು ಬೇಕಾಗುತ್ತವೆ. ರೈಲು ಅಪಘಾತಕ್ಕೆ ಹಲವು ಅಂಶಗಳು ಕಾರಣವಾಗುತ್ತಿವೆ. ಮೂಲಸೌಕರ್ಯದಲ್ಲಿ ಲೋಪಗಳು ಇರುವುದು ಅಥವಾ ಅವು ಸಮರ್ಪಕವಾಗಿ ಇಲ್ಲದಿರುವುದು. ತಾಂತ್ರಿಕವಾಗಿ ಪರಿಣತಿ ಇಲ್ಲದೇ ಇರುವುದು. ಕ್ರಾಸಿಂಗ್‌ಗಳಲ್ಲಿನ ಸಮಸ್ಯೆಗಳು ಇಂತಹ ಕಾರಣಗಳ ಪೈಕಿ ಪ್ರಮುಖವಾದವು. ಮೂಲಸೌಕರ್ಯವನ್ನು ಮೆಲ್ಬರ್ಜೆಗೆ ಏರಿಸುವುದು, ಸ್ವತಂತ್ರವಾದ ಸುರಕ್ಷಾ ಆಯೋಗವನ್ನು ರಚಿಸುವುದು ಸೇರಿದಂತೆ ಹಲವು ಕ್ರಮಗಳನ್ನು ಹಲವು ಸಮಿತಿಗಳ ಶಿಫಾರಸುಗಳಲ್ಲಿ ಹೇಳಲಾಗಿದೆ. ಆದರೆ ಆ ಶಿಫಾರಸುಗಳ ಪೈಕಿ ಹಲವನ್ನು ಇನ್ನೂ ಅನುಷ್ಠಾನಕ್ಕೆ ತಂದಿಲ್ಲ.

ಹೆಚ್ಚಿನ ವೇಗದಲ್ಲಿ ಸಾಗುವ ವಂದೇ ಭಾರತ್ ಹಾಗೂ ನಮೋ ಭಾರತ್ ರೈಲುಗಳ ಸಂಚಾರಕ್ಕೆ ಕೇಂದ್ರ ಸರ್ಕಾರವು ಈಚಿನ ವರ್ಷಗಳಲ್ಲಿ ಹೆಚ್ಚು ಆದ್ಯತೆ ನೀಡುತ್ತಿದೆ. ಬುಲೆಟ್ ರೈಲುಗಳ ಕಡೆಗೂ ಗಮನಹರಿದಿದೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಜಪಾನಿನ ಪ್ರಧಾನಿ ಫುಮಿಯೊ ಕಿಸಿದಾ ಅವರು, ಭಾರತದಲ್ಲಿ ಬುಲೆಟ್ ರೈಲು ಯೋಜನೆಗೆ ವೇಗ ನೀಡುವ ತೀರ್ಮಾನ ಕೈಗೊಂಡಿದ್ದಾರೆ. ಇವೆಲ್ಲ ಬಹಳ ಮಹತ್ವಾಕಾಂಕ್ಷೆಯ ಯೋಜನೆಗಳು. ಇವು ರೈಲ್ವೆ ಕುರಿತ ಚಿತ್ರಣವನ್ನು ಬದಲಾಯಿಸುವಂಥವು. ಆದರೆ ಎಲ್ಲಾ ರೈಲುಗಳಲ್ಲಿ ಇರುವ ಸುರಕ್ಷಾ ಮಾನದಂಡಗಳನ್ನು ಹೆಚ್ಚಿಸುವುದು ಬಹಳ ಮುಖ್ಯವಾಗಿ ಆಗಬೇಕಾದ ಕೆಲಸ. ರೈಲಿನಲ್ಲಿ ಪ್ರಯಾಣಿಸುವವರ ಜೀವಕ್ಕೆ ಯಾವುದೇ ಅಪಾಯ ಇರುವುದಿಲ್ಲ ಎಂಬುದನ್ನು ಖಾತರಿಪಡಿಸುವ ಕೆಲಸ ಆಗಬೇಕು. 2017ರ ನಂತರದಲ್ಲಿ ರೈಲ್ವೆಯ ಮೂಲಭೂತ ನಿರ್ವಹಣಾ ಕೆಲಸಗಳಿಗೆ ಮಾಡುವ ವೆಚ್ಚ ಕಡಿಮೆ ಆಗಿದೆ ಎಂದು ಮಹಾಲೇಖಪಾಲರ ವರದಿಯೊಂದು ಹೇಳಿದೆ. ಪ್ರಯಾಣಿಕರಿಗೆ ಸುರಕ್ಷಿತವಾದ ಪ್ರಯಾಣದ ಸೇವೆ ಒದಗಿಸುವುದು ರೈಲ್ವೆಯ ಅತ್ಯಂತ ಪ್ರಮುಖ ಆದ್ಯತೆ ಆಗಬೇಕು.

• ಹಿಂದಿನ ಸಂಚಿಕೆಯಿಂದ

ಯುದ್ಧವು ಇನ್ನೇನು ಪ್ರಾರಂಭವಾಗುವುದರಲ್ಲಿತ್ತು. ಅಷ್ಟರಲ್ಲಿ ಅಲ್ಲಿಗೆ ಬಲರಾಮನು ಬಂದನು. ಎಲ್ಲರಿಗೂ ಅವನನ್ನು ನೋಡಿ ಅತಿಶಯ ಸಂತೋಷವಾಯಿತು. ಶಿಷ್ಯರ ನಡುವೆ ಗದಾಯುದ್ಧ ನಡೆಯಲಿರುವುದೆಂದು ನಾರದನಿಂದ ಅವನು ಕೇಳಿ ತಿಳಿದಿದ್ದನು ದುರ್ಯೋಧನ ಅವನ ನೆಚ್ಚಿನ ಶಿಷ್ಯನಾದ್ದರಿಂದ ಯುದ್ಧನೋಡಲು ಅಲ್ಲಿಗೆ ಬಂದಿದ್ದನು. ಶಿಷ್ಯರಿಬ್ಬರೂ ಅವನಿಗೆ ನಮಸ್ಕರಿಸಿದರು. ದುರ್ಯೋಧನನಿಗೆ ಗುರುವನ್ನು ನೋಡಿ ಪುಳಕ ಉಂಟಾಯಿತು. ಅವನು ಗುರುವಿಗಾಗಿ ಉತ್ತಮ ಪೀಠವೊಂದನ್ನು ತರಿಸಿ ಹಾಕಿದನು. ಬಲರಾಮನು,'' ನಾನು ತೀರ್ಥಯಾತ್ರೆಯನ್ನು ಈಗತಾನೆ ಮುಗಿಸಿ ಬರುತ್ತಿರುವೆನು. ಇಲ್ಲೇ ಹತ್ತಿರವಿರುವ ಸ್ಯಮಂತಪಂಚಕವೆಂಬ ಸ್ಥಳವು ತುಂಬ ಪವಿತ್ರವಾದುದೆಂದೂ ಅಲ್ಲಿ ಸತ್ತವರಿಗೆ ಸ್ವರ್ಗ ಪ್ರಾಪ್ತಿಯಾಗುವುದೆಂದೂ ಹೇಳುವರು. ಗದಾಯುದ್ಧವು ಅಲ್ಲೇ ನಡೆಯಲಿ ಎಂದು ನನ್ನ ಸಲಹೆ ಎಂದನು. ಯುಧಿಷ್ಠಿರನು,''ಹಾಗೆಯೇ ಆಗಲಿ ಎನ್ನಲು, ಎಲ್ಲರೂ ಸ್ಯಮಂತಪಂಚಕಕ್ಕೆ ಹೊರಟರು. ಕುರುಸಾಮ್ರಾನಾದ ದುರ್ಯೋಧನನು ಪಾಂಡವ ವೀರರೊಂದಿಗೆ ಗದಾಧಾರಿಯಾಗಿ ತಲೆಯೆತ್ತಿಕೊಂಡು ಗಂಭೀರವಾಗಿ ನಡೆಯುತ್ತಾ ಹೋಗುವ ಆ ದೃಶ್ಯವು ಅನುಪಮವು, ಅದ್ಭುತವೂ ಆಗಿದ್ದಿತು. ಬಲರಾಮನ ಬರುವಿಕೆಯಿಂದಾಗಿ ಅವನ ಮನಸ್ಸು ಪ್ರಸನ್ನವಾಗಿದ್ದಿತು. ಕೃಷ್ಣನು ಬಲರಾಮನೊಂದಿಗೂ, ಸಾತ್ಯಕಿಯು ಸ್ವಲ್ಪ ಹಿಂದಕ್ಕೂ ನಡೆದುಹೋಗುತ್ತಿದ್ದರು.

★ ★ ★ ★

ಎಲ್ಲರೂ ಈ ಮಹೋನ್ನತ ಗದಾಯುದ್ಧವನ್ನು ನೋಡಲು ಕಾತುರದಿಂದಿರಲು, ವೀರಾಗ್ರಣಿಗಳಿಬ್ಬರೂ ಹೋರಾಡುವುದಕ್ಕೆ ತೊಡಗಿದರು. ಎರಡು ಕಾಳಮೇಘಗಳು ಒಂದರೊಡನೊಂದು ಮೇಳೈಸುವಂತೆ, ಎರಡು ಮಹಾಸಾಗರಗಳು ಒಂದರೊಡನೊಂದು ಸೇರುವಂತೆ ಯುದ್ಧವಾರಂಭವಾಯಿತು. ಇಬ್ಬರೂ ಬಲರಾಮನ ಶಿಷ್ಯರು; ಮಹಾಶೂರರು; ಕುರುವಂಶದಲ್ಲಿ ಹುಟ್ಟಿದ ಸೋದರರು; ಇಬ್ಬರೂ ಇನ್ನೊಬ್ಬರನ್ನು ಕೊಲ್ಲಲೆತ್ನಿಸುವವರು. ಅನುಪಮ ರೂಪವಂತರಾದ ಇಬ್ಬರೂ ಗದೆಯನ್ನೆತ್ತಿ ಬಹು ಭೀಕರವಾಗಿ ಹೋರುತ್ತಿದ್ದರು. ಯುಧಿಷ್ಠಿರನಿಗೆ,''ನಮ್ಮ ಮೇಲೆ ಪ್ರೀತಿಯಿಟ್ಟಿರುವ ನೀವೆಲ್ಲರೂ ಕುಳಿತುಕೊಂಡು ಯುದ್ಧವನ್ನು ನೋಡಿ ಆನಂದಿಸಿ ಎನ್ನಲು, ಅವರೆಲ್ಲರೂ ಅಲ್ಲಿಯ ಕಣದ ಸುತ್ತ ಕುಳಿತರು. ಅಂಗಸೌಷ್ಠವವುಳ್ಳ ಬಲರಾಮನು ತನ್ನ ನೀಲ ರೇಷ್ಮೆಯ ವಸ್ತ್ರದಲ್ಲಿ ಸುಂದರನಾಗಿ ಕಂಗೊಳಿಸುತ್ತಿದ್ದನು; ಅವನ ಪಕ್ಕದಲ್ಲಿ ನೀಲಮೇಘಶ್ಯಾಮನಾದ ಕೃಷ್ಣನು ಚಂದ್ರನ ಪಕ್ಕದಲ್ಲಿನ ಕಾಳಮೇಘದಂತೆ ಕಾಣಿಸುತಿದ್ದನು. ಮಹಾವೀರರ ನಡುವಣ ಗದಾಯುದ್ಧವು ಮಹೋನ್ನತವಾಗಿಯೇ ಇದ್ದಿತು. ಸ್ವಲ್ಪಹೊತ್ತು ಹೋರಾಡುವರು; ಅನಂತರ ಆಯಾಸದಿಂದ ಕುಳ್ಳಿರುವರು; ಅನಂತರ ಪುನಃ ಹೋರಾಡುವರು. ಆ ಎರಡು ಉಕ್ಕಿನ ಗದೆಗಳಾ ಸಂಘಟ್ಟನೆ ಕಿವಿಗಡಚಿಕ್ಕುವಂತಿದ್ದಿತು; ಕಿಡಿಗಳು ಹಾರುತಿದ್ದವು.

ಮುಂದುವರಿಯುವುದು...

ಕಲಾ ಸಾಹಿತ್ಯ

ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

ತಾಯಿ-ತಂದೆ ಎಂಬ ಎರಡಕ್ಷರದ ಮಹತ್ವ

• ಉದಯವಾಹಿನಿ, ವಿಶೇಷ

ಜಗತ್ತಿನ ಭೂಮಂಡಲದಲ್ಲಿ ಸೃಷ್ಟಿಯ ನಿಯಮ, ಪ್ರಕೃತಿಯ ನಿಯಮ, ದೈವ ನಿಯಮ ಇವೆಲ್ಲಾ ಸಹಜ ಪ್ರಕ್ರಿಯೆಗಳಲ್ಲಿ ನಿರಂತರ ಸಮಾಂತರದಲ್ಲಿ ಜನನ- ಮರಣ ನಡೆಯುತ್ತಿರುತ್ತದೆ ಈ ಪ್ರಕ್ರಿಯೆ ಯಾರಿಂದಲೂ ತಡೆಯಲು ಸಾಧ್ಯವಿಲ್ಲ.

ಪರಸ್ಪರ ಒಪ್ಪಿದ ಹೆಣ್ಣು ಮತ್ತು ಗಂಡು ಮದುವೆಯ ನಂತರ (ಕೆಲವೊಂದು ಗಂಭೀರ ಸಮಸ್ಯೆಗಳ ಹೊರತುಪಡಿಸಿ) ಇಬ್ಬರೂ ತಾಯಿ ತಂದೆ ಅನ್ನಿಸಿಕೊಳ್ಳಬೇಕಾದರೆ ಕನಿಷ್ಠಪಕ್ಷ ಒಂದು ಮಗುವಿಗಾದರೂ ಜನ್ಮ ನೀಡಬೇಕು ಇಲ್ಲ ಅಂದರೆ ತಾಯಿ ತಂದೆ ಎಂಬ ಬಿರುದು ಬರುವುದಿಲ್ಲ.

ಮಗುವಿಗೆ ಜನ್ಮ ನೀಡುವ ಮೂಲಕ ಜವಾಬ್ದಾರಿ, ಹೊಣೆಗಾರಿಕೆ, ಕರ್ತವ್ಯ ಇರುವುದನ್ನು ಗಂಡ ಹೆಂಡತಿ ಇಬ್ಬರೂ ತಾಯಿ ತಂದೆ ಆಗುವುದನ್ನು ಮರೆಯಬಾರದು. ಜವಾಬ್ದಾರಿಯಿಂದ ಉದ್ದೇಶಪೂರ್ವಕವಾಗಿ ನುಣುಚಿ ಕೊಳ್ಳಬಾರದು ಅಕ್ಷಮ್ಯ ಅಪರಾಧ. ಮದುವೆ ನಂತರ ಮಕ್ಕಳಿಲ್ಲ ಎಂದರೆ ಗಂಡ ಹೆಂಡತಿ ಎಂಬ ಹೆಸರಿನಲ್ಲಿ ಯಾವುದೇ ತಾಯಿ ತಂದೆ ಎಂಬ ಹೆಸರಿಲ್ಲದೇ ಅಂತ್ಯವಾಗುತ್ತದೆ. ಇಬ್ಬರೂ ಹುಟ್ಟಿದ್ದು ಸಾರ್ಥಕದ ಬದುಕು ಅನಿಸಿಕೊಳ್ಳುವುದಿಲ್ಲ.

ಜಗತ್ತಿನಲ್ಲಿ ಹುಟ್ಟಿದ ಯಾವುದೇ ಹೆಣ್ಣು ಮಗಳು ಒಂದು ಮಗುವಿಗಾದರೂ ಜನ್ಮ ನೀಡಿ ಸಂಸ್ಕಾರ ಕಲಿಸಿ ಭಗವಂತನಿಗೆ ಅರ್ಪಿಸುವ ಮೂಲಕ ರಾಷ್ಟ್ರಕ್ಕೆ ಸಮರ್ಪಿಸಬೇಕು. ಆಗ ಆ ಮಗು ರಾಷ್ಟ್ರದ ಶಕ್ತಿ ಹಾಗೂ ಆಸ್ತಿವಂತರಾಗಿ ಪರಿವರ್ತನೆಯಾಗುತ್ತದೆ. ಮಗು ಹುಟ್ಟುವಾಗ ವಿಶ್ವಮಾನವನಾಗಿ ಹುಟ್ಟುತ್ತದೆ. ವಿಶ್ವಮಾನವರಾಗಿ ಪರಿವರ್ತನೆ ಮಾಡುವ ಶಕ್ತಿ ತಾಯಿಗೆ ಮಾತ್ರ ಇರುತ್ತದೆ

ಉದಯವಾಹಿನಿ ಚಿತ್ರ

ಹುಟ್ಟಿದ್ದು ಸಾರ್ಥಕದ ಬದುಕು

ಅದಕ್ಕೆ ತಂದೆಯ ಸಹಕಾರ ಸಹ ಇರುತ್ತದೆ.

ವಿಶ್ವಮಾನವ ಮಾಡುವ ಬದಲು ಅಲ್ಪ ಮಾನವನಾಗಿ ಪರಿವರ್ತನೆ ಮಾಡುವುದಾದರೆ ಮಗುವಿಗೆ ಜನ್ಮ ನೀಡುವ ಅಗತ್ಯವಿಲ್ಲ. ಆಗ ಸೃಷ್ಟಿಕರ್ತನಿಗೂ ಹೆತ್ತ ತಾಯಿಗೆ ಮತ್ತು ಹೊತ್ತ ನಾಡಿಗೆ ಅಗೌರವ ತೋರಿಸುತ್ತಾ ಸಾರ್ಥಕದ ಬದುಕಾಗುವುದಿಲ್ಲ. ದಿನನಿತ್ಯ ಕೃಷಿಯಲ್ಲಿ ತೊಡಗಿ ಕೊಂಡಾಗ ಮಾತ್ರ ಆತ ರೈತನಾಗುತ್ತಾನೆ. ದಿನನಿತ್ಯ ರೋಗಿಯ ರೋಗವನ್ನು ಪತ್ತೆ ಮಾಡಿ ರೋಗನಿರೋಧಕ ಔಷಧಿಗಳನ್ನ ನೀಡಿದಾಗ ಮಾತ್ರ ವೈದ್ಯನಾಗುತ್ತಾನೆ. ದಿನ ನಿತ್ಯ ದೇಶ ಕಾಯುತ್ತಾ ಶತ್ರುಗಳನ್ನು ಹಿಮ್ಮೆಟ್ಟಿಸುವನು ಸೈನಿಕನಾಗುತ್ತಾನೆ. ಮಕ್ಕಳಿಗೆ ಪ್ರತಿನಿತ್ಯ ಪಾಠ ಮಾಡಿದಾಗ ಮಾತ್ರ ಶಿಕ್ಷಕನಾಗುತ್ತಾನೆ.

ದಿನನಿತ್ಯ ನ್ಯಾಯಸ್ಥಾನದಲ್ಲಿ ನ್ಯಾಯವನ್ನು ಎತ್ತಿ ಹಿಡಿಯುವವರು ನ್ಯಾಯಾಧೀಶರಾಗುತ್ತಾರೆ. ನೊಂದ ಕಕ್ಷಿದಾರರ ಕತ್ತಲು ಮನೆಯನ್ನು ಬೆಳಕು ಮಾಡುವವರು ನ್ಯಾಯವಾದಿಗಳಾಗುತ್ತಾರೆ ದೂರದೃಷ್ಟಿ ಇಟ್ಟುಕೊಂಡು ಭವಿಷ್ಯಕ್ಕೆ ಉತ್ತಮ ಯೋಜನೆ ರೂಪಿಸಿಕೊಡುವವರು ಇಂಜಿನಿಯರ್ಗಳಾಗುತ್ತಾರೆ ಅವಶ್ಯಕತೆ ಹಾಗೂ ಅಗತ್ಯತೆ ಇರುವ ಬಗ್ಗೆ ದೀರ್ಘಕಾಲದ ಸಂಶೋಧನೆ ಮಾಡಿ ಜಗತ್ತಿಗೆ ಅರ್ಪಿಸುವವರು ವಿಜ್ಞಾನಿಗಳಾಗುತ್ತಾರೆ. ಯಾವುದೇ ಕ್ಷೇತ್ರದಲ್ಲಿ ಪರಿಣಿತ ಹೊಂದಿ ಪರಿಪೂರ್ಣ ಜ್ಞಾನ ಇರುವವರು ಕುಶಲ ಜ್ಞಾನಿ ಎನಿಸಿಕೊಳ್ಳುತ್ತಾನೆ. ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡಿದಾಗ ಮಾತ್ರ ವಿದ್ಯಾರ್ಥಿಯಾಗುತ್ತಾನೆ.

> ಸಾವಿರಾರು ಉದಾಹರಣೆಗಳು ನಮ್ಮ ಕಣ್ಣು ಮುಂದೆ ಹಾದು ಹೋಗುತ್ತವೆ ಅವುಗಳಲ್ಲಿ ಕೆಲವೊಂದು ಮೆಲುಕು ಹಾಕುವುದಾದರೆ ಬಿಎ, ಬಿಎಸ್ಸಿ ಬಿಕಾಂ, ಎಂಎ, ಎಂ ಎಸ್ಸಿ, ಎಂಕಾಮ್ ಬಿಇ, ಎಂಇ, ಎಂಬಿಬಿಎಸ್, ಎಂಡಿ, ಎಂಎಸ್, ಎಲ್‌ಎಲ್‌ಬಿ, ಬಿಎಡ್ ಇತ್ಯಾದಿ ಈ ಪರೀಕ್ಷೆಗಳಲ್ಲಿ ಪಾಸ್ ಮಾಡಿ ಆಯಾಯ ಕ್ಷೇತ್ರದ ವೃತ್ತಿಯಲ್ಲಿ ದಿನನಿತ್ಯ ಸಂಪೂರ್ಣವಾಗಿ ತೊಡಗಿಕೊಂಡಾಗ ಮಾತ್ರ ಆ ಪದವಿ ಶಿಕ್ಷಣಕ್ಕೆ ತಕ್ಕ ಭೂಷಣ. ಶಿಕ್ಷಣದ ಜೊತೆಗೆ ಸಂಸ್ಕಾರದ ಗುಣಗಳಿರಬೇಕು.

ಯಾವುದೇ ವೃತ್ತಿಯಲ್ಲಿ ನನ್ನ ಕರ್ತವ್ಯವನ್ನ ಪ್ರಾಮಾಣಿಕವಾಗಿ ಮಾಡುತ್ತಿರುವವನು ಉದ್ಯೋಗಿ ಎನಿಸಿಕೊಳ್ಳುತ್ತಾನೆ. ಸ್ವಾರ್ಥ ಮರೆತು ನಿಸ್ವಾರ್ಥ ಸೇವೆ ಮಾಡಿದಾಗ ಮಾತ್ರ ಒಬ್ಬ ಸಮಾಜ ಸೇವಕನಾಗುತ್ತಾನೆ ಹಾಗೂ ನಾವು ಮಾಡಿದ ಸೇವೆ ಸಮಾಜ ಗುರುತಿಸುವಂತಾಗಬೇಕು. ಹಲವು ಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಸಾಧಿಸಿರುವುದಕ್ಕೆ ಅವರೆಲ್ಲಾ ಸಾಧಕರಾಗಿರುತ್ತಾರೆ. ಪ್ರಾಮಾಣಿಕವಾಗಿ ದಾನ ಧರ್ಮದಲ್ಲಿ ತೊಡಗಿಕೊಂಡವರಿಗೆ ಧರ್ಮದರ್ಶಿಗಳಾಗಿರುತ್ತಾರೆ. ಬಡವರ, ದೀನದಲಿತರ, ನಿರ್ಗತಿಕರ ಬಾಳಿಗೆಗೆ ಬೆಳಕಾಗಿರುವರು ಆಶಾಕಿರಣವಾಗಿರುತ್ತಾರೆ ಇತ್ಯಾದಿ. ಒಟ್ಟಾರೆ ಯಾರೇ ಗಂಡ ಹೆಂಡತಿ ಇಬ್ಬರೂ ಪರಸ್ಪರ ಒಪ್ಪಂದದ ಮೇರೆಗೆ ಕನಿಷ್ಠ ಪಕ್ಷ ಒಂದು ಮಗುವಿಗಾದರೂ ಜನ್ಮ ನೀಡಿ ಸಾರ್ಥಕದ ತಂದೆ ತಾಯಿ ಎನಿಸಿಕೊಳ್ಳಬೇಕು ಇಲ್ಲಾಂದ್ರೆ ಗಂಡ ಹೆಂಡತಿಯರಾಗಿ ಇರಬೇಕಾಗುತ್ತದೆ ತಂದೆ ತಾಯಿ ಎಂಬ ಬಿರುದು ಸಹ ದೊರಕುವುದಿಲ್ಲ.

ದೇಶದಲ್ಲೇ ಅತಿ ಹೆಚ್ಚು ಸಂಬಳ ಪಡೆಯುವ ಸಿಎಂ ಯಾರು. ಎಲ್ಲರಿಗಿಂತ ಕಮ್ಮಿ ಯಾರಿಗೆ ಇಲ್ಲಿದೆ, ಡಿಟೈಲ್ಸ್

ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ದೇಶದಲ್ಲಿ ಇತ್ತೀಚಿಗಷ್ಟೇ ಲೋಕಸಭೆ, ಕೆಲ ರಾಜ್ಯಗಳಲ್ಲಿ ರಾಜ್ಯಸಭೆ ಚುನಾವಣೆ ಮುಗಿದಿದೆ. ಅಂದ್ಹಾಗೆ, ಸಿಎಂ ಹುದ್ದೆಯಲ್ಲಿ ಇದ್ದವರು ಅನೇಕ ಸೌಲಭ್ಯಗಳನ್ನ ಮತ್ತು ಉತ್ತಮ ಸಂಬಳವನ್ನೂ ಪಡೆಯುತ್ತಾರೆ.

ವರದಿಗಳ ಪ್ರಕಾರ, ಎಲ್ಲಾ ರಾಜ್ಯಗಳಲ್ಲಿ ಮುಖ್ಯಮಂತ್ರಿಗಳಿಗೆ ವಸತಿ, ವಾಹನ, ಭದ್ರತೆ ಮತ್ತು ದೇಶ ಮತ್ತು ವಿದೇಶದಲ್ಲಿ ಎಲ್ಲಿ ಬೇಕಾದರೂ ಹೋಗಲು ಸ್ವಾತಂತ್ರ್ಯವಿದೆ. ಇದಲ್ಲದೇ ಒಳ್ಳೆಯ ಸಂಬಳವನ್ನೂ ಪಡೆಯುತ್ತಾರೆ. ದೇಶದ ಹಲವು ರಾಜ್ಯಗಳು ತಮ್ಮದೇ ಆದ ಸರ್ಕಾರಿ ವಿಮಾನಗಳು ಮತ್ತು ಹೆಲಿಕಾಪ್ಟರ್'ಗಳನ್ನ ಹೊಂದಿವೆ. ರಾಜ್ಯದ ಮುಖ್ಯಮಂತ್ರಿ, ರಾಜ್ಯಪಾಲರಲ್ಲದೆ ಹಲವು ಸಚಿವರೂ ಇವನ್ನ ಬಳಸಿಕೊಳ್ಳುತ್ತಿದ್ದಾರೆ.

ತುರ್ತು ಸಂದರ್ಭದಲ್ಲಿ ಸಂಬಂಧಪಟ್ಟ ರಾಜ್ಯ ಸರ್ಕಾರವು ಅವುಗಳನ್ನ ಯಾರಾದರೂ ಬಳಸಬಹುದು. ಆದರೆ ಸಾಮಾನ್ಯವಾಗಿ ಮುಖ್ಯಮಂತ್ರಿಗಳು ಸಮಯವನ್ನ ಉಳಿಸಲು ಮತ್ತು ರಸ್ತೆ-ರೈಲ್ವೆ ಸುರಕ್ಷತೆ ಸಮಸ್ಯೆಗಳನ್ನ ನಿವಾರಿಸಲು ಕಡಿಮೆ ದೂರದ ಪ್ರಯಾಣಕ್ಕಾಗಿ ಹೆಲಿಕಾಪ್ಟರ್'ಗಳನ್ನ ಬಳಸುತ್ತಾರೆ. ರಾಜ್ಯದ ಹೊರಗೆ ಪ್ರಯಾಣಿಸಲು ವಿಮಾನಗಳನ್ನ ಬಳಸಲಾಗುತ್ತದೆ. ಮುಖ್ಯಮಂತ್ರಿ ರಾಜ್ಯದ ಚುನಾಯಿತ ಮುಖ್ಯಸ್ಥರಾಗಿದ್ದಾರೆ ಮತ್ತು ಹಲವಾರು ವಿಶೇಷ ಅಧಿಕಾರಗಳನ್ನ ಹೊಂದಿದ್ದಾರೆ. ಪ್ರಸ್ತುತ ದೇಶದಲ್ಲಿ 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳಿವೆ.

ಪ್ರತಿ ರಾಜ್ಯದ ಮುಖ್ಯಮಂತ್ರಿಗಳ ವೇ

62 ಅಭಿವೃದ್ಧಿ ಯೋಜನೆಗಳ ಪೈಕಿ 59 ಯೋಜನೆಗಳು ಪೂರ್ಣ

ಬಹುತೇಕ ಯೋಜನೆಗಳನ್ನು ಈ ಭಾಗದ ಜನಪ್ರತಿನಿಧಿಗಳು 2023 ವರ್ಷಾರಂಭದಲ್ಲಿಯೇ ಲೋಕಾರ್ಪಣೆ

• ಉದಯವಾಹಿನಿ, ಹುಬ್ಬಳ್ಳಿ

ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ಸಿಟಿ ಲಿಮಿಟೆಡ್‌ನಿಂದ (ಎಚ್‌ಡಿಎಸ್‌ಸಿಎಲ್) ಮಹಾನಗರ ವ್ಯಾಪ್ತಿಯಲ್ಲಿ ಕೈ ಗೊಂಡಿರುವ ಒಟ್ಟು 62 ಅಭಿವೃದ್ಧಿ ಯೋಜನೆಗಳ ಪೈಕಿ 59 ಯೋಜನೆಗಳು ಈಗಾಗಲೇ ಪೂರ್ಣಗೊಂಡಿದ್ದು, ಇತ್ತೀಚೆಗೆ ಅವುಗಳನ್ನು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗೆ ಅಧಿಕೃತವಾಗಿ ಹಸ್ತಾಂತರ ಮಾಡಲಾಗಿದೆ.

ಸ್ಮಾರ್ಟ್ ಸಿಟಿ: 59 ಯೋಜನೆ ಹಸ್ತಾಂತರ

ಉದಯವಾಹಿನಿ ಚಿತ್ರ

ಹುಬ್ಬಳ್ಳಿಯಲ್ಲಿ ಹಲವು ಹಂತದಲ್ಲಿ ತೋಳನಕೆರೆ ಅಭಿವೃದ್ಧಿ ಮಾಡಿರುವುದು, ಜನತಾ ಬಜಾರ್‌ನಲ್ಲಿ ಮಾರುಕಟ್ಟೆ ನಿರ್ಮಾಣ, ಈಜುಗೋಳ ಮರುನಿರ್ಮಾಣ, ಉಣಕಲ್‌ಕೆರೆ ಅಭಿವೃದ್ಧಿ ಮಾಡಿರುವುದು ಸೇರಿ ಒಟ್ಟು 59 ಯೋಜನೆಗಳ ಕಾಮಗಾರಿ ಎಚ್‌ಡಿಎಸ್‌ಸಿ ಎಲ್‌ನಿಂದ ಪೂರ್ಣಗೊಂಡಿದೆ. ಸಿದ್ಧವಾಗಿದ್ದ ಬಹುತೇಕ ಯೋಜನೆಗಳನ್ನು ಈ ಭಾಗದ ಜನಪ್ರತಿನಿಧಿಗಳು 2023 ವರ್ಷಾರಂಭದಲ್ಲಿಯೇ ಲೋಕಾರ್ಪಣೆ ಕೂಡಾ ನೆರವೇರಿಸಿದ್ದಾರೆ. ಆದರಲ್ಲಿ ಕೆಲವು ಯೋಜನೆಗಳು ಇನ್ನೂ ಬಳಕೆಗೆ ತೆರೆದುಕೊಂಡಿಲ್ಲ. ಈ ವರ್ಷ ನಡೆದ ಲೋಕಸಭೆ ಚುನಾವಣೆ ಮುಕ್ತಾಯವಾದ ಬಳಿಕವಷ್ಟೇ ಕಳೆದವಾರ ಎಲ್ಲಾ 59 ಯೋಜನೆಗಳನ್ನು ಹುಬ್ಬಳ್ಳಿ-ಧಾರವಾಡ ಮಹಾ ನಗರ ಪಾಲಿಕೆಗೆ ಎಚ್‌ಡಿಎಸ್‌ಸಿಎಲ್ ಅಧಿಕಾರಿಗಳು ಅಧಿಕೃತವಾಗಿ ಹಸ್ತಾಂತರಿಸಿದ್ದಾರೆ. ಹಸ್ತಾಂತರ ಪ್ರಕ್ರಿಯೆಗೂ ಮೊದಲೇ 8.5 ಕೋಟಿ ವೆಚ್ಚದ ಪಬ್ಲಿಕ್ ಬೈಸೈಕಲ್ ಶೇರಿಂಗ್ ಯೋಜನೆ, 20.51 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಮಾಡಿದ ತೋಳನಕೆರೆ, 2.59 ಕೋಟಿ ವೆಚ್ಚದ ವಿದ್ಯುತ್ ಚಿತಾಗಾರ, 21.44 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಮಾಡಿದ ನೆಹರು ಮೈದಾನ ಸೇರಿ ಬಹುತೇಕ ಯೋಜನೆಗಳು ಜನರು ಬಳಕೆ ಮಾಡುತ್ತಿದ್ದಾರೆ. ಆದರೆ, ಮಹಾನಗರ ಪಾಲಿಕೆಗೆ ಈಗ ಷ್ಟೇ ಹಸ್ತಾಂತರ ಮಾಡಲಾಗಿದೆ.

> ಸ್ಮಾರ್ಟ್ ಸಿಟಿ ಯೋಜನೆಯಡಿ ನಿರ್ಮಿಸಿರುವ ನೂತನ ಕಟ್ಟಡಗಳನ್ನು ಈಚೆಗೆ ಹಸ್ತಾಂತರ ಮಾಡಿದ್ದಾರೆ. ಈ ತಿಂಗಳು ನಡೆಯುವ ಪಾಲಿಕೆ ಸಾಮಾನ್ಯ ಸಭೆಯಲ್ಲಿ ವಿಷಯ ಮಂಡಿಸಿ ಕಟ್ಟಡಗಳ ಬಳಕೆಗೆ ಕ್ರಮ ವಹಿಸಲಾಗುವುದು
> -ಈಶ್ವರ ಉಳ್ಳಾಗಡ್ಡಿ
> ಹು-ಧಾ ಪಾಲಿಕೆ ಆಯುಕ್ತ

ಸ್ಮಾರ್ಟ್ ಸಿಟಿ ಯೋಜನೆಯಡಿ ಮಹಾನಗರ ವ್ಯಾಪ್ತಿಯಲ್ಲಿ ಕೈಗೊಂಡಿದ್ದ ವಿವಿಧ ಯೋಜನೆಗಳ ಪೈಕಿ ಪೂರ್ಣವಾದ 59 ಯೋಜನೆಗಳನ್ನು ಎಚ್‌ಡಿಎಸ್‌ಸಿಎಲ್ ಅಧಿಕಾರಿಗಳು ಇತ್ತೀಚೆಗೆ ಮಹಾನಗರ ಪಾಲಿಕೆಗೆ ಹಸ್ತಾಂತರ ಮಾಡಿದ್ದಾರೆ. ಈ ಬಗ್ಗೆ ಸವಿಸ್ತಾರ ವಿಷಯವನ್ನು ಮುಂಬರುವ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದುಕೊಳ್ಳಲಾಗುವುದು. ಪಾಲಿಕೆ ಸಾಮಾನ್ಯ ಸಭೆ ಅನುಮೋದನೆ ಹಾಗೂ ಸರ್ಕಾರದ ನಿರ್ದೇಶನಗಳನ್ನು ಆಧರಿಸಿ ನೂತನ ಮಾರುಕಟ್ಟೆಗಳ ಮಳಿಗೆಗಳನ್ನು ಹಸ್ತಾಂತರಿಸಲಾಗುವುದು' ಎಂದು ಮಹಾನಗರ ಪಾಲಿಕೆ ಆಯುಕ್ತ ಈಶ್ವರ ಉಳ್ಳಾಗಡ್ಡಿ ತಿಳಿಸಿದರು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 50:50 ಅನುಪಾತದಲ್ಲಿ ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ಸಿಟಿ ಯೋಜನೆಗೆ ಸಾವಿರ ಕೋಟಿ ಅನುದಾನಕ್ಕೆ ಮಂಜೂರಿ ನೀಡಿದ್ದು ಅಲ್ಲದೇ ಈವರೆಗೆ 857 ಕೋಟಿ ಅನುದಾನ ಬಿಡುಗಡೆ ಮಾಡಿವೆ. ಅದರಲ್ಲಿ ಎಚ್‌ಡಿಎಸ್‌ಸಿಎಲ್ 806 ಕೋಟಿ ವೆಚ್ಚಮಾಡಿ 59 ಯೋಜನೆಗಳನ್ನು ಪೂರ್ಣಗೊಳಿಸಿದೆ. ಉಣಕಲ್ ಕೆರೆ ಎರಡನೇ ಹಂತದಲ್ಲಿ 36.59 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಮಾಡುವುದು 39.63 ಕೋಟಿ ವೆಚ್ಚದಲ್ಲಿ ಹುಬ್ಬಳ್ಳಿ ಹಳೇ ಬಸ್ ನಿಲ್ದಾಣ ನಿರ್ಮಾಣ ಹಾಗೂ 160 ಕೋಟಿ ವೆಚ್ಚದಲ್ಲಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ನಿರ್ಮಾಣ ಮಾಡುವುದು ಸೇರಿ ಒಟ್ಟು ಮೂರು ಯೋಜನೆಗಳು ಇನ್ನೂ ಪ್ರಗತಿಯಲ್ಲಿವೆ. ಮೊದಲಿನ ಎರಡು ಕಾಮಗಾರಿಗಳು ಮುಕ್ತಾಯ ಹಂತಕ್ಕೆ ತಲುಪಿವೆ. ಆದರೆ ಕ್ರೀಡಾ ಸಂಕೀರ್ಣ ನಿರ್ಮಾಣ ಕಾಮಗಾರಿ ಶೇ 40 ರಷ್ಟು ಮಾತ್ರ ಪೂರ್ಣವಾಗಿದೆ.

ಚಾಲ್ತಿಯಲ್ಲಿರುವ ದರ ಆಧರಿಸಿ ಮಾರುಕಟ್ಟೆ ಬಾಡಿಗೆಯನ್ನೇ ನಿಗದಿ

ಹುಬ್ಬಳ್ಳಿಯ ಗಣೇಶಪೇಟೆಯಲ್ಲಿ 5.07 ಕೋಟಿ ವೆಚ್ಚದಲ್ಲಿ ನಿರ್ಮಾಣವಾದ ಮೀನು ಮಾರುಕಟ್ಟೆ ಹಾಗೂ ಚನ್ನಮ್ಮ ವೃತ್ತ ಪಕ್ಕದ ಜನತಾ ಬಜಾರ್‌ನಲ್ಲಿ 18.35 ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಮಾರುಕಟ್ಟೆಗಳು ಉದ್ಘಾಟನೆ ಆಗಿದ್ದರೂ ಬಳಕೆ ಆಗುತ್ತಿಲ್ಲ. ಇದರಿಂದ ಕೆಲವು ಸಮಸ್ಯೆ ಆಗುತ್ತಿರುವುದು ಗಮನಕ್ಕೆ ಬಂದಿದೆ. ಆದಷ್ಟು ಬೇಗನೆ ಪಾಲಿಕೆ ಸಭೆ ಅನುಮೋದನೆ ಪಡೆದು ಮಳಿಗೆಗಳನ್ನು ಸರ್ಕಾರಿ ನಿಯಮಾನುಸಾರ ಹಂಚಿಕೆ ಮಾಡುತ್ತೇವೆ. ನೂತನ ಮಾರುಕಟ್ಟೆ ನಿರ್ಮಾಣದ ಮೊದಲು ಹಳೇ ಮಳಿಗೆಗಳನ್ನು ಹೊಂದಿದವರಿಗೇ ಪ್ರಾಶಸ್ತ್ಯದಲ್ಲಿ ನೂತನ ಮಳಿಗೆ ವಹಿಸಲಾಗುತ್ತಿದೆ. ಚಾಲ್ತಿಯಲ್ಲಿರುವ ದರ ಆಧರಿಸಿ ಮಾರುಕಟ್ಟೆ ಬಾಡಿಗೆಯನ್ನೇ ನಿಗದಿ ಮಾಡಲಾಗುವುದು' ಎಂದು ಹೇಳಿದರು.

ಶಾಲೆಗಳ ಸೌಕರ್ಯಗಳ ಸಮಸ್ಯೆ; ಪರಿಹರಿಸದೆ ಇದ್ದಲ್ಲಿ ಪತ್ರ ಚಳವಳಿ

• ಉದಯವಾಹಿನಿ,ಚಂಚೋಳಿ

ತಾಲ್ಲೂಕಿನ 09 ಗ್ರಾ.ಪಂ,40 ಹಳ್ಳಿಗಳಲ್ಲಿ ಮಕ್ಕಳನ್ನು ಒಳಗೊಂಡು ತಾಲ್ಲೂಕಾ ಮಟ್ಟದ ಮಕ್ಕಳ ಹಕ್ಕುಗಳ ಗುಂಪುಗಳ ವೇದಿಕೆ ಸಿದ್ಧವಾಗಿದ್ದು ಗ್ರಾಮಗಳ ಸ್ಥಳೀಯ ಸಾಮಾಜಿಕ ಸಮಸ್ಯೆಗಳು, ಶಾಲೆಯ ಮೂಲಭೂತ ಸೌಕರ್ಯ ಸಮಸ್ಯೆಗಳು ಸೇರಿ ಹತ್ತಾರು ಸಮಸ್ಯೆಗಳು ಸಂಬಂಧಿಸಿದ ಇಲಾಖೆ ಗಮನಕ್ಕೂ ತಂದು ಪರಿಹರಿಸಲು ಧ್ವನಿ ಎತ್ತುತ್ತೇವೆ ಒಂದು ವೇಳೆ ಮಾಡದಿದ್ದರೆ ತಾಲ್ಲೂಕಾ ಮಟ್ಟದಿಂದ ರಾಜ್ಯ ಮಟ್ಟದವರೆಗೆ ಪತ್ರ ಚಳುವಳಿ ಹಮ್ಮಿಕೊಳ್ಳಲಾಗುವುದು ಎಂದು ಮಕ್ಕಳ ಹಕ್ಕು ಗುಂಪುಗಳ ಒಕ್ಕೂಟದ ಅಧ್ಯಕ್ಷೆ ಬಸಮ್ಮಾ ಹೇಳಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಮಕ್ಕಳ ಹಕ್ಕು ಗುಂಪುಗಳ ಒಕ್ಕೂಟ ವತಿಯಿಂದ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ಶಾಲೆಗಳಲ್ಲಿ ಆಟದ ಮೈದಾನ, ಕುಡಿಯುವ ನೀರು, ಗುಣಮಟ್ಟದ ಶಿಕ್ಷಣ ನೀಡುವುದು, ಬಿಸಿಯೂಟ, ಶಾಲಾಕಟ್ಟಡಗಳು, ಮಹಿಳಾ, ಪುರುಷ ಶೌಚಾಲಯ, ಶಿಕ್ಷಕರ ನೇಮಕ ಸೇರಿದಂತೆ ಮೂಲಭೂತ ಸೌಕರ್ಯಗಳನ್ನು ಪ್ರತಿಯೊಂದು ಶಾಲೆಗಳಲ್ಲಿ ಸರ್ಕಾರ ಮುತುವರ್ಜಿ ವಹಿಸಿದರೆ ಎಲ್ಲಾ ಮಕ್ಕಳು ಉತ್ತಮ ಶಿಕ್ಷಣ ಪಡೆದು ರಾಜ್ಯಕ್ಕೆ ಮಾದರಿಯಾಗುತ್ತಾರೆ. ಉಚಿತ, ಕಡ್ಡಾಯ ಶಿಕ್ಷಣ 2009ರ ಕಾಯ್ದೆ ದೇಶದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡದಿರುವುದು ಎದ್ದು ಕಾಣುತ್ತಿದೆ, 2016ರ ಕಾಯ್ದೆ ಪರಿಣಾಮಕಾರಿಯಾಗಿ ಜಾರಿಗೆ ತರಬೇಕು, 6 ರಿಂದ 14 ವರ್ಷದವರೆಗೆ ಮಕ್ಕಳಿಗೆ ಉಚಿತ ಕಡ್ಡಾಯ ಶಿಕ್ಷಣ ಸಿಗಬೇಕು ಕಡ್ಡಾಯವಾಗಿ ಎಲ್ಲಾ ಮಕ್ಕಳು ಶಾಲೆಯಲ್ಲಿರಬೇಕು ಆದರೆ ಶಾಲೆಗಳಲ್ಲಿ ಮೂಲಭೂತ ಸೌಕರ್ಯ ಇಲ್ಲದೆ ಶಿಕ್ಷಕರಿಲ್ಲದೆ ವಿವಿಧ ಸಮಸ್ಯೆಗಳಿಂದ ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಿದ್ದಾರೆ.

ಆರ್.ಎಲ್.ಹೆಚ್.ಪಿ ಸಂಸ್ಥೆಯ ನಿರ್ದೇಶಕರು ಸರಸ್ವತಿ, ಬೆಂಗಳೂರು ಕ್ರೈಸ್ಟ್ ವಿಶ್ವವಿದ್ಯಾಲಯ ಉಪನ್ಯಾಸಕರು ಹೇಮಾಲತಾ, ನಾಗರಾಜ ನಾಯಕ, ಸಂಪತ್ತ ಕಟ್ಟಿ, ಸರೋಭಾಯಿ, ಐಶ್ವರ್ಯ, ಸ್ವಾತಿ, ಜೈಭೀಮ, ನರೇಶ, ಅನೇಕರಿದ್ದರು.

> ವಿಶ್ವ ಬಾಲಕಾರ್ಮಿಕರ ವಿರೋಧಿ ದಿನಾಚರಣೆ ಕಾರ್ಯಕ್ರಮ ಒಂದುದಿನಕ್ಕೆ ಸೀಮಿತಗೊಳಿಸದೆ ನಿರಂತರ ಜಾಗೃತಿ ಕಾರ್ಯಕ್ರಮಗಳು ಬಾಲಕಾರ್ಮಿಕ ಪತ್ತೆ ದಾಳಿಗಳು ನಡೆಸಿ ಪುನರ್ವಸತಿ ಕೇಂದ್ರಗಳಲ್ಲಿ ಮಕ್ಕಳ ರಕ್ಷಣೆ ಸಮಗ್ರವ್ಯವಸ್ಥೆಯನ್ನು ಖಾತರಿ ಪಡಿಸಬೇಕು, ರಾಜ್ಯದಲ್ಲಿರುವ 48 ಸಾವಿರ ಶಿಕ್ಷಕರ ಹುದ್ದೆಗಳು ಭರ್ತಿಗೊಳಿಸಬೇಕು, ರಾಜ್ಯ ಸರ್ಕಾರವು ಮಕ್ಕಳಿಗೆ ವಿತರಣೆ ಮಾಡುವ ಸೈಕಲ್ ಯೋಜನೆ ಪುನಃ ಪ್ರಾರಂಭಿಸಬೇಕು, ಮಕ್ಕಳಿಗೆ ಶಾಲೆಗೆ ತೆರಳಲು ಸಮಯಕ್ಕೆ ತಕ್ಕಂತೆ ಬಸ್ ವ್ಯವಸ್ಥೆ ಮಾಡಬೇಕು
> - ಬಸಮ್ಮಾ, ಅಧ್ಯಕ್ಷೆ

ನೀರಿನ ತೊಟ್ಟಿ, ಗುಮ್ಮಿ, ಬೋರ್‌ವೆಲ್ ಸುತ್ತಮುತ್ತಲಿನ ಪ್ರದೇಶ ಸ್ವಚ್ಛತೆಗೆ ಆದ್ಯತೆ ನೀಡಲು: ತಾಪಂ.ಇಓ ಸೂಚನೆ

• ಉದಯವಾಹಿನಿ,ಚಂಚೋಳಿ

ಉದಯವಾಹಿನಿ ಚಿತ್ರ

ಮಳೆಗಾಲ ಪ್ರಾರಂಭವಾಗಿರುವುದರಿಂದ ಸಾಂಕ್ರಾಮಿಕ ರೋಗಗಳಾದ ಮಲೇರಿಯಾ, ಡೆಂಗ್ಯೂ, ಚಿಕನ್ ಗುನ್ಯಾ, ವಾಂತಿ ಭೇದಿ, ಕಾಲರಾ ಹಾಗೂ ಕಾಮಾಲೆ ರೋಗಗಳು ಹರಡದಂತೆ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಕುರಿತು ಪಿಡಿಓ, ಪಂಪ್ ಆಪರೇಟರ್ ರವರಿಗೆ ಮನವರಿಕೆ ಮಾಡಲಾಗಿದೆ ಎಂದು ತಾಲ್ಲೂಕಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಶಂಕರ ರಾಠೋಡ್ ಹೇಳಿದರು.

ಪಟ್ಟಣದ ಚಂದಾಪೂರದ ತಾಪಂ.ಸಭಾಂಗಣದಲ್ಲಿ ಜಲ ಜೀವನ್ ಮಿಷನ್ ಮತ್ತು ಸ್ವಚ್ಛ ಭಾರತ ಮಿಷನ್ ಯೋಜನೆ ಯಡಿಯಲ್ಲಿ ಮಾಹಿತಿ, ಶಿಕ್ಷಣ ಮತ್ತು ಸಂವಹನ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮಗಳ ತರಬೇತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಳೆಗಾಲ ಆರಂಭ ಆಗಿರುವುದರಿಂದ ಗ್ರಾಪಂ ವ್ಯಾಪ್ತಿಯಲ್ಲಿ ಸಾರ್ವಜನಿಕರು ಕುಡಿಯುವ ನೀರು ಉಪಯೋಗಿಸುತ್ತಿರುವ ಪ್ರತಿಯೊಂದು ಬೋರವೇಲ್, ತೆರೆದ ಭಾವಿಯ ನೀರು ತಪ್ಪದೆ ತಪಾಸಣೆ ಮಾಡಿ ನೀರು ಸರಬರಾಜು ಮಾಗಬೇಕು ಎಂದರು.

ಈ ಸಂದರ್ಭದಲ್ಲಿ ತಾಲ್ಲೂಕಾ ವೈದ್ಯಾಧಿಕಾರಿ ಮಹ್ಮದ್ ಗಫಾರ್, ಸಹಾಯಕ ನಿರ್ದೇಶಕರು ಪಂಚಾಯತ್ ರಾಜ್ ನಾಗೇಂದ್ರಪ್ಪಾ, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಜೆಇ ಯುವರಾಜ, ಲ್ಯಾಬ್ ಟೆಕ್ನಿಷನ್ ಮಂಜುನಾಥ ಜಮಾದಾರ, ಸಂತೋಷ ಮೂಲಗೆ, ರಾಜಶೇಖರ, ಕ್ಲರ್ಕ ಕಂ ಡಾಟಾ ಎಂಟ್ರಿ ಆಪರೇಟರ್, ಪಂಪ್ ಆಪರೇಟರ್, ತಾಪಂ. ಸಿಬ್ಬಂದಿಯವರು ಹಾಜರಿದ್ದರು.

ನೇಹಾ ತಂದೆಯ ಆಪ್ತ ಸಹಾಯಕನ ಕಿಡ್ನ್ಯಾಪ್‌ಗೆ ಯತ್ನ

• ಉದಯವಾಹಿನಿ, ಹುಬ್ಬಳ್ಳಿ

ಮೃತ ವಿದ್ಯಾರ್ಥಿನಿ ನೇಹಾ ತಂದೆ ನಿರಂಜನ್ ಹಿರೇಮಠ ಆಪ್ತ ಸಹಾಯಕನನ್ನು ಮೂವರ ಗ್ಯಾಂಗ್‌ವೊಂದು ಕಿಡ್ನ್ಯಾಪ್ ಮಾಡಲು ಯತ್ನಿಸಿದ ಘಟನೆ ನಡೆದಿದೆ.

ಹುಬ್ಬಳ್ಳಿಯ ಘಂಟಿಕೇರಿ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ವಿಜಯ್ ಅಲಿಯಾಸ್ ಈರಣ್ಣ ಅವರನ್ನು ಬೆಳಿಗ್ಗೆ 5 ಗಂಟೆ ಸುಮಾರಿಗೆ ಕರೆಂಟ್ ಬಾಕ್ಸ್ ಬಂದ್ ಮಾಡಿ ವಾಲ್ವೇಕರ್ ಗಲ್ಲಿ ಗಜಾನನ ಬ್ಯಾಂಕ್ ಎದುರುಗಡೆ ಅಪಹರಣಕ್ಕೆ ಯತ್ನಿಸಲಾಗಿದೆ ಎಂಬ ಆರೋಪ ಕೇಳಿ ಬಂದಿದೆ.

ಕಾರಿನಲ್ಲಿ ಬಂದ ಮೂವರ ಗುಂಪೊಂದು ವಿಜಯ್‌ನನ್ನು ಕಾರು ಹತ್ತುವಂತೆ ಒತ್ತಾಯಿಸಿದ್ದಾರೆ. ಆಗ ವಿಜಯ್ ನಾನು ಯಾಕೆ ಕಾರ್ ಹತ್ತುಬೇಕೆಂದು ಪ್ರಶ್ನಿಸಿ ಜೇಬಿನಲ್ಲಿದ್ದ ಮೊಬೈಲ್ ತೆಗೆದು ವಿಡಿಯೋ ಮಾಡಲು ಮುಂದಾಗಿದ್ದಾರೆ. ಬಳಿಕ ಮೂವರು ತಪ್ಪಿಸಿಕೊಂಡ ಓಡಿ ಹೋಗಿದ್ದಾರೆ. ಘಟನೆಯ ಹಿನ್ನೆಲೆಯಲ್ಲಿ ಪೊಲೀಸರಿಗೆ ಮಾಹಿತಿ ನೀಡಿದ್ದು, ಕೂಡಲೇ ಸ್ಥಳಕ್ಕೆ ಆಗಮಿಸಿದ ಪೊಲೀಸರು ವಿಜಯ್‌ನನ್ನು ರಕ್ಷಿಸಿ ಮಾಹಿತಿ ಪಡೆದುಕೊಂಡಿದ್ದಾರೆ.

ಉದಯವಾಹಿನಿ ಚಿತ್ರ

ಈ ಬಗ್ಗೆ ಘಂಟಿಕೇರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಸದ್ಯ ಘಟನೆ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಕಿಡ್ನಾಪ್ ಮಾಡಲು ಯತ್ನಿಸಿದ ಘಟನೆ ಬ್ಯಾಂಕ್‌ನ ಸಿಸಿ ಟಿವಿ ಕ್ಯಾಮರಾದಲ್ಲಿ ಸೆರೆ ಆಗಿದ್ದು, ಅಪಹರಣ ಮಾಡಲು ಬಂದವರು ಯಾರು ಯಾವ ಕಾರಣಕ್ಕೆ ಅಪಹರಣ ಮಾಡಲು ಯತ್ನಿಸಿದರು ಎಲ್ಲವನ್ನೂ ಪೊಲೀಸರು ಪರಿಶೀಲನೆ ಮಾಡುತ್ತಿದ್ದಾರೆ.

ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಪಕ್ಷದಿಂದ ರಸ್ತಾ ರೋಕ

• ಉದಯವಾಹಿನಿ, ಸಿಂಧನೂರು

ಕಾಂಗ್ರೇಸ್ ಪಕ್ಷ ಅಧಿಕಾರಕ್ಕೆ ಬಂದ ಇನ್ನು ಎರಡು ವರ್ಷಗಳ ಕಳೆದಿಲ್ಲ, ಇವತ್ತು ಪೆಟ್ರೋಲ್- ಡಿಸೇಲ್ ಮುದ್ರಾಂಕ ಶುಲ್ಕ ಆಸ್ತಿ ತೆರಿಗೆ ವಸೂಲಿ. ದಿನ ಬಳಕೆ ವಸ್ತುಗಳ ಬೆಲೆ ಏರಿಕೆ ಹೆಚ್ಚಳದಿಂದ ಬಡವರು ಮಧ್ಯವರ್ತಿಗಳು ವ್ಯಾಪಾರಸ್ಥರ ಜನರು ಸೇರಿ ಕಷ್ಟ ಅನುಭವಿಸುತ್ತಿದ್ದಾರೆ. ಇದರಿಂದ ಬೆಲೆ ಏರಿಕೆ ಖಂಡಿಸಿ ಬೆಳಿಗ್ಗೆ ಬಿಜೆಪಿ ಪಕ್ಷದ ವತಿಯಿಂದ ರಸ್ತಾ ರೋಕ ಮಾಡಲಾಗುತ್ತದೆ ಎಂದು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಬಿಜೆಪಿ ಪಕ್ಷದ ಮುಖಂಡರಾದ ಎಮ್ ದೊಡ್ಡ ಬಸವರಾಜ ಅವರು ಕಾಂಗ್ರೇಸ್ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಇನ್ನೂ ಎರಡು ವರ್ಷಗಳು ಕಳೆದಿಲ್ಲ. ಚುನಾವಣೆ ಮುಗಿದ ತಕ್ಷಣ ಪೆಟ್ರೋಲ್ ಡೀಸೆಲ್ ಹಾಗೂ ದಿನ ಬಳಕೆ ವಸ್ತುಗಳ ಬೆಲೆ ಏರಿಕೆ. ಮತ್ತು ಆಸ್ತಿ ತೆರಿಗೆ ಮುದ್ರಾಂಕ ಶುಲ್ಕ ಇತರರು ಶುಲ್ಕಗಳು ಹೆಚ್ಚಳ ಕುರಿತು ಈಗಾಗಲೇ ಸಾರ್ವಜನಿಕರು ಕಷ್ಟದಲ್ಲಿ ಜೀವನವನ್ನು ನಡೆಸುತ್ತಿರುವ ಖಂಡಿಸಿ ರಸ್ತಾ ರೋಕ ನಡೆಸಲಾಗುತ್ತಿದೆ.

ಉದಯವಾಹಿನಿ ಚಿತ್ರ

ಜನರಿಗೆ ಚುನಾವಣೆ ಹಿನ್ನೆಲೆಯಲ್ಲಿ ಗ್ಯಾರಂಟಿ ಯೋಜನೆಗಳನ್ನು ಸರ್ಕಸ್ ಕಂಪನಿ ಮೂಲಕ ಅಧಿಕಾರವನ್ನು ಸ್ವೀಕಾರ ಮಾಡಿದ್ದಾರೆ. ವ್ಯಂಗ್ಯವಾಡಿದರು. ಶಿವಬಸವ ಗೌಡ. ತಿಮ್ಮಾರೆಡ್ಡಿ ಹುಡಾ ಕುಪೇಂದ್ರಪ್ಪ ನಾಯಕ ಇನ್ನಿತರರಿದ್ದರು.

> ನಮ್ಮ ಸರ್ಕಾರದ ವಿರುದ್ಧ ತೈಲ ಬೆಲೆ ಹೆಚ್ಚಳ ಏರಿಕೆ ವಿರುದ್ಧ ಇದು ಕಾಂಗ್ರೇಸ್ ಪಕ್ಷದ ನಾಯಕರು ಹೋರಾಟ ಮಾಡಿದ್ದು. ಇವತ್ತು ಕಾಂಗ್ರೇಸ್ ಪಕ್ಷದ ಮುಖಂಡರು ಮರೆತಿದ್ದಾರೆ. ನಮ್ಮ ರಾಜ್ಯ ನಾಯಕರು ಆದೇಶದಂತೆ ರಾಜ್ಯಾದ್ಯಂತ ಹೋರಾಟವನ್ನು ನಡೆಸಲಾಗುತ್ತಿದೆ. ಆದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಭಾಗವಹಿಸಿ ಹೋರಾಟವನ್ನು ಬೆಂಬಲಿಸಿ
> -ರಾಜೇಶ್ ಹಿರೇಮಠ, ಮುಖಂಡ

ದೈಹಿಕ ಶಿಕ್ಷಕರ ಕೊರತೆಯಿಂದ ಕ್ರೀಡಾ ಪ್ರತಿಭೆಗಳಿಗೆ ತೊಡಕು

• ಉದಯವಾಹಿನಿ, ಸಿರುಗುಪ್ಪ

ತಾಲ್ಲೂಕಿನಾದ್ಯಂತ ಅನೇಕ ಸರ್ಕಾರಿ ಶಾಲೆಗಳಲ್ಲಿ ಮೈದಾನದ ಕೊರತೆ ಹಾಗೂ ದೈಹಿಕ ಶಿಕ್ಷಕರ ಕೊರತೆಯಿಂದಾಗಿ ಕ್ರೀಡಾಸಕ್ತಿಯುಳ್ಳ ವಿದ್ಯಾರ್ಥಿಗಳ ಕನಸು ನನಸಾಗದೇ ಉಳಿದಿದ್ದು, ಕ್ರೀಡಾ ಪ್ರತಿಭೆಗಳ ಬೆಳವಣಿಗೆಗೆ ತೊಡಕಾಗಿದೆ.

ಸಹಶಿಕ್ಷಕರ ತರಬೇತಿಯೊಂದಿಗೆ ಪ್ರತಿವರ್ಷ ನಡೆಯುವ ಶಾಲಾ ಕ್ರೀಡೆಗಳಲ್ಲಿ ಗ್ರಾಮೀಣ ಭಾಗದ ವಿದ್ಯಾರ್ಥಿಗಳ ಪೈಪೋಟಿ ವಲಯ ಮಟ್ಟಕ್ಕೆ ಮಾತ್ರ ಸೀಮಿತವಾಗಿದೆ. ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಮಗುವಿನಲ್ಲಿನ ಕ್ರೀಡಾಭಿಮಾನಕ್ಕೆ ಪ್ರಾಥಮಿಕ ಮತ್ತು ಪ್ರೌಡಶಾಲಾ ಹಂತದಲ್ಲಿ ಮಕ್ಕಳ ಭೌದ್ಧಿಕ ಮಟ್ಟದ ಉನ್ನತಿಗೆ ದೈಹಿಕ ಬೆಳವಣಿಗೆಯು ಅಗ

ದಿನ ಭವಿಷ್ಯ

ರಾಹುಕಾಲ	ಮಧ್ಯಾಹ್ನ	01:30 ರಿಂದ 03:00
ಗುಳಿಕ ಕಾಲ	ಬೆಳಿಗ್ಗೆ	09:00 ರಿಂದ 10:30
ಯಮಗಂಡ ಕಾಲ	ಬೆಳಿಗ್ಗೆ	06:00 ರಿಂದ 07:30

ಮೇಷ ಒಂದು ಶಾಂತಿಯುತ ಮತ್ತು ಶಾಂತ ದಿನವನ್ನು ಆನಂದಿಸಿ. ಜನರು ಸಮಸ್ಯೆಗಳೊಡನೆ ನಿಮ್ಮನ್ನು ಸಮೀಪಿಸಿದರೆ – ಅವರನ್ನು ನಿರ್ಲಕ್ಷಿಸಿ ಮತ್ತು ನಿಮ್ಮ ಮನಸ್ಸಿನಲ್ಲಿ ಈ ಚಿಂತೆ ಬೇರೂರಲು ಅವಕಾಶ ನೀಡಬೇಡಿ.

ವೃಷಭ ನಿಮಗೆ ಹತ್ತಿರವಿರುವ ಯಾರಾದರೂ ಅತ್ಯಂತ ಅನಿರೀಕ್ಷಿತ ಮನಸ್ಥಿತಿಯಲ್ಲಿರುತ್ತಾರೆ. ಕೆಲವರಿಗೆ ಹೊಸ ಪ್ರಣಯ ನಿಮ್ಮ ಚೈತನ್ಯವನ್ನು ಪ್ರೇರೇಪಿಸಬಹುದು ಹಾಗೂ ನಿಮ್ಮನ್ನು ಹರ್ಷಚಿತ್ತರಾಗಿರಿಸಬಹುದು.

ಮಿಥುನ ಕೆಲಸದಲ್ಲಿ ಹಿರಿಯರಿಂದ ಒತ್ತಡ ಮತ್ತು ಮನೆಯಲ್ಲಿ ಅಪಶ್ರುತಿ ನಿಮ್ಮ ಏಕಾಗ್ರತೆಗೆ ತೊಂದರೆ ತರಬಹುದು. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ.

ಕರ್ಕಾಟಕ ಅತಿಯಾಗಿ ತಿನ್ನುವುದನ್ನು ತಪ್ಪಿಸಿ ಮತ್ತು ಫಿಟ್ ಆಗಿ ಉಳಿಯಲು ನಿಯಮಿತವಾಗಿ ಹೆಲ್ತ್ ಕ್ಲಬ್‌ಗೆ ಭೇಟಿ ನೀಡಿ. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ.

ಸಿಂಹ ನೀವೇ ಮರುಚೈತನ್ಯ ಹೊಂದುತ್ತೀರಿ. ತನ್ನ ಹಣವನ್ನು ಹೇಗೆ ಸಂಗ್ರಹಿಸುವುದು ಎಂಬ ಈ ಕೌಶಲ್ಯವನ್ನು ಇಂದು ನೀವು ಕಲಿಯಬಹುದು ಮತ್ತು ಈ ಕೌಶಲ್ಯವನ್ನು ಕಲಿತು ನೀವು ನಿಮ್ಮ ಹಣವನ್ನು ಉಳಿಸಬಹುದು.

ಕನ್ಯಾ ನೀವು ಕೆಲಸದಲ್ಲಿ ಅಭಿನಂದನೆಗಳನ್ನು ಪಡೆಯಬಹುದು. ಜನರು ನಿಮ್ಮ ಮನೆಯ ಬಗ್ಗೆ ಏನು ಯೋಚಿಸುತ್ತಾರೆ ಎಂದು ಇಂದು ನಿಮಗೆ ಈ ವಿಷಯದಿಂದ ಯಾವುದೇ ವ್ಯತ್ಯಾಸ ಬೀಳುವುದಿಲ್ಲ.

ತುಲಾ ಇಂದು ಷೇರು ಮಾರುಕಟ್ಟೆಯಲ್ಲಿ ಹಣವನ್ನು ಹೂಡಿಕೆ ಮಾಡುವವರು ತಮ್ಮ ಹಣವನ್ನು ಕಳೆದುಕೊಳ್ಳಬಹುದು. ಸಮಯಕ್ಕೆ ನೀವು ಜಾಗರೂಕರಾಗಿದ್ದರೆ ಅದು ನಿಮಗೆ ಉತ್ತಮವಾಗಿರುತ್ತದೆ.

ವೃಶ್ಚಿಕ ನೀವು ಇಂದು ನಿಮ್ಮ ಸಿಹಿಯಾದ ಪ್ರೀತಿಯ ಜೀವನದಲ್ಲಿನ ಉತ್ಕಟತೆಯನ್ನು ಆನಂದಿಸುತ್ತೀರಿ. ನಿಮ್ಮ ಮೇಲಿನವರಿಗೆ ಇಂದು ನಿಮ್ಮ ಕೆಲಸದ ಗುಣಮಟ್ಟ ಒಳ್ಳೆಯ ಪ್ರಭಾವ ಬೀರಬಹುದು.

ಧನಸ್ಸು ಮನೆಯ ಸೌಂದರ್ಯದ ಜೊತೆಗೆ ಮಕ್ಕಳನ್ನೂ ನೋಡಿಕೊಳ್ಳಿ. ಮಕ್ಕಳಿಲ್ಲದ ಮನೆಗಳು ಕ್ರಮಬದ್ಧವಾಗಿದ್ದರೂ ಕೂಡ ಆತ್ಮವಿಲ್ಲದಂತಿರುತ್ತವೆ. ಮಕ್ಕಳು ಮನೆಗಳಿಗೆ ಒಂದು ಆನಂದ ಮತ್ತು ಸಂತೋಷ ತರುತ್ತಾರೆ.

ಮಕರ ಇಂದು ನೀವು ಚೈತನ್ಯಯುಕ್ತವಾಗಿರುತ್ತೀರಿ. ನೀವೇನೇ ಮಾಡಿದರೂ ಸಾಮಾನ್ಯವಾಗಿ ನೀವು ತೆಗೆದುಕೊಳ್ಳುವ ಅರ್ಥ ಸಮಯದಲ್ಲಿ ಅದನ್ನು ಮಾಡಲು ನಿಮಗೆ ಸಾಧ್ಯವಾಗುತ್ತದೆ. ಹಣದ ಲಾಭ ನಿಮ್ಮ ನಿರೀಕ್ಷೆಯಂತಿರುವುದಿಲ್ಲ.

ಕುಂಭ ನಿಮ್ಮ ವಿಶ್ವಾಸ ಮತ್ತು ಚೈತನ್ಯ ಇಂದು ಅಧಿಕವಾಗಿರುತ್ತದೆ. ನೀವು ಸಾಲ ತೆಗೆದುಕೊಳ್ಳಲು ಹೊರಟಿದ್ದರೆ ಮತ್ತು ಈ ಕೆಲಸದಲ್ಲಿ ದೀರ್ಘಕಾಲ ತೊಡಗಿಸಿಕೊಂಡಿದ್ದರೆ, ಇಂದು ನೀವು ಸಾಲ ಪಡೆಯಬಹುದು.

ಮೀನ ಮಕ್ಕಳ ನಿಮ್ಮ ಸಂಜೆಯನ್ನು ಉಲ್ಲಾಸಮಯವಾಗಿಸುತ್ತಾರೆ. ಒತ್ತಡದ ದಿನಕ್ಕೆ ಮಂಗಳ ಹಾಡಲು ಒಂದು ಸಂತೋಷಕೂಟವನ್ನು ಯೋಜಿಸಿ. ಮಕ್ಕಳ ಸಾಂಗತ್ಯ ನಿಮ್ಮ ದೇಹವನ್ನು ಪುನಶ್ಚೇತನಗೊಳಿಸುತ್ತದೆ.

ಪಾಳುಬಿದ್ದಿದೆ 'ಮುಳುಗಡೆ' ಪ್ರದೇಶದ ಅಸ್ಮಿತೆ

ಪಾಳು ಬಿದ್ದಿರುವ ಮ್ಯೂಸಿಯಂಗೆ ಸರ್ಕಾರ ಮರುಜೀವ ಕೊಡಲಿ: ಪಟ್ಟಣ ಪಂಚಾಯ್ತಿ ಮಾಜಿ ಅಧ್ಯಕ್ಷ ವಿ.ಸಂತೋಷಕುಮಾರ್

• ಉದಯವಾಹಿನಿ ಶಿವಮೊಗ್ಗ

ಸಾಗರ ತಾಲ್ಲೂಕಿನ ಕಾರ್ಗಲ್ ಬಳಿಯ ಲಿಂಗನಮಕ್ಕಿ ಅಣೆಕಟ್ಟೆ ಪರಿಸರದಲ್ಲಿ ಮುಳುಗಡೆ ಸಂತ್ರಸ್ತರ 'ತ್ಯಾಗ'ದ ಕಥನ ಹೇಳುತ್ತಿದ್ದ ವಿಶಿಷ್ಟ ಮ್ಯೂಸಿಯಂ ಈಗ ಜನಸಂಪರ್ಕವಿಲ್ಲದೇ ಪಾಳು ಬಿದ್ದಿದೆ.

ಲಿಂಗನಮಕ್ಕಿ ಅಣೆಕಟ್ಟೆ ಪೂರ್ಣಗೊಂಡ ನಂತರ ಮುಳುಗಡೆ ಆಗಲಿದ್ದ ಶರಾವತಿ ಕಣಿವೆಯ ಗ್ರಾಮಗಳು ಹಾಗೂ ಜನವಸತಿಯಲ್ಲಿನ ಮಾಸ್ತಿ ಕಲ್ಲು, ವೀರಗಲ್ಲು, ಶಿಲಾ ಶಾಸನಗಳು, ಶಿಲಾ ಮೂರ್ತಿಗಳು ಹಾಗೂ ಧಾರ್ಮಿಕ ಮಹತ್ವದ ಕುರುಹುಗಳ ಸಂಗ್ರಹಿಸಿ ತರಲಾಗಿತ್ತು. ಸರ್ಕಾರ 1958ರಲ್ಲಿ ಜಲಾಶಯದ ಪರಿಸರದಲ್ಲಿಯೇ ಮ್ಯೂಸಿಯಂ ನಿರ್ಮಿಸಿ ಅವುಗಳನ್ನು ಅಲ್ಲಿಯೇ ಕಾಪಿಟ್ಟಿದೆ. ಮುಳುಗಡೆ ಪ್ರದೇಶದ ಸಾಂಸ್ಕೃತಿಕ ಹಾಗೂ ಐತಿಹಾಸಿಕ ಕಥನಕ್ಕೆ ವರ್ತಮಾನದಲ್ಲಿ ಸಾಕ್ಷಿಯಾಗಿರುವ ಮ್ಯೂಸಿಯಂ ಸುಸಜ್ಜಿತ ಕಟ್ಟಡ ಹೊಂದಿದೆ. ಅದರೊಳಗೆ ಈ ಅಮೂಲ್ಯ ವಸ್ತುಗಳನ್ನು ಸಂಗ್ರಹಿಸಿ ಇಡಲಾಗಿದೆ. ಕಟ್ಟಡದ ಅಂಗಳ ಸೇರಿದಂತೆ ಸುತ್ತಲಿನ ಪರಿಸರದಲ್ಲೂ ಕೆಲವು ಪ್ರಾಚ್ಯವಸ್ತುಗಳಿಗೆ ಜಾಗ ನಿಗದಿಗೊಳಿಸಲಾಗಿದೆ.

ಭದ್ರತೆಯ ಕಾರಣಕ್ಕೆ ಲಿಂಗನಮಕ್ಕಿ ಜಲಾಶಯಕ್ಕೆ ಪ್ರವಾಸಿಗರ ಭೇಟಿಗೆ ಸರ್ಕಾರ ನಿರ್ಬಂಧ ವಿಧಿಸಿದ್ದು, ಕರ್ನಾಟಕ ಕೈ ಗಾರಿಕಾ ಭದ್ರತಾ ದಳದ (ಕೆಎಸ್ ಐಎಸ್‌ಎಫ್) ಯೋಧರು ಅಲ್ಲಿ ಸತತ ಕಾವಲು ಕಾಯುತ್ತಾರೆ. ಹೀಗಾಗಿ ಮ್ಯೂಸಿಯಂ ವೀಕ್ಷಣೆಗೆ ಪ್ರವಾಸಿಗರು ಬರುತ್ತಿಲ್ಲ. ಸಹಜವಾಗಿಯೇ ಮ್ಯೂಸಿಯಂ ಕಟ್ಟಡ ಜನಮಾನಸದಿಂದ ದೂರವಾಗಿ ಹಾಳು ಸುರಿಯುತ್ತಿದೆ. ಪಕ್ಕದಲ್ಲಿಯೇ ಹೆಲಿಪ್ಯಾಡ್, ಉದ್ಯಾನವನ ಇದ್ದು, ಎಲ್ಲವೂ ಸುಸ್ಥಿತಿಯಲ್ಲಿವೆ. ಲೋಕೋಪಯೋಗಿ ಇಲಾಖೆ ಮ್ಯೂಸಿಯಂ ನಿರ್ಮಿಸಿದ್ದರೂ ಸದ್ಯ ಕರ್ನಾಟಕ ವಿದ್ಯುತ್ ನಿಗಮದ (ಕೆಪಿಸಿ) ಸುಪರ್ದಿಯಲ್ಲಿದೆ.

ಮ್ಯೂಸಿಯಂನಲ್ಲಿ ಇಟ್ಟಿರುವ ಪ್ರಾಚ್ಯ ಕುರುಹುಗಳು ದೂಳು ಹಿಡಿದಿವೆ. ಕಟ್ಟಡದ ಹೊರಭಾಗದಲ್ಲಿನ ಕುರುಹುಗಳು, ಮಾಹಿತಿ ಫಲಕಗಳ ಸುತ್ತಲೂ ಗಿಡಗಳು ಬೆಳೆದಿವೆ. ಮಕ್ಕಳ ಆಟಿಕೆ ಸಾಮಗ್ರಿ ಹಾಗೂ ಶರಾವತಿ ಕಣಿವೆಯ ಜಲವಿದ್ಯುತ್ ಯೋಜನೆಗಳ ಮಾದರಿಯೂ ಮುರಿದುಬಿದ್ದಿದೆ.

ಉದಯವಾಹಿನಿ ಚಿತ್ರ

ತ್ಯಾಗದ ಕಥನ ಹೇಳುತ್ತಿದ್ದ ಮ್ಯೂಸಿಯಂ

ಮ್ಯೂಸಿಯಂನಲ್ಲಿರುವುದು ಬರೀ ಶರಾವತಿ ಮುಳುಗಡೆ ಪ್ರದೇಶದಲ್ಲಿ ದೊರೆತ ಕುರುಹುಗಳಲ್ಲ. ಬದಲಿಗೆ ಅವೆಲ್ಲವೂ ಸಂತ್ರಸ್ತರ ಅಸ್ಮಿತೆ. ಹೀಗಾಗಿ ಪಾಳು ಬಿದ್ದಿರುವ ಮ್ಯೂಸಿಯಂಗೆ ಸರ್ಕಾರ ಮರುಜೀವ ಕೊಡಲಿ' ಎಂದು ಕಾರ್ಗಲ್ ಪಟ್ಟಣ ಪಂಚಾಯ್ತಿ ಮಾಜಿ ಅಧ್ಯಕ್ಷ ವಿ.ಸಂತೋಷಕುಮಾರ್ ಒತ್ತಾಯಿಸುತ್ತಾರೆ.

ಹಿರಿಯ ಸಾಹಿತಿ ನಾ.ಡಿಸೋಜಾ ಅವರ ಮುಳುಗಡೆ' ಕಾದಂಬರಿಯ ಕಥಾ ವಸ್ತುವೂ ಈ ಮ್ಯೂಸಿಯಂ ನಿರ್ಮಾಣದ ಸಂಗತಿಯೇ ಆಗಿತ್ತು ಎಂಬುದು ವಿಶೇಷ. ಶರಾವತಿ ಕಣಿವೆಯ ಮುಳುಗಡೆ ಪ್ರದೇಶದಲ್ಲಿನ ಈ ಸಾಂಸ್ಕೃತಿಕ ಕುರುಹುಗಳ ಗುರುತಿಸಿ ಮ್ಯೂಸಿಯಂಗೆ ತರುವ ಪ್ರಯತ್ನದಲ್ಲಿಯೇ ಸಂತ್ರಸ್ತರ ತಲ್ಲಣಗಳನ್ನು ಈ ಕೃತಿ ಕಟ್ಟಿಕೊಡುತ್ತದೆ. ಹೀಗಾಗಿ ಮ್ಯೂಸಿಯಂಗೆ ಕನ್ನಡ ಸಾರಸ್ವತ ಲೋಕದಲ್ಲೂ ಮಹತ್ವವಿದೆ.

ಪ್ರಾಚ್ಯವಸ್ತು ಸಂರಕ್ಷಣಾ ಇಲಾಖೆಯವರು ನಂತರ ಅದರ ನಿರ್ವಹಣೆಗೆ ಗಮನ ಕೊಡಲಿಲ್ಲ. ಲೋಕೋಪಯೋಗಿ ಇಲಾಖೆ ಪ್ರಾಚ್ಯವಸ್ತು ಸಂರಕ್ಷಣಾ ಇಲಾಖೆ ನಡುವಿನ ತಿಕ್ಕಾಟದಲ್ಲಿ ಮ್ಯೂಸಿಯಂ ಅನಾಥವಾಗಿದೆ' ಎಂದು ಖೇದ ವ್ಯಕ್ತಪಡಿಸುತ್ತಾರೆ.

184 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿ

ರಾಜ್ಯ ಸರ್ಕಾರ 184 ಕೋಟಿ ವೆಚ್ಚದಲ್ಲಿ ಜೋಗ ಜಲಪಾತದ ಪರಿಸರದಲ್ಲಿ ಬೇರೆ ಬೇರೆ ಅಭಿವೃದ್ಧಿ ಕಾಮಗಾರಿ ಕೈಗೊಂಡಿದೆ. ಅಲ್ಲಿಗೆ ಈ ಮ್ಯೂಸಿಯಂ ಸ್ಥಳಾಂತರಿಸಲಿ ಎಂದು ಕಾರ್ಗಲ್ ಪಟ್ಟಣ ಪಂಚಾಯ್ತಿ ಮಾಜಿ ಅಧ್ಯಕ್ಷ ವಿ.ಸಂತೋಷಕುಮಾರ್ ಒತ್ತಾಯಿಸುತ್ತಾರೆ. ಜೋಗ ಜಲಪಾತ ವೀಕ್ಷಣೆಗೆ ರಾಜ್ಯದ ಹಾಗೂ ದೇಶ-ವಿದೇಶದ ಪ್ರವಾಸಿಗರು ನಿರಂತರವಾಗಿ ಬರುತ್ತಾರೆ. ಅವರು ವೀಕ್ಷಿಸಿ ವಿಷಯ ತಿಳಿದಲ್ಲಿ ಈ ಮ್ಯೂಸಿಯಂ ಸ್ಥಾಪನೆಯ ಆಶಯ ಈಡೇರಲಿದೆ. ನಿರ್ವಹಣೆ ಕಷ್ಟವಾದರೆ ಅದಕ್ಕೆ ಪ್ರವೇಶದರ ನಿಗದಿಗೊಳಿಸಲಿ ಎಂದು ಅವರು ಸಲಹೆ ನೀಡುತ್ತಾರೆ.

ಲಿಂಗನಮಕ್ಕಿ ಅಣೆಕಟ್ಟೆ ಪರಿಸರದಲ್ಲಿರುವ ಮ್ಯೂಸಿಯಂ ಕಟ್ಟಡ ಮ್ಯೂಸಿಯಂ ಎದುರು ಇಟ್ಟಿರುವ ಕುರುಹು ಅವಕಾಶವಿದ್ದರೆ ಜೋಗದ ಹಳೆಯ ಪ್ರವಾಸಿ ಮಂದಿರ ಕಟ್ಟಡ ನವೀಕರಿಸಿ ಮ್ಯೂಸಿಯಂ ಅನ್ನು ಅಲ್ಲಿಗೆ ಸ್ಥಳಾಂತರಿಸಬಹುದಾಗಿದೆ. ಆ ಬಗ್ಗೆ ಕೆಪಿಸಿ ಹಾಗೂ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನಿಸಲಾಗುವುದು. -ಗೋಪಾಲಕೃಷ್ಣ ಬೇಳೂರು, ಸಾಗರ ಶಾಸಕ

ಜೂನ್ 21ರಂದು ಅಂತಾರಾಷ್ಟ್ರೀಯ ಯೋಗ ದಿನಾಚರಣೆ

• ಉದಯವಾಹಿನಿ ಚಿತ್ರದುರ್ಗ

ಆಯುಷ್ ಮಂತ್ರಾಲಯ, ಆಯುಷ್ ಇಲಾಖೆ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆಯುಷ್ ಇಲಾಖೆ ಹಾಗೂ ವಿವಿಧ ಯೋಗ ಸಂಸ್ಥೆಗಳ ವತಿಯಿಂದ ಸ್ವಂತ ಹಾಗೂ ಸಮಾಜಕ್ಕಾಗಿ ಯೋಗ 10 ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಇದೇ ಜೂನ್ 21ರಂದು ಬೆಳಿಗ್ಗೆ 7 ಗಂಟೆಗೆ ಚಿತ್ರದುರ್ಗ ನಗರದ ಹಳೇ ಮಾಧ್ಯಮಿಕ ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಯೋಜನೆ ಮತ್ತು ಸಾಂಖ್ಯಿಕ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಕಾರ್ಯಕ್ರಮ ಉದ್ಘಾಟಿಸುವರು. ಚಿತ್ರದುರ್ಗ ಶಾಸಕ ಕೆ.ಸಿ.ವೀರೇಂದ್ರ ಪಪ್ಪಿ ಅಧ್ಯಕ್ಷತೆ ವಹಿಸುವರು. ಗೌರವಾನ್ವಿತ ಅತಿಥಿಗಳಾಗಿ ಸಂಸದ ಗೋವಿಂದ ಎಂ.ಕಾರಜೋಳ, ಹೊಸದುರ್ಗ ಶಾಸಕರು ಹಾಗೂ ಆಹಾರ ಮತ್ತು ನಾಗರೀಕರ ಸರಬರಾಜು ನಿಗಮ ಅಧ್ಯಕ್ಷ ಬಿ.ಜಿ.ಗೋವಿಂದಪ್ಪ, ಚಳ್ಳಕೆರೆ ಶಾಸಕರು ಹಾಗೂ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಟಿ.ರಘುಮೂರ್ತಿ, ಮೊಳಕಾಲ್ಮುರು ಶಾಸಕ ಎನ್.ವೈ.ಗೋಪಾಲಕೃಷ್ಣ, ಹೊಳಲ್ಕೆರೆ ಶಾಸಕ ಡಾ.ಎಂ.ಚಂದ್ರಪ್ಪ, ವಿಧಾನ ಪರಿಷತ್ ಸದಸ್ಯರಾದ ಚಿದಾನಂದ ಎಂ.ಗೌಡ, ಕೆ.ಎಸ್. ನವೀನ್, ಡಿ.ಟಿ.ಶ್ರೀನಿವಾಸ ಭಾಗವಹಿಸುವರು.

ಮುಖ್ಯ ಅತಿಥಿಗಳಾಗಿ ರಾಜ್ಯ ವಕ್ಫ್ ಮಂಡಳಿ ಅಧ್ಯಕ್ಷ ಕೆ.ಅನ್ವರ್ ಭಾಷಾ, ಕರ್ನಾಟಕ ದ್ರಾಕ್ಷಾರಸ ಮಂಡಳಿ ಅಧ್ಯಕ್ಷ ಡಾ.ಬಿ.ಯೋಗೇಶ್ ಬಾಬು, ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ ಅಧ್ಯಕ್ಷ ಜಿ.ಎಸ್.ಮಂಜುನಾಥ, ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗ ಅಧ್ಯಕ್ಷೆ ಸವಿತಾ ರಘು, ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ತಾಜ್‌ಪೀರ್ ಹಾಗೂ ನಗರಸಭೆ ಸದಸ್ಯರು ಹಾಗೂ ಚುನಾಯಿತ ಜನಪ್ರತಿನಿಧಿಗಳು ಭಾಗವಹಿಸುವರು. ವಿಶೇಷ ಆಹ್ವಾನಿತರಾಗಿ ಆಯುಷ್ ಇಲಾಖೆ ಆಯುಕ್ತ ಶ್ರೀನಿವಾಸುಲು, ಯೋಗ ಮತ್ತು ಪ್ರಕೃತಿ ಚಿಕಿತ್ಸೆ ಉಪ ನಿರ್ದೇಶಕ ಡಾ.ಹರೀಶ್ ಬಾಬು ಭಾಗವಹಿಸುವರು. ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅಮ್ಲಾನ್ ಆದಿತ್ಯ ಬಿಸ್ವಾಸ್, ಜಿಲ್ಲಾಧಿಕಾರಿ ಟಿ.ವೆಂಕಟೇಶ್, ಜಿ.ಪಂ. ಸಿಇಒ ಎಸ್.ಜೆ.ಸೋಮಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಧರ್ಮೇಂಧರ್ ಕುಮಾರ್ ಮೀನಾ ಉಪಸ್ಥಿತರಿರುವರು ಎಂದು ಜಿಲ್ಲಾ ಆಯುಷ್ ಅಧಿಕಾರಿ ಡಾ.ಚಂದ್ರಕಾಂತ್ ನಾಗಸಮುದ್ರ ತಿಳಿಸಿದ್ದಾರೆ.

ಬಿಜೆಪಿಯವರನ್ನು ಕೇಳಿ ಬೆಲೆ ಏರಿಕೆ ಮಾಡಬೇಕಿಲ್ಲ

• ಉದಯವಾಹಿನಿ ಚಿಕ್ಕಮಗಳೂರು

15 ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎಲ್ಲವೂ ಗೊತ್ತಿದೆ. ಬಿಜೆಪಿ ಮುಖಂಡರನ್ನು ಕೇಳಿ ಬೆಲೆ ಏರಿಕೆ ಅಥವಾ ಇಳಿಕೆ ಮಾಡು ಅವಶ್ಯಕತೆ ಇಲ್ಲ' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ ಹೇಳಿದರು. ಹೆಲಿಪ್ಯಾಡ್ ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಏರಿಕೆ ಸಣ್ಣ ವಿಷಯ. ಬಿಜೆಪಿಯವರಿಗೆ ಬೇರೆ ಏನೂ ಕೆಲಸ ಇಲ್ಲದೆ ಪ್ರತಿಭಟನೆ ಮಾಡುತ್ತಿದ್ದಾರೆ' ಎಂದರು.

ಸುತ್ತಮುತ್ತಲ ರಾಜ್ಯಕ್ಕಿಂತ ನಮ್ಮ ರಾಜ್ಯದಲ್ಲಿ ತೈಲ ಬೆಲೆ ಕಡಿಮೆ ಇದೆ. ಜನರಿಗೆ ಒಳ್ಳೆಯದನ್ನು ಮಾಡಬೇಕು ಎಂಬ ಆಸೆ ಇರುವುದು ಕಾಂಗ್ರೆಸ್ ಪಕ್ಷಕ್ಕೆ ಮಾತ್ರ. ಕೇಂದ್ರ ಸರ್ಕಾರ ಬೆಲೆ ಏರಿಕೆ ಮಾಡಿದಾಗ ಬಿಜೆಪಿಯವರು ಏನು ಮಾಡುತ್ತಿದ್ದರು' ಎಂದು ಪ್ರಶ್ನಿಸಿದರು. ಗ್ಯಾರಂಟಿ ಯೋಜನೆಗಳಿಗೆ 60 ಸಾವಿರ ಕೋಟಿ ಬೇಕಿದೆ. ತೈಲ ಬೆಲೆ ಏರಿಕೆಯಿಂದ ಗರಿಷ್ಠ 3 ಸಾವಿರ ಕೋಟಿ ನಿರೀಕ್ಷೆ ಮಾಡಲಾಗಿದೆ. ಈ ಹಣದಿಂದ ಗ್ಯಾರಂಟಿ ಯೋಜನೆಗೆ ಹಣ ಹೊಂದಿಸಲಾಗುತ್ತಿದೆ ಎಂಬುದು ಸುಳ್ಳು' ಎಂದರು.

ಉದಯವಾಹಿನಿ ಚಿತ್ರ

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕೆ ಪಕ್ಷದ ನಿಷ್ಠಾವಂತ ಕಾರ್ಯಕರ್ತರನ್ನು ನೇಮಿಸುವ ಬಗ್ಗೆ ಇನ್ನೊಂದು ವಾರದಲ್ಲಿ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಸ್ಪಷ್ಟಪಡಿಸಿದರು.

ತಾಲ್ಲೂಕು ಕಸಾಪ ಅಧ್ಯಕ್ಷರಾಗಿ ಕಾಮರಾಜ ಬಿರಾದಾರ


ಉದಯವಾಹಿನಿ ಚಿತ್ರ

• ಉದಯವಾಹಿನಿ ಮುದ್ದೇಬಿಹಾಳ

ಮುದ್ದೇಬಿಹಾಳ ತಾಲ್ಲೂಕ ಕಸಾಪ ಅಧ್ಯಕ್ಷರಾಗಿ ಮಾಜಿ ಪುರಸಭೆ ಸದಸ್ಯ, ಸಮಾಜಸೇವಕ ಕಾಮರಾಜ ಬಿರಾದಾರ ಅವರನ್ನು ಆಯ್ಕೆಮಾಡಲಾಯಿತು , ಈ ಹಿಂದಿನ ತಾಲ್ಲೂಕು ಅಧ್ಯಕ್ಷರು ತಾಲ್ಲೂಕ ಕಸಾಪ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡಿದ ಹಿನ್ನೆಲೆ ಬುಧುವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕಸಾಪ ಜಿಲ್ಲಾಧ್ಯಕ್ಷ್ಯ ಹಾಸಿಂಪೀರ ವಾಲಿಕಾರ ಅವರು ಸಭೆಯನ್ನು ನಡೆಸಿ ಸರ್ವಾನುಮತದಿಂದ ಕಾಮರಾಜ ಬಿರಾದಾರ ಅವರನ್ನು ಆಯ್ಕೆ ಮಾಡಿದರು

ಈ ವೇಳೆ ಕಸಾಪ ಜಿಲ್ಲಾ ಘಟಕದ ಜಯ ಶ್ರೀ ಹಿರೇಮಠ, ತಾಲ್ಲೂಕ ಕಸಾಪ ನಿಕಟಪೂರ್ವ ಅಧ್ಯಕ್ಷ ಎಂ.ಬಿ ನಾವದಗಿ, ತಾಳಿಕೋಟೆ ಕಸಾಪ ಅಧ್ಯಕ್ಷ ಆರ್ ಎಲ್ ಕೊಪ್ಪದ , ಪ್ರಶಾಂತ ಕಾಳೆ, ಚೈತನ್ಯ ಮುದ್ದೇಬಿಹಾಳ, ಮುತ್ತುಗೌಡ ರಾಯಗೂಂಡ, ವೈ ಹೆಚ್ ವಿಜಯಕರ,ಮಹಿಬೂಬ ಗೊಳಸಂಗಿ, ಅಮರೇಶ ಗೂಳಿ, ಸಿಕಂದರ್ ಜಾನ್ವೇಕರ, ಟಿ ಭಾಸ್ಕರ,ಹುಸೇನ್ ಮುಲ್ಲಾ, ಸದು ಮಠ, ಸಂಗಣ್ಣ ಮೇಲಿನಮನಿ, ಶ್ರೀಶೈಲ್ ಪೂಜಾರಿ,ಆಸೀಪ್ ಅವಟಿ, ಬಾಬಾ ಪಟೇಲ್ ಸೇರಿದಂತೆ ಅನೇಕರು ಸಭೆಯಲ್ಲಿ ಭಾಗವಹಿಸಿದ್ದರು ನೂತನ ತಾಲ್ಲೂಕು ಅಧ್ಯಕ್ಷರಾಗಿ ಆಯ್ಕೆಯಾದ ಕಾಮರಾಜ ಬಿರಾದಾರ ಅವರಿಗೆ ಅಭಿನಂದನೆಗಳ ಮಹಾಪೂರ ಹರಿದುಬಂದದ್ದು ಜನರು ಅವರ ಮೇಲೆ ಇಟ್ಟಿರುವ ನಂಬಿಕೆಯನ್ನು ತೋರಿಸುತ್ತದೆ.

ಸಾಹಿತ್ಯ ಬಿತ್ತುವ ಕಾರ್ಯ

ಕಳೆದ ಹಲವು ದಶಕಗಳಿಂದ ನಿಂತ ನೀರಾಗಿದ್ದ ಮುದ್ದೇಬಿಹಾಳ ತಾಲ್ಲೂಕು ಕಸಾಪ ಈಗ ನೂತನ ಕನ್ನಡದ ಸಾರಾಥಿಯಾಗಿ ಅಧ್ಯಕ್ಷ ಸ್ಥಾನ ವಹಿಸಿರುವ ಕಾಮರಾಜ ಬಿರಾದಾರ ಅವರು ಕನ್ನಡ ಸಾಹಿತ್ಯದ ಪರಿಮಳ ಪಸರಿಸುತ್ತಾರೆಂಬ ಆಶಾಭಾವನೆಯಿದೆ ವಿದ್ಯಾರ್ಥಿಗಳಿಗೆ ಚುಟುಕು, ಕವನ ವಾಚನ, ಕನ್ನಡ ಪ್ರಬಂಧ ನಿಬಂಧ, ಬಾಷಣ ಸ್ಪರ್ಧೆ ಏರ್ಪಡಿಸುವ ಮೂಲಕ ಇಂದಿನ ಯುವ ಪೀಳಿಗೆಯಲ್ಲಿ ಸಾಹಿತ್ಯ ಬಿತ್ತುವ ಕಾರ್ಯ ನೂತನ ಅಧ್ಯಕ

ಅಮೆರಿಕದ ಹಲವೆಡೆ ಕಾಡ್ಗಿಚ್ಚಿನ ಆರ್ಭಟ; ಸಾವಿರಾರು ಜನರ ಸ್ಥಳಾಂತರ

ಕ್ಯಾಲಿಫೋರ್ನಿಯಾ ಹಾಗೂ ನ್ಯೂ ಮೆಕ್ಸಿಕೋ ರಾಜ್ಯಗಳಲ್ಲಿ ಕಾಡ್ಗಿಚ್ಚಿನ ಹೊಡೆತ ಜೋರು, ತುರ್ತು ಪರಿಸ್ಥಿತಿ ಘೋಷಣೆ

ಅಮೆರಿಕ: ಕಾಡ್ಗಿಚ್ಚಿನ ಆರ್ಭಟಕ್ಕೆ ಅಮೆರಿಕ ದೇಶದ ಹಲವು ರಾಜ್ಯಗಳು ನಲುಗಿ ಹೋಗಿವೆ. ಈ ವರ್ಷದ ಕಾಡ್ಗಿಚ್ಚಿನ ಸೀಸನ್ ಆರಂಭವಾಗಿದ್ದು, ಕ್ಯಾಲಿಫೋರ್ನಿಯಾ ಹಾಗೂ ನ್ಯೂ ಮೆಕ್ಸಿಕೋ ರಾಜ್ಯಗಳಲ್ಲಿ ಕಾಡ್ಗಿಚ್ಚಿನ ಹೊಡೆತ ಜೋರಾಗಿದೆ. ಕ್ಯಾಲಿಫೋರ್ನಿಯಾ ರಾಜ್ಯದಲ್ಲಿ ಸಾವಿರಾರು ಮಂದಿಯನ್ನು ಸ್ಥಳಾಂತರ ಮಾಡಲಾಗಿದ್ದು, ನ್ಯೂ ಮೆಕ್ಸಿಕೋ ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಮಾಡಲಾಗಿದೆ.

ಸಾಕಷ್ಟು ಮನೆಗಳು ಅಗ್ನಿಗಾಹುತಿ

ಎಮರ್ಜೆನ್ಸಿ ಘೋಷಿಸಿದ ನ್ಯೂ ಮೆಕ್ಸಿಕೋ ಗವರ್ನರ್: ನ್ಯೂ ಮೆಕ್ಸಿಕೋ ರಾಜ್ಯದ ದಕ್ಷಿಣ ಭಾಗದಲ್ಲಿ ಕಾಡ್ಗಿಚ್ಚಿನ ಆರ್ಭಟ ವಿಪರೀತವಾಗಿದೆ. ಹೀಗಾಗಿ, ಸಾವಿರಾರು ಜನರು ತಮ್ಮ ಮನೆಗಳನ್ನು ತೊರೆದು ಸುರಕ್ಷಿತ ಸ್ಥಳಗಳಿಗೆ ಓಡಿ ಹೋಗಿದ್ದಾರೆ.

ಸಾಕಷ್ಟು ಮನೆಗಳು ಅಗ್ನಿಗಾಹುತಿಯಾಗಿದ್ದು, ಕನಿಷ್ಟ ಓರ್ವ ವ್ಯಕ್ತಿ ಸಾವನ್ನಪ್ಪಿರುವ ಶಂಕೆ ಇದೆ.

ಈ ಭಾಗದ ಗುಡ್ಡಗಾಡು ಪ್ರದೇಶದ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸರ್ಕಾರ ರವಾನೆ ಮಾಡಿದ್ದು, ನ್ಯೂ ಮೆಕ್ಸಿಕೋ ರಾಜ್ಯದ ಮಟ್ಟಿಗೆ ತುರ್ತು ಪರಿಸ್ಥಿತಿ ಘೋಷಣೆ ಮಾಡಲಾಗಿದೆ. ರಾಷ್ಟ್ರೀಯ ಸುರಕ್ಷತಾ ಪಡೆಗಳು, ಅತ್ಯುನ್ನತ ಮಟ್ಟದ ಅಗ್ನಿ ಶಾಮಕ ಪಡೆ ಕೂಡಾ ನ್ಯೂ ಮೆಕ್ಸಿಕೋ ರಾಜ್ಯಕ್ಕೆ ಧಾವಿಸಿವೆ. ಬೆಂಕಿಯ ಜೊತೆಗೆ ಬಿರುಗಾಳಿ ಆರ್ಭಟ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಕಾಡ್ಗಿಚ್ಚು ಮತ್ತಷ್ಟು ಪ್ರದೇಶಗಳಿಗೆ ವ್ಯಾಪಿಸುವ ಭೀತಿ ಎದುರಾಗಿದೆ.

ಗಾಳಿಯ ತೀವ್ರತೆ ವಿಪರೀತ ಇರುವ ಕಾರಣ ಕಾಡ್ಗಿಚ್ಚು ಬೇರೆ ಬೇರೆ ಪ್ರದೇಶಗಳಿಗೂ ಅತಿ ವೇಗವಾಗಿ ವ್ಯಾಪಿಸುತ್ತಿದೆ. ಈ ಭಾಗದಲ್ಲಿ ಯಾವುದೇ ರೀತಿಯ ವಾಹನ ಸಂಚಾರ ನಡೆಸದಂತೆ ಭದ್ರತಾ ಪಡೆಗಳು ತಡೆ ಹಿಡಿದಿವೆ. ಇತ್ತ ನ್ಯೂ ಮೆಕ್ಸಿಕೋ ರಾಜ್ಯದಲ್ಲಿ 500ಕ್ಕೂ ಹೆಚ್ಚು ಕಟ್ಟಡಗಳಿಗೆ ಬೆಂಕಿ ಹೊತ್ತಿಕೊಂಡು ಎಲ್ಲವೂ ಧ್ವಂಸಗೊಂಡಿವೆ ಅನ್ನೋ ಮಾಹಿತಿ ಇದೆ. ಆದರೆ ಈ ಪೈಕಿ ಜನ ವಸತಿ ಮನೆಗಳು ಎಷ್ಟಿವೆ ಅನ್ನೋದ್ರ ಅಂದಾಜು ಸಿಕ್ಕಿಲ್ಲ. ನ್ಯೂ ಮೆಕ್ಸಿಕೋ ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ ಪರಿಹಾರ ಕಾರ್ಯ, ಅನುದಾನ ಸೇರಿದಂತೆ ಹಲವು ರೀತಿಯ ನೆರವು ಲಭ್ಯವಾಗಲಿದೆ.

ಅಮೆರಿಕ ದೇಶದ ಹಲವು ರಾಜ್ಯಗಳಲ್ಲಿ ಕಾಡ್ಗಿಚ್ಚಿನ ಆರ್ಭಟ ಶುರುವಾಗಿದೆ. ಅಮೆರಿಕದಲ್ಲಿ ಪ್ರತಿ ವರ್ಷ ಈ ಸಮಯದಲ್ಲಿ ಕಾಡ್ಗಿಚ್ಚು ಕಾಣಿಸಿಕೊಳ್ಳುತ್ತದೆ. ಇದೀಗ ಕಾಡ್ಗಿಚ್ಚಿನ ಕಾರಣದಿಂದಾಗಿ ಸಾವಿರಾರು ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ ಮಾಡಲಾಗಿದೆ. ನ್ಯೂ ಮೆಕ್ಸಿಕೋ ರಾಜ್ಯದಲ್ಲಿ ತುರ್ತು ಪರಿಸ್ಥಿತಿ ಘೋಷಣೆ ಮಾಡಲಾಗಿದೆ. ಪ್ರಕೃತಿಯ ರೌದ್ರತೆ ಎದುರು ಅಗ್ನಿ ಶಾಮಕ ದಳಗಳ ಸಾಹಸ ಯಾವುದೇ ದೊಡ್ಡ ಮಟ್ಟದ ಫಲಿತಾಂಶ ಸಿಗುತ್ತಿಲ್ಲ. ವಾಯು ಮಾಲಿನ್ಯ ವಂತೂ ಈ ಭಾಗದಲ್ಲಿ ಮಿತಿ ಮೀರಿದೆ.

ಕ್ಯಾಲಿಫೋರ್ನಿಯಾದಲ್ಲೂ ಸಾವಿರಾರು ಎಕರೆ ಅರಣ್ಯ ಬೆಂಕಿಗಾಹುತಿ

ಕ್ಯಾಲಿಫೋರ್ನಿಯಾ ರಾಜ್ಯದಲ್ಲಿ ಸುಮಾರು 12 ಸಾವಿರ ಹೆಕ್ಟೇರ್ ಪ್ರದೇಶ ಅಗ್ನಿಗಾಹುತಿ ಆಗಿರೋದಾಗಿ ಮಾಹಿತಿ ಲಭ್ಯವಾಗಿದೆ. ಸುಮಾರು ಒಂದು ಸಾವಿರ ಜನರನ್ನು ಸುರಕ್ಷಿತ ಸ್ಥಳಗಳಿಗೆ ರವಾನೆ ಮಾಡಿರೋದಾಗಿ ಸರಕಾರ ಹೇಳಿದೆ. ಲಾಸ್ ಏಂಜಲೀಸ್ ನಗರದ ವಾಯುವ್ಯ ಭಾಗದಲ್ಲಿ ಕಾಡ್ಗಿಚ್ಚಿನ ಆರ್ಭಟ ತೀವ್ರಗೊಂಡಿದ್ದು, ಅಗ್ನಿ ಶಾಮಕ ದಳದ ಸುಮಾರು 400 ಸಿಬ್ಬಂದಿ ಬೆಂಕಿ ನಂದಿಸುವ ಸಾಹಸದಲ್ಲಿ ತೊಡಗಿದ್ದಾರೆ. 70 ವಾಹನಗಳು, ಎರಡು ಬುಲ್ಡೋಜರ್‌ಗಳನ್ನ ನಿಯೋಜನೆ ಮಾಡಲಾಗಿದ್ದು, ಬೆಂಕಿಯ ತೀವ್ರತೆಗೆ ಹೋಲಿಕೆ ಮಾಡಿದರೆ ಇದು ಕೇವಲ ಶೇ. 2ರಷ್ಟು ಮಾತ್ರ ಎಂದು ಅಂದಾಜಿಸಲಾಗಿದೆ!

ಅಮೆರಿಕ ದೇಶಾದ್ಯಂತ ಒಟ್ಟು 8,495 ಚದರ ಕಿ.ಮೀ. ಪ್ರದೇಶ ಕಾಡ್ಗಿಚ್ಚಿನಿಂದ ಬಾಧಿತವಾಗಿದೆ. ಕಳೆದ 10 ವರ್ಷಗಳ ಸರಾಸರಿಯನ್ನು ಹೋಲಿಕೆ ಮಾಡಿದರೆ ಈ ಬಾರಿ ಎಲ್ಲಾ ವರ್ಷಕ್ಕಿಂತಾ ಅತಿ ಹೆಚ್ಚು ಪ್ರದೇಶದಲ್ಲಿ ಕಾಡ್ಗಿಚ್ಚು ಉಂಟಾಗಿದೆ. ಸದ್ಯ ದೇಶಾದ್ಯಂತ ಒಟ್ಟು 20 ಕಡೆ ಕಾಡ್ಗಿಚ್ಚು ಉಂಟಾಗಿದೆ ಅನ್ನೋ ಮಾಹಿತಿ ಲಭ್ಯವಾಗಿದೆ.

ಬಿಸಿಲ ಶಾಖಕ್ಕೆ ಮೆಕ್ಕಾದಲ್ಲಿ 550 ಹಜ್ ಯಾತ್ರಿಗಳ ಸಾವು

ಜೇರೂಸಲೇಂ: ಮೆಕ್ಕಾದಲ್ಲಿ ತಾಪಮಾನ ಏರಿಕೆಯಿಂದ 550ಕ್ಕೂ ಹೆಚ್ಚು ಹಜ್ ಯಾತ್ರಿಕರು ಸಾವನ್ನಪ್ಪಿರುವ ಘಟನೆ ನಡೆದಿದೆ. ಮೃತರ ಪೈಕಿ ಕನಿಷ್ಠ 323 ಮಂದಿ ಈಜಿಪ್ಟಿಯನ್ನರು, ಕನಿಷ್ಠ 60 ಮಂದಿ ಜೋರ್ಡಾನಿಯನ್ನರು, ವಿವಿಧ ದೇಶಗಳ 150ಕ್ಕೂ ಹೆಚ್ಚು ಮಂದಿ ಸೇರಿದ್ದಾರೆ.

ಮೃತ ದೇಹಗಳನ್ನು ಮೆಕ್ಕಾದ ಅಲ್-ಮುಯಿಸೆಮ್ ನೆರೆಹೊರೆಯಲ್ಲಿರುವ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಲಾಗಿದ್ದು, ಸಾವಿನ ಸಂಖ್ಯೆ ಇನ್ನಷ್ಟು ಏರಿಕೆಯಾಗುವ ಸಾಧ್ಯತೆಯಿದೆ.2023ರ ಹಜ್ ಯಾತ್ರೆ ಸಂದರ್ಭದಲ್ಲಿ ವಿವಿಧ ದೇಶಗಳ ಕನಿಷ್ಠ 240 ಯಾತ್ರಿಕರು ಸಾವನ್ನಪ್ಪಿದ್ದರು ಎಂದು ಅರಬ್ ರಾಜತಾಂತ್ರಿಕರು ತಿಳಿಸಿದ್ದಾರೆ. ಕನಿಷ್ಠ 60 ಯಾತ್ರಿಕರು ಬಿಸಿಲಿನ ತಾಪದಿಂದ ಸಾವನ್ನಪ್ಪಿದ್ದಾರೆ. ಪ್ರತಿ ವರ್ಷವೂ ಹಜ್ ಯಾತ್ರೆಯ ಸಮಯದಲ್ಲಿ ತಾಪಮಾನವು 40 ಡಿಗ್ರಿ ಸೆಲ್ಸಿಯೆಸ್ನಷ್ಟಿರುತ್ತಿತ್ತು. ಈ ಬಾರಿ ಭಾರೀ ಏರಿಕೆ ಕಂಡಿದೆ. ಹವಾಮಾನ ಬದಲಾವಣೆಯು ಹಜ್ ಯಾತ್ರೆಯ ಮೇಲೆ ಪರಿಣಾಮ ಬೀರುತ್ತಿದೆ ಧಾರ್ಮಿಕ ಆಚರಣೆಗಳನ್ನು ನಡೆಸುವ ಪ್ರದೇಶದಲ್ಲಿ ತಾಪಮಾನವು ಪ್ರತಿ ದಶಕದಲ್ಲಿ 0.4 ಏರುತ್ತಿದೆ ಎಂದು ತಿಳಿದುಬಂದಿದೆ.



ಸೌದಿ ರಾಷ್ಟ್ರೀಯ ಹವಾಮಾನ ಕೇಂದ್ರವು ಸೋಮವಾರ ಮೆಕ್ಕಾದ ಗ್ರ್ಯಾಂಡ್ ಮಸೀದಿಯಲ್ಲಿ ತಾಪಮಾನವು 51.8 ಡಿಗ್ರಿ ಸೆಲ್ಸಿಯಸ್ (125 ಫ್ಯಾರನ್ಹೈಟ್) ತಲುಪಿದೆ ಎಂದು ಹೇಳಿದೆ. 1920 ರ ದಶಕದಲ್ಲಿ ಮೆಕ್ಕಾವನ್ನು ಸೌದಿ ರಾಜಮನೆತನ ತಮ್ಮ ವಶಕ್ಕೆ ತೆಗೆದುಕೊಂಡಿತು.ಆ ಬಳಿಕ ತೀರ್ಥಯಾತ್ರೆ ಆಯೋಜಿಸುವುದು ಹೆಮ್ಮೆ ಎಂದು ಅದು ಪರಿಗಣಿಸಿದೆ. ಈ ವರ್ಷ ಸುಮಾರು 18 ಲಕ್ಷ ಯಾತ್ರಾರ್ಥಿಗಳು ಹಜ್ ಯಾತ್ರೆಯಲ್ಲಿ ಭಾಗವಹಿಸಿದ್ದರು, ಅವರಲ್ಲಿ 16 ಲಕ್ಷ ಯಾತ್ರಿಕರು ವಿವಿಧ ದೇಶಗಳಿಂದ ಬಂದಿದ್ದರು ಎಂದು ರಾಜತಾಂತ್ರಿಕರು ತಿಳಿಸಿದ್ದಾರೆ.

ಯಾತ್ರಾರ್ಥಿಗಳ ಯೋಗಕ್ಷೇಮಕ್ಕಾಗಿ ಸೌದಿ ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ. ಆದರೂ 2015 ರಲ್ಲಿ ಇಲ್ಲಿ ಉಂಟಾದ ಕಾಲ್ತುಳಿತಕ್ಕೆ ಸುಮಾರು 2,400 ಕ್ಕೂ ಹೆಚ್ಚು ಯಾತ್ರಾರ್ಥಿಗಳು ಸಾವನ್ನಪ್ಪಿದ್ದರು.

ಏನಿದು ಹಜ್ ಯಾತ್ರೆ?

ಬಕ್ರೀದ್ ಹಬ್ಬದ ಸಂದರ್ಭದಲ್ಲಿ ಸೌದಿ ಅರೇಬಿಯಾದ ಮೆಕ್ಕಾದಲ್ಲಿ ಪವಿತ್ರ ಹಜ್ ಯಾತ್ರೆ ನಡೆಯುತ್ತದೆ. ಜೀವನದಲ್ಲಿ ಒಂದು ಬಾರಿಯಾದರೂ ಹಜ್ ಯಾತ್ರೆ ಕೈಗೊಳ್ಳಬೇಕು ಎಂದು ಇಸ್ಲಾಂ ಹೇಳುತ್ತದೆ. ಹಜ್ನ ಧಾರ್ಮಿಕ ವಿಧಿ -ವಿಧಾನಗಳು ಈ ಹಬ್ಬದೊಂದಿಗೆ ಮುಕ್ತಾಯಗೊಳ್ಳುತ್ತದೆ. ಬಕ್ರೀದ್ ಮುನ್ನಾದಿನ ಅಥವಾ ದುಲ್ ಹಜ್ ತಿಂಗಳ 9ರಂದು ಹಜ್ ಯಾತ್ರಿಕರು ಮೆಕ್ಕಾ ನಗರದ ಅರಫಾತ್ ಎಂಬ ಬೆಟ್ಟದ ಬಳಿ ಸೇರುತ್ತಾರೆ. ಈ ಯಾತ್ರಿಕರಿಗೆ ಬೆಂಬಲ ನೀಡಲು ವಿಶ್ವದಾದ್ಯಂತ ಮುಸ್ಲಿಮರು ಈ ದಿನ ಉಪವಾಸವಿರುತ್ತಾರೆ.ಮುಸ್ಲಿಮರ ಹಜ್ ಯಾತ್ರೆ ಜೂನ್ 14ರಿಂದ ಪ್ರಾರಂಭವಾಗಿದ್ದು, ಯಾತ್ರೆ ಭಾಗವಾಗಿ ಮುಸ್ಲಿಮರ ಪವಿತ್ರ ಯಾತ್ರಾ ಸ್ಥಳ ಮೆಕ್ಕಾಗೆ ವರ್ಷಕ್ಕೆ ಸುಮಾರು 20 ಲಕ್ಷಕ್ಕೂ ಹೆಚ್ಚು ಮುಸ್ಲಿಮರು ಭೇಟಿ ನೀಡುತ್ತಾರೆ.

8ನೇ ಕೇಂದ್ರ ವೇತನ ಆಯೋಗ ಸ್ಥಾಪಿಸುವ ಪ್ರಸ್ತಾವನೆ ಪ್ರಧಾನಿ ಮೋದಿಗೆ ಸಲ್ಲಿಕೆ

ನವದೆಹಲಿ: ಎಂಟನೇ ಕೇಂದ್ರ ವೇತನ ಆಯೋಗ ಸ್ಥಾಪಿಸುವ ಪ್ರಸ್ತಾವನೆಯನ್ನು ರಾಷ್ಟ್ರೀಯ ಮಂಡಳಿಯ ಕಾರ್ಯದರ್ಶಿ ಶಿವಗೋಪಾಲ್ ಮಿಶ್ರಾ ಅವರು ಮೋದಿ ಸರಕಾರಕ್ಕೆ ಕಳುಹಿಸಿದ್ದಾರೆ. ಸಂಪುಟ ಕಾರ್ಯದರ್ಶಿಗೆ ಬರೆದ ಪತ್ರದಲ್ಲಿ ಮಿಶ್ರಾ ಅವರು 8 ನೇ ವೇತನ ಆಯೋಗವನ್ನು ಸ್ಥಾಪಿಸಲು ಮತ್ತು ವೇತನ ಮತ್ತು ಭತ್ಯೆಗಳ ಪರಿಷ್ಕರಣೆಗಳ ಬಗ್ಗೆ ಉದ್ದೇಶಪೂರ್ವಕವಾಗಿ ಸರ್ಕಾರವನ್ನು ಒತ್ತಾಯಿಸಿದ್ದಾರೆ. 8ನೇ ಕೇಂದ್ರ ವೇತನ ಆಯೋಗವನ್ನು ಒಮ್ಮೆ ಸ್ಥಾಪಿಸಿ ಶಿಫಾರಸುಗಳನ್ನು ಅಂಗೀಕರಿಸಿದರೆ, ಸರಿಸುಮಾರು 49 ಲಕ್ಷ ಸರ್ಕಾರಿ ನೌಕರರು ಮತ್ತು 68 ಲಕ್ಷ ಪಿಂಚಣಿದಾರರ ವೇತನ ಶ್ರೇಣಿಗಳ ಮೇಲೆ ಪರಿಣಾಮ ಬೀರುತ್ತದೆ.ಈಗ ಟ್ರೆಂಡ್ ಆಗುತ್ತಿದೆವೇತನ ಆಯೋಗವನ್ನು ಸಾಮಾನ್ಯವಾಗಿ 10 ವರ್ಷಗಳ ನಂತರ ಜಾರಿಗೆ ತರಲಾಗುತ್ತದೆ.

7ನೇ ವೇತನ ಆಯೋಗದ ಶಿಫಾರಸುಗಳನ್ನು 2016ರಲ್ಲಿ ಅಂಗೀಕರಿಸಿರುವುದರಿಂದ, ಮುಂದಿನದು 2026ರಲ್ಲಿ ಜಾರಿಗೆ ಬರಲಿದೆ. ಸರ್ಕಾರವು 8ನೇ ವೇತನ ಆಯೋಗವನ್ನು ಸ್ಥಾಪಿಸಲು ನಿರ್ಧರಿಸಿದರೆ, ಅದರ ಶಿಫಾರಸುಗಳನ್ನು ಸಲ್ಲಿಸಲು ಒಂದು ವರ್ಷ ಅಥವಾ 18 ತಿಂಗಳುಗಳ ಕಾಲಾವಕಾಶ ಬೇಕಾಗುತ್ತದೆ ಮತ್ತು ಒಮ್ಮೆ 8ನೇ ವೇತನ ಆಯೋಗದ ಶಿಫಾರಸುಗಳನ್ನು ಸರ್ಕಾರವು ಅಂಗೀಕರಿಸಿದರೆ, ಮಾಧ್ಯಮ ವರದಿಗಳ ಪ್ರಕಾರ 2026ರ ವೇಳೆಗೆ ಇದು ಜಾರಿಗೆ ಬರುವ ಸಾಧ್ಯತೆಯಿದೆ.

ಸಾಮಾನ್ಯವಾಗಿ ನೌಕರರ ವೇತನ ಹೆಚ್ಚಳದ ಮೇಲೆ ವೇತನ ಆಯೋಗದ ಶಿಫಾರಸು ಫಿಟ್‌ಮೆಂಟ್ ಅಂಶವನ್ನು ಆಧರಿಸಿದೆ. ಒಂದು ವೇಳೆ 8ನೇ ವೇತನ ಆಯೋಗವನ್ನು ಶಿಫಾರಸುಗಳಿಗಾಗಿ ಸ್ಥಾಪಿಸಿದರೆ, ಫಿಟ್‌ಮೆಂಟ್ ಅಂಶವನ್ನು 3.68 ಪಟ್ಟು ನಿಗದಿಪಡಿಸುವ ಸಾಧ್ಯತೆಯಿದೆ.ಈಗ, ಸರ್ಕಾರಿ ನೌಕರರ ಕನಿಷ್ಠ ಮೂಲ ವೇತನವನ್ನು 18,000 ರೂ.ಗೆ ಪರಿಗಣಿಸಿ, ಫಿಟ್‌ಮೆಂಟ್ ಅಂಶವನ್ನು 3.68 ಪಟ್ಟು ಹಾಕಿದರೆ, ಅವರು ತಮ ಮೂಲ ವೇತನದಲ್ಲಿ 8,000ದಿಂದ 26,000 ರೂ.ಗಳ ಹೆಚ್ಚಳವನ್ನು ನಿರೀಕ್ಷಿಸಬಹುದು. ಹಿಂದೆ, 5 ನೇ ಸಿಪಿಸಿ ಸಮಯದಲ್ಲಿ ಆಯೋಗದ ಶಿಫಾರಸುಗಳ ಅನುಷ್ಠಾನಕ್ಕಾಗಿ ನೌಕರರು 19 ತಿಂಗಳು ಮತ್ತು 6 ನೇ ಸಿಪಿಸಿ ಅನುಷ್ಠಾನದ ಸಮಯದಲ್ಲಿ 32 ತಿಂಗಳು ಕಾಯಬೇಕಾಗಿತ್ತು. ಆದಾಗ್ಯೂ, 7 ನೇ ಶಿಫಾರಸುಗಳಿಗಾಗಿ, ನಿಗದಿತ ದಿನಾಂಕದಿಂದ 6 ತಿಂಗಳೊಳಗೆ ಅನುಷ್ಠಾನಗೊಳಿಸಲಾಯಿತು. 2016, ಜನವರಿ 1ರಿಂದ ಜಾರಿಗೆ ಬರುವ ವೇತನ ಮತ್ತು ಪಿಂಚಣಿ ಪ್ರಯೋಜನಗಳ ಕುರಿತು 7 ನೇ ಕೇಂದ್ರೀಯ ವೇತನ ಆಯೋಗದ ಶಿಫಾರಸುಗಳ ಅನುಷ್ಠಾನಕ್ಕೆ ಕೇಂದ್ರ ಸಚಿವ ಸಂಪುಟವು ಜೂನ್ 2016 ರಲ್ಲಿ ಅನುಮೋದನೆ ನೀಡಿತ್ತು.

ತಿಮಪ್ಪನ ಹುಂಡಿಯಲ್ಲಿ ಒಂದೇ ದಿನದಲ್ಲಿ ದಾಖಲೆಯ ಕಾಣಿಕೆ ಸಂಗ್ರಹ

ತಿರುಪತಿ: ತಿರುಪತಿ ತಿರುಮಲ ದೇವಸ್ಥಾನದಲ್ಲಿ ಒಂದೇ ದಿನದಲ್ಲಿ 5.41 ಕೋಟಿ ಕಾಣಿಕೆ ಸಂಗ್ರಹವಾಗಿದೆ. ಸಾಲು ಸಾಲು ರಜೆಗಳ ಹಿನ್ನಲೆಯಲ್ಲಿ ಅಪಾರ ಪ್ರಮಾಣದಲ್ಲಿ ಭಕ್ತರು ಆಗಮಿಸಿದ್ದರಿಂದ ತಿಮಪ್ಪನ ಹುಂಡಿಗೆ ದಾಖಲೆಯ ಮೊತ್ತದ ಆದಾಯ ಬಂದಿದೆ. ಜೂ.18ರ ಮಂಗಳವಾರದಂದು ಶ್ರೀವಾರಿ ಹುಂಡಿಯ ಒಟ್ಟು ಆದಾಯ 5.41 ಕೋಟಿರೂ. ಇತ್ತೆಂದು ಟಿಟಿಡಿ ತಿಳಿಸಿದೆ. ಮಂಗಳವಾರ ಒಂದೇ ದಿನ 75,125 ಭಕ್ತರು ತಿಮಪ್ಪನ ದರ್ಶನ ಪಡೆದರು. 31,140 ಭಕ್ತರು ಅಪಾರ ಪ್ರಮಾಣದ ಕಾಣಿಕೆಯನ್ನು ಸಮರ್ಪಿಸಿದರು. ಎರಡು ವರ್ಷಗಳ ಹಿಂದೆ ಫೆ. 2022ರಲ್ಲಿ ಯಾವುದೇ ವಿಶೇಷ ಶುಭ ದಿನ ಇಲ್ಲದ ಸಂದರ್ಭದಲ್ಲಿ ಶ್ರೀವಾರಿ ಹುಂಡಿಗೆ ದಾಖಲೆ ಪ್ರಮಾಣದ ಆದಾಯ ಬಂದಿತ್ತು. ಆಗಲೂ ನಿಖರವಾಗಿ 5.41 ಕೋಟಿ ರೂ. ಆದಾಯ ಬಂದಿದ್ದು ವಿಶೇಷ. ತಿರುಮಲದಲ್ಲಿ ಭಕ್ತರ ಸಂಖ್ಯೆ ಹೆಚ್ಚಾಗಿದೆ. ದರ್ಶನಕ್ಕೆ 20 ಗಂಟೆ ಬೇಕು ಎಂದು ಟಿಟಿಡಿ ಹೇಳಿದೆ. ಎಲ್ಲಾ ವಿಭಾಗಗಳು ಭಕ್ತರಿಂದ ತುಂಬಿವೆ. ಕೃಷ್ಣತೇಜ ಅತಿಥಿಗೃಹದವರೆಗೂ ಸರತಿ ಸಾಲು ಬಂದು ನಿಂತಿದೆ. ಹಿರಿಯ ನಾಗರಿಕರಿಗಾಗಿ ವಿಶೇಷ ಪ್ರವೇಶ ದರ್ಶನ ಆನ್‌ಲೈನ್ ಕೋಟಾ ಮೂರು ತಿಂಗಳ ಮುಂಚಿತವಾಗಿಯೇ ಬಿಡುಗಡೆಯಾಗಿದೆ. ಹಿರಿಯ ನಾಗರಿಕರಿಗೆ ಪಿಎಚ್‌ಸಿ ಮಾರ್ಗದಲ್ಲಿ ಪ್ರತಿದಿನ ಮಧ್ಯಾಹ್ನ 3 ಗಂಟೆಗೆ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ.

360 ಮಿಲಿಯನ್ ಡಾಲರ್ ಮೊತ್ತದ ಶಸ್ತ್ರಾಸ್ತ್ರ ಮಾರಾಟಕ್ಕೆ ಅಮೆರಿಕ ಒಪ್ಪಿಗೆ

ವಾಷಿಂಗ್ಟನ್: ಅಮೆರಿದ ಬಿಡೆನ್ ಆಡಳಿತ ಸರ್ಕಾರ ತೈವಾನ್‌ಗೆ ಹೊಸದಾಗಿ 360 ಮಿಲಿಯನ್ ಡಾಲರ್ ಮೊತ್ತದ ಶಸ್ತ್ರಾಸ್ತ್ರಗಳ ಮಾರಾಟ ಮಾಡಲುಅನುಮೋದಿಸಿದೆ. ದ್ವೀಪ ರಾಷ್ಟ್ರಕ್ಕೆ ನೂರಾರು ಸಶಸ್ತ್ರ ಡ್ರೋನ್‌ಗಳು, ಕ್ಷಿಪಣಿ ಉಪಕರಣಗಳು ಸೇರಿ ಹಲವು ಸೇನಾ ಸಾಮಗ್ರಿಗಳನ್ನು ಕಳುಹಿಸುತ್ತದೆ ಎಂದು ಅಮೆರಿಕ ವಿದೇಶಾಂಗ ಇಲಾಖೆ ತಿಳಿಸಿದೆ.

ಈ ಘೋಷಣೆಯು ಅನಿರೀಕ್ಷಿತವಲ್ಲ ಆದರೆ ಇದು ವಾಷಿಂಗ್ಟನ್ ಮತ್ತು ಬೀಜಿಂಗ್ ನಡುವಿನ ಹೆಚ್ಚಿನ ಉದ್ವಿಗ್ನತೆಯ ಮೂಡಿಸುತ್ತದೆ ಎಂದು ವಿಶ್ಲೇಷಿಸಲಾಗಿದೆ. ತೈವಾನ್ ದ್ವೀಪವನ್ನು ತನ್ನ ಪ್ರದೇಶದ ಭಾಗ ಎಮದು ಚೀನಾ ಪ್ರತಿಪಾದಿಸುತ್ತಿದೆ ಅಗತ್ಯ ವಿದ್ದರೆ ಬಲ ಬಳಿಸಿ ವಶಕ್ಕೆ ಪಡೆಯಲು ಪ್ರತಿಜ್ಞೆ ಮಾಡಿದೆ. ಅಮೆರಿಕ ಮಾರಾಟ ಮಾಡುತ್ತಿರುವುದರಲ್ಲಿ 291 ಅಲ್‌ಟೀಸ್- 600 ಒಳಗೊಂಡಿದೆ, ಇದು ಮಾನವರಹಿತ ವೈಮಾನಿಕ ವಾಹನಗಳು ಅಥವಾ ಡ್ರೋನ್‌ಗಳು ಎನ್ನಬಹುದು ಇದರ ಜೊತೆಗೆ ಸ್ಫೋಟಕ ಸಗಿಸಬಲ್ಲ 720 ಸ್ವಿಚ್‌ಬ್ಲೇಡ್ ಡ್ರೋನ್‌ಗಳನ್ನು ಒಳಗೊಂಡಿದೆ, ಇದನ್ನು ವಿಸ್ತೃತ-ಶ್ರೇಣಿಯ ಆಡ್ಡಾದಿಡ್ಡಿಯುದ್ಧಸಾಮಗ್ರಿ ಎಂದು ಕರೆಯಲಾಗುತ್ತದೆ. ಸಶಸ್ತ್ರ ಪಡೆಗಳನ್ನು ಆಧುನೀಕರಿಸಲು, ವಿಶ್ವಾಸಾರ್ಹ ರಕ್ಷಣಾತಕ ಸಾಮರ್ಥ್ಯವನ್ನು ಕಾಪಾಡಿಕೊಳ್ಳಲು ತೈವಾನ್ ಇದನ್ನು ಸ್ವೀಕರಿಸುತ್ತಿದೆ. ಭದ್ರತೆಯನ್ನು ಸುಧಾರಿಸಲು ಸಹಾಯ ಮಾಡುತ್ತದೆ ಮತ್ತು ಪ್ರದೇಶದಲ್ಲಿ ರಾಜಕೀಯ ಸ್ಥಿರತೆ, ಮಿಲಿಟರಿ ಸಮತೋಲನ ಮತ್ತು ಆರ್ಥಿಕ ಪ್ರಗತಿಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ ಎಂದು ಅಮೆರಿಕ ರಕ್ಷಣಾ ಇಲಾಖೆ ಹೇಳಿದೆ. ತೈವಾನ್ ಅಧ್ಯಕ್ಷ ಲೈ ಚಿಂಗ್-ಟೆ ಅವರು ತೈಪೆಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಶಸ್ತ್ರಾಸ್ತ್ರ ಮಾರಾಟವನ್ನು ಅನುಮೋದಿಸಿದ್ದಕ್ಕಾಗಿ ಯುಎಸ್‌ಗೆ ಧನ್ಯವಾದ ಅರ್ಪಿಸಿದರು. ತೈವಾನ್ ಜಲಸಂಧಿಯಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ ಎಂದು ಅವರು ಹೇಳಿದರು. ಭವಿಷ್ಯದಲ್ಲಿ, ನಾವು ತೈವಾನ್‌ನ ರಾಷ್ಟ್ರೀಯ ರಕ್ಷಣಾ ಶಕ್ತಿಯನ್ನು ಬಲಪಡಿಸುವುದನ್ನು ಮುಂದುವರಿಸುತ್ತೇವೆ ಎಂದಿದ್ದಾರೆ.

ಕಾಂಗ್ರೇಸ್ ನಾಯಕ ಕಿರಣ್ ಚೌಧರಿ, ಅವರ ಪುತ್ರಿ ಬಿಜೆಪಿ ಸೇರ್ಪಡೆ

ನವದೆಹಲಿ: ಹರಿಯಾಣದ ಮಾಜಿ ಕಾಂಗ್ರೇಸ್ ನಾಯಕರ

ಸಿಡಿಲಬ್ಬರದ ಶತಕ ಸಿಡಿಸಿದ ಹರ್ಮನ್‌ಪ್ರೀತ್!

ಟೀಂ ಇಂಡಿಯಾ ನಾಯಕಿ ಹರ್ಮನ್‌ಪ್ರೀತ್ ಕೌರ್ ತಮ್ಮ ಏಕದಿನ ವೃತ್ತಿಜೀವನದ ಆರನೇ ಶತಕ

ಭಾರತ ಹಾಗೂ ದಕ್ಷಿಣ ಆಫ್ರಿಕಾ ವನಿತಾ ತಂಡಗಳ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿಯ ಎರಡನೇ ಏಕದಿನ ಪಂದ್ಯದಲ್ಲಿ ಟೀಂ ಇಂಡಿಯಾ ನಾಯಕಿ ಹರ್ಮನ್‌ಪ್ರೀತ್ ಕೌರ್ ತಮ್ಮ ಏಕದಿನ ವೃತ್ತಿಜೀವನದ ಆರನೇ ಶತಕ ಸಿಡಿಸಿ ಮಿಂಚಿದ್ದಾರೆ. ತಮ್ಮ ಇನ್ನಿಂಗ್ಸ್‌ನಲ್ಲಿ 88 ಎಸೆತಗಳನ್ನು ಎದುರಿಸಿದ ಹರ್ಮನ್‌ಪ್ರೀತ್ 9 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ ಅಜೇಯ 103 ರನ್ ಬಾರಿಸಿದರು.

ಬೆಂಗಳೂರಿನ ಎಂ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ ಹಾಗೂ ದಕ್ಷಿಣ ಆಫ್ರಿಕಾ ವನಿತಾ ತಂಡಗಳ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿಯ ಎರಡನೇ ಏಕದಿನ ಪಂದ್ಯದಲ್ಲಿ ಟೀಂ ಇಂಡಿಯಾ ನಾಯಕಿ ಹರ್ಮನ್‌ಪ್ರೀತ್ ಕೌರ್ ತಮ್ಮ ಏಕದಿನ ವೃತ್ತಿಜೀವನದ ಆರನೇ ಶತಕ ಸಿಡಿಸಿ ಮಿಂಚಿದ್ದಾರೆ. ತಮ್ಮ ಇನ್ನಿಂಗ್ಸ್‌ನಲ್ಲಿ 88 ಎಸೆತಗಳನ್ನು ಎದುರಿಸಿದ ಹರ್ಮನ್‌ಪ್ರೀತ್ 9 ಬೌಂಡರಿ ಹಾಗೂ 3 ಸಿಕ್ಸರ್ ಸಹಿತ ಅಜೇಯ 103 ರನ್ ಬಾರಿಸಿದರು. ಈ ಶತಕದ ಇನ್ನಿಂಗ್ಸ್ ಜೊತೆಗೆ ಏಕದಿನದಲ್ಲಿ 3500 ರನ್ ಪೂರೈಸಿದ ದಾಖಲೆಯನ್ನು ನಿರ್ಮಿಸಿದರು.

ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಟೀಂ ಇಂಡಿಯಾ ನಾಯಕಿ ಹರ್ಮನ್‌ಪ್ರೀತ್ ಕೌರ್ ಹಾಗೂ ಆರಂಭಿಕ ಆಟಗಾರ್ತಿ ಸ್ಮೃತಿ ಮಂಧಾನ ಅವರ ಶತಕದ ನೆರವಿನಿಂದ ನಿಗದಿತ 50 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು ದಾಖಲೆಯ 325 ರನ್ ಕಲೆಹಾಕಿದೆ.

171 ರನ್‌ಗಳ ಜೊತೆಯಾಟ

ಈ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಕೌರ್ ಹೊರತುಪಡಿಸಿ ಸ್ಮೃತಿ ಮಂಧಾನ ಕೂಡ ಸ್ಫೋಟಕ ಶತಕ ಸಿಡಿಸಿದರು. ಅಂತಿಮವಾಗಿ ಸ್ಮೃತಿ 120 ಎಸೆತಗಳಲ್ಲಿ 18 ಬೌಂಡರಿ ಹಾಗೂ 2 ಸಿಕ್ಸರ್ ನೆರವಿನಿಂದ 136 ರನ್‌ಗಳ ಇನ್ನಿಂಗ್ಸ್ ಆಡಿದರು. ಅಲ್ಲದೆ ಈ ಇಬ್ಬರೂ 136 ಎಸೆತಗಳಲ್ಲಿ 171 ರನ್‌ಗಳ ಜೊತೆಯಾಟವನ್ನು ಮಾಡುವ ಮೂಲಕ ದಕ್ಷಿಣ ಆಫ್ರಿಕಾವನ್ನು ಸಂಪೂರ್ಣವಾಗಿ ಹಿಮ್ಮೆಟ್ಟಿಸಿದರು.

ಆಫ್ರಿಕಾಗೆ 325 ರನ್ ಟಾರ್ಗೆಟ್

ಜೀವದಾನದ ಲಾಭ ಪಡೆದ ಹರ್ಮನ್‌ಪ್ರೀತ್

24ನೇ ಓವರ್‌ನಲ್ಲಿ ಕ್ರೀಸ್‌ಗೆ ಬಂದ ಹರ್ಮನ್‌ಪ್ರೀತ್ ಕೇವಲ 87 ಎಸೆತಗಳಲ್ಲಿ ಶತಕ ಗಳಿಸುವಲ್ಲಿ ಯಶಸ್ವಿಯಾದರು. ಇನ್ನಿಂಗ್ಸ್‌ನ ಕೊನೆಯ ಓವರ್‌ನಲ್ಲಿ ತಮ್ಮ ಆರನೇ ಏಕದಿನ ಶತಕವನ್ನು ಪೂರ್ಣಗೊಳಿಸಿದರು. 49.2 ಓವರ್‌ಗಳಲ್ಲಿ ಹರ್ಮನ್‌ಪ್ರೀತ್ ಸ್ಕೋರ್ 85 ಎಸೆತಗಳಲ್ಲಿ 88 ರನ್ ಆಗಿತ್ತು. ಇದಾದ ಬಳಿಕ ಒಂದು ಸಿಕ್ಸರ್ ಹಾಗೂ ಎರಡು ಬೌಂಡರಿಗಳನ್ನು ಬಾರಿಸುವ ಮೂಲಕ ಶತಕ ಪೂರೈಸಿದರು. ಆದರೆ, 88 ರನ್‌ಗಳ ಸ್ಕೋರ್‌ನಲ್ಲಿ ಹರ್ಮನ್‌ಪ್ರೀತ್‌ಗೆ ಒಂದು ಜೀವದಾನ ಕೂಡ ಸಿಕ್ಕಿತು. ಈ ಓವರ್‌ನಲ್ಲಿ ಸಿಕ್ಸರ್ ಸಿಡಿಸುವ ಯತ್ನದಲ್ಲಿ ಹರ್ಮನ್‌ಪ್ರೀತ್ ಕ್ರೀಸ್‌ನಿಂದ ತುಂಬ ಮುಂದೆ ಬಂದಿದ್ದರು. ಆದರೆ ಚೆಂಡನ್ನು ದಂಡಿಸಲು ಅವರಿಗೆ ಆಗಲಿಲ್ಲ. ಚೆಂಡು ವಿಕೆಟ್ ಕೀಪರ್ ಕಡೆಗೆ ಹೋಯಿತು. ಆದರೆ ದಕ್ಷಿಣ ಆಫ್ರಿಕಾದ ವಿಕೆಟ್‌ಕೀಪರ್, ಹರ್ಮನ್‌ಪ್ರೀತ್ ಅವರನ್ನು ಸ್ಟಂಪ್ ಮಾಡುವ ಅವಕಾಶವನ್ನು ಕಳೆದುಕೊಂಡರು.

ಮುಂದಿನ 29 ಎಸೆತಗಳಲ್ಲಿ ಶತಕ

ಕ್ರೀಸ್‌ಗೆ ಬಂದ ತಕ್ಷಣ ಸ್ಫೋಟಕ ಆಟಕ್ಕೆ ಮುಂದಾದ ಹರ್ಮನ್‌ಪ್ರೀತ್ ಕೌರ್, ಮಂಧಾನ ಜತೆಗೂಡಿ ಕೇವಲ 46 ಎಸೆತಗಳಲ್ಲಿ 50 ರನ್ ಸೇರಿಸಿದರು. ಇದರ ನಂತರ, ಇಬ್ಬರೂ 90 ಎಸೆತಗಳಲ್ಲಿ ಶತಕದ ಜೊತೆಯಾಟವನ್ನು ಮಾಡಿದರು. ಈ ವೇಳೆ ಹರ್ಮನ್ಪ್ರೀತ್ ಕೇವಲ 58 ಎಸೆತಗಳಲ್ಲಿ ತಮ್ಮ ಅರ್ಧಶತಕವನ್ನು ಪೂರೈಸಿದರು. ಅರ್ಧಶತಕ ಪೂರೈಸಿದ ನಂತರ ದೊಡ್ಡ ಹೊಡೆತಗಳನ್ನು ಆಡಲಾರಂಭಿಸಿದ ಅವರು ಮುಂದಿನ 29 ಎಸೆತಗಳಲ್ಲಿ ತಮ್ಮ ಶತಕವನ್ನು ಪೂರ್ಣಗೊಳಿಸಿದರು.

ಸಾವು ನಿಶ್ಚಿತ ಟೀಮ್ ಇಂಡಿಯಾ ಬರಬೇಕು

ಟಿ20 ವಿಶ್ವಕಪ್ ಮುಕ್ತಾಯದ ಬೆನ್ನಲ್ಲೇ ಐಸಿಸಿ ಚಾಂಪಿಯನ್ಸ್ ಟ್ರೋಫಿಗಾಗಿ ಸಿದ್ಧತೆಗಳನ್ನು ಶುರು ಮಾಡಲಿದೆ. 2025 ರಲ್ಲಿ ನಡೆಯಲಿರುವ ಈ ಟೂರ್ನಿಯನ್ನು ಪಾಕಿಸ್ತಾನ್ ಕ್ರಿಕೆಟ್ ಮಂಡಳಿ ಆಯೋಜಿಸಲಿದೆ. ಅದರಂತೆ ಚಾಂಪಿಯನ್ಸ್ ಟ್ರೋಫಿ 2025 ರಲ್ಲಿ ಪಾಕಿಸ್ತಾನದಲ್ಲಿ ನಡೆಯುವ ಸಾಧ್ಯತೆಯಿದೆ. ಆದರೆ ಪಾಕ್‌ನಲ್ಲಿ ಟೂರ್ನಿ ನಡೆದರೆ ಭಾರತ ತಂಡ ತೆರಳುವ ಸಾಧ್ಯತೆಯಿಲ್ಲ. ಸುರಕ್ಷತೆಯ ಕಾರಣಗಳನ್ನು ಮುಂದಿಟ್ಟು ಟೀಮ್ ಇಂಡಿಯಾ ಪಾಕಿಸ್ತಾನಕ್ಕೆ ತೆರಳಲು ಹಿಂದೇಟು ಹಾಕಬಹುದು. ಹೀಗೆ ಭಾರತ ತಂಡ ಟೂರ್ನಿಯಿಂದ ಹಿಂದೆ ಸರಿಯುವ ವಿಚಾರವನ್ನು ಮನಗಂಡಿರುವ ಪಾಕ್ ತಂಡದ ಮಾಜಿ ಆಟಗಾರ ಜಾವೇದ್ ಮಿಯಾಂದಾದ್ ಈ ಹಿಂದೆ ಧೈರ್ಯ ತುಂಬುವ ಹೇಳಿಕೆಗಳನ್ನು ನೀಡಿದ್ದರು. ಆದರೆ ಈ ಹೇಳಿಕೆಯಲ್ಲಿ ಸಾವಿನ ವಿಷಯ ಪ್ರಸ್ತಾಪಿಸಿರುವುದು ಅಚ್ಚರಿ.

ಈ ಬಗ್ಗೆ ಮಾತನಾಡಿರುವ ಜಾವೇದ್ ಮಿಯಾಂದಾದ್, ಭಾರತ ತಂಡವು ಪಾಕಿಸ್ತಾನಕ್ಕೆ ಬರಲು ಹೆದರಬೇಕಿಲ್ಲ. ಸಾವು ಅನ್ನೋದು ನಿಶ್ಚಿತ. ಯಾವಾಗ, ಎಲ್ಲಿ ಬೇಕಾದರೂ ಸಾವು ಬರಬಹುದು. ಹೀಗಾಗಿ ಸಾವಿಗೆ ಹೆದರಿ ಪಾಕಿಸ್ತಾನಕ್ಕೆ ಬರದಿರಬೇಡಿ ಎಂದು ಮಿಯಾಂದಾದ್ ಹೇಳಿದ್ದಾರೆ. ಈ ಹಿಂದೆ ನೀಡಿರುವ ಸಂದರ್ಶನವೊಂದರಲ್ಲಿ ನೀಡಿದ ಈ ಹೇಳಿಕೆಯು ಇದೀಗ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದ್ದು, ಒಂದು ತಂಡವನ್ನು ತನ್ನ ದೇಶಕ್ಕೆ ಆಮಂತ್ರಿಸುವಾಗ ಸಾವಿನ ವಿಚಾರವನ್ನು ಮುಂದಿಟ್ಟಿರುವ ಬಗ್ಗೆ ಅನೇಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಟೀಮ್ ಇಂಡಿಯಾ ಪಾಲ್ಗೊಳ್ಳುತ್ತಾ: ಪಾಕಿಸ್ತಾನದಲ್ಲಿ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿಯಲ್ಲಿ ಭಾರತ ತಂಡ ಪಾಲ್ಗೊಳ್ಳಲಿದೆಯಾ ಎನ್ನುವ ಪ್ರಶ್ನೆಗೆ ಸದ್ಯಕ್ಕೆ ಸ್ಪಷ್ಟ ಉತ್ತರ ಸಿಕ್ಕಿಲ್ಲ. ಇದಾಗ್ಯೂ ಭಾರತ ತಂಡವು ಟೂರ್ನಿಯನ್ನು ಹೈಬ್ರಿಡ್ ಮಾದರಿಯಲ್ಲಿ ಆಯೋಜಿಸಲು ಐಸಿಸಿಗೆ ಮನವಿ ಮಾಡಲಿದೆ. ಅಂದರೆ ಭಾರತದ ಪಂದ್ಯಗಳನ್ನು ತಟಸ್ಥ ಸ್ಥಳಗಳಲ್ಲಿ ಆಯೋಜಿಸುವಂತೆ ಬೇಡಿಕೆ ಮುಂದಿಡಲಿದೆ. ಈ ಮೂಲಕ ಪಾಕ್‌ಗೆ ತೆರಳದೇ ಟೀಮ್ ಇಂಡಿಯಾ ಚಾಂಪಿಯನ್ಸ್ ಟ್ರೋಫಿಯಲ್ಲಿ ಪಾಲ್ಗೊಳ್ಳುವ ಸಾಧ್ಯತೆಯಿದೆ. ಅದರಂತೆ ಮುಂಬರುವ ಚಾಂಪಿಯನ್ಸ್ ಟ್ರೋಫಿ ಪಾಕಿಸ್ತಾನ್ ಮತ್ತು ಶ್ರೀಲಂಕಾ ಅಥವಾ ಯುಎಇ ನಲ್ಲಿ ನಡೆಯುವ ಸಾಧ್ಯತೆಯಿದೆ.



ಗೌತಮ್ ಗಂಭೀರ್‌ಗೆ ಪ್ರತಿಸ್ಪರ್ಧಿ ಎಂಟ್ರಿ..!

ಟಿ20 ವಿಶ್ವಕಪ್ ಮುಕ್ತಾಯದ ಬೆನ್ನಲ್ಲೇ ಟೀಮ್ ಇಂಡಿಯಾ ಕೋಚ್ ಹುದ್ದೆಯಿಂದ ರಾಹುಲ್ ದ್ರಾವಿಡ್ ಕೆಳಗಿಳಿಯಲಿದ್ದಾರೆ. ಅದಕ್ಕೂ ಮುನ್ನ ಹೊಸ ಕೋಚ್ ಆಯ್ಕೆಗೆ ಬಿಸಿಸಿಐ ಮುಂದಾಗಿದ್ದು, ಅದರಂತೆ ಇದಿಗ ಮಾಜಿ ಕ್ರಿಕೆಟಿಗರಾದ ಡಬ್ಲ್ಯೂ. ರಾಮನ್ ಹಾಗೂ ಗೌತಮ್ ಗಂಭೀರ್ ಅವರ ಸಂದರ್ಶನ ನಡೆಯುತ್ತಿದೆ.

ಟೀಮ್ ಇಂಡಿಯಾದ ಮುಖ್ಯ ಕೋಚ್ ಆಗಿ ಭಾರತ ತಂಡದ ಮಾಜಿ ಆಟಗಾರ ಗೌತಮ್ ಗಂಭೀರ್ ನೇರವಾಗಿ ಆಯ್ಕೆಯಾಗಲಿದ್ದಾರೆ ಎನ್ನಲಾಗಿತ್ತು. ಆದರೀಗ ಗಂಭೀರ್‌ಗೆ ಪ್ರತಿಸ್ಪರ್ಧಿಯಾಗಿ ಡಬ್ಲ್ಯೂ.ವಿ ರಾಮನ್ ಕಾಣಿಸಿಕೊಂಡಿದ್ದಾರೆ. ಜೂನ್ 18 ರಂದು ಭಾರತದ ಪುರುಷರ ಕ್ರಿಕೆಟ್ ತಂಡದ ಮುಖ್ಯ ಕೋಚ್ ಹುದ್ದೆಗಾಗಿ ಸಂದರ್ಶನ ನಡೆಸಲಾಗಿದ್ದು, ಈ ವೇಳೆ ಡಬ್ಲ್ಯೂ.ವಿ ರಾಮನ್ ಕೂಡ ಹಾಜರಾಗಿದ್ದಾರೆ.

ಸಂದರ್ಶನದಲ್ಲಿ ಗೌತಮ್ ಗಂಭೀರ್ ಹಾಗೂ ಡಬ್ಲ್ಯೂ.ವಿ ರಾಮನ್ ಕಾಣಿಸಿಕೊಂಡಿದ್ದರು. ಈ ವೇಳೆ ಬಿಸಿಸಿಐ ಕ್ರಿಕೆಟ್ ಸಲಹಾ ಸಮಿತಿ (ಸಿಎಸಿ) ಇಬ್ಬರ ಜೊತೆ ಹಲವು ವಿಚಾರಗಳ ಬಗ್ಗೆ ಚರ್ಚಿಸಿದ್ದಾರೆ ಎಂದು ತಿಳಿದು ಬಂದಿದೆ.

ರಾಮನ್ ಅವರು 2021 ರಲ್ಲಿ ಭಾರತ ಮಹಿಳಾ ತಂಡದ ತರಬೇತುದಾರರಾಗಿ ಕಾರ್ಯ ನಿರ್ವಹಿಸಿದ್ದರು. ಅಲ್ಲದೆ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ, ವಿವಿಧ ರಾಜ್ಯಗಳಲ್ಲಿ ಮತ್ತು ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಬ್ಯಾಟಿಂಗ್ ತರಬೇತುದಾರರಾಗಿ ಕಾಣಿಸಿಕೊಂಡಿದ್ದರು. ಈ ಅನುಭವದೊಂದಿಗೆ ಇದೀಗ ಟೀಮ್ ಇಂಡಿಯಾದ ಮುಖ್ಯ ಕೋಚ್ ಹುದ್ದೆ ಮೇಲೆ ಡಬ್ಲ್ಯೂ.ವಿ ರಾಮನ್ ಕಣ್ಣಿಟ್ಟಿದ್ದಾರೆ.

ಅತ್ತ ಐಪಿಎಲ್‌ನಲ್ಲಿ ಮೆಂಟರ್ ಆಗಿ ಕಾರ್ಯ ನಿರ್ವಹಿಸಿದ ಅನುಭವ ಹೊಂದಿರುವ ಗೌತಮ್ ಗಂಭೀರ್ ಕೂಡ ಭಾರತ ತಂಡದ ಕೋಚ್ ಹುದ್ದೆಯ ಪ್ರಮುಖ ಆಕಾಂಕ್ಷಿಯಾಗಿದ್ದಾರೆ. ಇದೀಗ ವಿ ರಾಮನ್ ಹಾಗೂ ಗೌತಮ್ ಗಂಭೀರ್ ಮೊದಲ ಸುತ್ತಿನ ಸಂದರ್ಶನ ಮುಗಿಸಿದ್ದಾರೆ.

ಅಶೋಕ್ ಮಲ್ಹೋತ್ರಾ, ಜತಿನ್ ಪರಾಂಜ್ಪೆ ಮತ್ತು ಸುಲಕ್ಷಣಾ ನಾಯಕ್ ಅವರನ್ನೊಳಗೊಂಡ ಕ್ರಿಕೆಟ್ ಸಲಹಾ ಸಮಿತಿಯು (ಸಿಎಸಿ) ಬುಧವಾರ ಗೌತಮ್ ಗಂಭೀರ್ ಹಾಗೂ ಡಬ್ಲ್ಯೂ.ವಿ ರಾಮನ್ ಅವರನ್ನು 2ನೇ ಸುತ್ತಿನ ಸಂದರ್ಶನಕ್ಕೆ ಆಯ್ಕೆ ಮಾಡಿದ್ದಾರೆ.

ಈ ಸುತ್ತಿನಲ್ಲಿ ಸಿಎಸಿ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದ್ದು, ಇವರಿಬ್ಬರಲ್ಲಿ ಒಬ್ಬರ ಹೆಸರನ್ನು ಮುಖ್ಯ ಕೋಚ್ ಹುದ್ದೆಗೆ ಬಿಸಿಸಿಐಗೆ ಶಿಫಾರಸ್ಸು ಮಾಡಲಿದೆ. ಇದಾದ ಬಳಿಕ ಬಿಸಿಸಿಐ ಅಧಿಕೃತವಾಗಿ ಕೋಚ್ ಅನ್ನು ಘೋಷಣೆ ಮಾಡಲಿದೆ.

ಪ್ರಸ್ತುತ ಮಾಹಿತಿ ಪ್ರಕಾರ, ಟೀಮ್ ಇಂಡಿಯಾದ ನೂತನ ಕೋಚ್ ಅನ್ನು ಬಿಸಿಸಿಐ ಜೂನ್ 19 ಮತ್ತು 21 ರ ನಡುವೆ ಘೋಷಿಸುವ ಸಾಧ್ಯತೆಯಿದೆ. ಅದರಂತೆ ಭಾರತ ತಂಡದ ಹೊಸ ಕೋಚ್ ಆಗಿ ಡಬ್ಲ್ಯೂ.ವಿ ರಾಮನ್ ಕಾಣಿಸಿಕೊಳ್ಳಲಿದ್ದಾರಾ ಅಥವಾ ಗೌತಮ್ ಗಂಭೀರ್‌ಗೆ ಪಟ್ಟ ಕಟ್ಟಲಿದ್ದಾರಾ ಕಾದು ನೋಡಬೇಕಿದೆ.



ಟೀಮ್ ಇಂಡಿಯಾ ಕೋಚ್ ಹುದ್ದೆ

1,400 ಕೋಟಿ ರೂ. ಹೂಡಿಕೆಗೆ ಮುತ್ತಯ್ಯ

ಶ್ರೀಲಂಕಾದ ಮಾಜಿ ಕ್ರಿಕೆಟಿಗ ಮುತ್ತಯ್ಯ ಮುರಳೀಧರನ್ ಕರ್ನಾಟಕದಲ್ಲಿ ಭಾರಿ ಹೂಡಿಕೆಗೆ ಮುಂದಾಗಿದ್ದಾರೆ. ಕ್ರಿಕೆಟ್‌ಗೆ ವಿದಾಯ ಹೇಳಿದ ಬಳಿಕ ಉದ್ಯಮ ಲೋಕದಲ್ಲಿ ತಮ್ಮ ಎರಡನೇ ಇನ್ನಿಂಗ್ಸ್ ಆರಂಭಿಸಿರುವ ಮುರಳೀಧರನ್, 'ಮುತ್ತಯ್ಯ ಬ್ರಿವರೇಜಸ್ ಮತ್ತು ಕನೆಕ್ಟನರೀಸ್' ಹೆಸರಿನ ತಂಪು ಪಾನೀಯಗಳ ಉತ್ಪಾದನಾ ಘಟಕವನ್ನು ಕರ್ನಾಟಕದ ಗಡಿನಾಡ ಜಿಲ್ಲೆ ಚಾಮರಾಜನಗರದ ಬದನಗುಪ್ಪೆಯಲ್ಲಿ ತೆರೆಯಲಿದ್ದಾರೆ. ಇದಕ್ಕಾಗಿ ಕರ್ನಾಟಕ ಸರ್ಕಾರದೊಂದಿಗೆ ಒಪ್ಪಂದ ಕೂಡ ಮಾಡಿಕೊಂಡಿದ್ದಾರೆ.



ಅಲ್ಲದೆ ಮುರಳೀಧರನ್ ಧಾರವಾಡ ಜಿಲ್ಲೆಯಲ್ಲಿ ಹೂಡಿಕೆ ಮಾಡಲು ಇಚ್ಛಿಸಿದ್ದು, ಒಟ್ಟು 1400 ಕೋಟಿ ರೂ.ಗಳನ್ನು ಕರ್ನಾಟಕದಲ್ಲಿ ಹೂಡಿಕೆ ಮಾಡಲು ಮುರುಳೀಧರನ್ ಮುಂದಾಗಿದ್ದಾರೆ.

ಕರ್ನಾಟಕದ ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂಬಿ ಪಾಟೀಲ್ ತಮ್ಮ ಅಧಿಕೃತ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿ ಈ ಒಪ್ಪಂದದ ಬಗ್ಗೆ ಮಾಹಿತಿ ನೀಡಿದ್ದಾರೆ. ಸದ್ಯ ಚಾಮರಾಜನಗರ ಜಿಲ್ಲೆಯ ಬದನಗುಪ್ಪೆಯಲ್ಲಿ ಕಾರ್ಖಾನೆ ಸ್ಥಾಪನೆ ಕಾಮಗಾರಿ ನಡೆಯುತ್ತಿದೆ. ಎಂ.ಬಿ.ಪಾಟೀಲ್ ಅವರು ಇತ್ತೀಚೆಗೆ ಬೆಂಗಳೂರಿನಲ್ಲಿ ಮುರಳೀಧರನ್ ಮತ್ತು ಅವರ ಕಂಪನಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು. ಈ ಸಭೆಯ ನಂತರ ಮಾಡಿದ ಪೋಸ್ಟ್‌ನಲ್ಲಿ, ಮುತ್ತಯ್ಯ ಮುರಳೀಧರನ್ ಕರ್ನಾಟಕದಲ್ಲಿ ತಮ್ಮ ವ್ಯವಹಾರವನ್ನು ವಿಸ್ತರಿಸಲು ಬಯಸಿದ್ದಾರೆ. ತಮ್ಮ ತಾಯ್ನಾಡಿನಲ್ಲಿ ತಮ್ಮ ವ್ಯಾಪಾರವನ್ನು ಬೆಳೆಸಲು ಪ್ರಯತ್ನಿಸುತ್ತಿರುವ ಅವರು ಇದಕ್ಕಾಗಿ ತಮ್ಮ ರಾಜ್ಯವನ್ನು ಆಯ್ಕೆ ಮಾಡಿದ್ದಾರೆ.

ಕನ್ನಡಿಗನ ಕಥೆಯಲ್ಲಿ ಅಕ್ಷಯ್ ಕುಮಾರ್

ಚಿತ್ರರಂಗದಲ್ಲಿ ಇದೀಗ ಬಯೋಪಿಕ್‌ಗಳ ಹಾವಳಿ ಜೋರಾಗಿದೆ. ಸ್ಟಾರ್ ಕಲಾವಿದರ ಕಥೆ, ಕ್ರಿಕೆಟ್ ಕ್ಷೇತ್ರದಲ್ಲಿ ಸಾಧನೆ ಮಾಡಿದವರ ಜೀವನ ಚರಿತ್ರೆ ಸೇರಿದಂತೆ ಹಲವು ಸಿನಿಮಾ ಕಥೆಗಳು ಬಂದು ಹೋಗಿವೆ. ಕನ್ನಡಿಗನ ಯಶೋಗಾಥೆಯನ್ನು ಬಾಲಿವುಡ್‌ನಲ್ಲಿ ತೋರಿಸಲು ಮುಂದಾಗಿದ್ದಾರೆ. 'ಸರ್ಫಿರಾ' ಎಂಬ ಟ್ರೈಲರ್ ರಿಲೀಸ್ ಆಗಿ ಸದ್ದು ಮಾಡುತ್ತಿದೆ.

ಕನ್ನಡಿಗ ಕ್ಯಾಪ್ಟನ್ ಜಿ.ಆರ್ ಗೋಪಿನಾಥ್ ಸಾಹಸಗಾಥೆಯನ್ನು ಬೆಳ್ಳಿಪರದೆಯಲ್ಲಿ ತೋರಿಸಲು ಹೊರಟಿದ್ದಾರೆ. ಈ ಹಿಂದೆ ತಮಿಳಿನಲ್ಲಿ 'ಸೂರರೈ ಪೋಟ್ರು' ಮೂಲಕ ಜಿ.ಆರ್ ಗೋಪಿನಾಥ್ ಯಶೋಗಾಥೆಯನ್ನು ತೋರಿಸಲಾಗಿತ್ತು. ಈಗ ಬಾಲಿವುಡ್‌ನಲ್ಲಿ ಮತ್ತೆ ಪ್ರಯತ್ನ ಮುಂದುವರೆದಿದೆ. ಅತ್ಯಂತ ಕಡಿಮೆ ವೆಚ್ಚದಲ್ಲಿ ಸಾಮಾನ್ಯ ಜನರಿಗೆ ವಿಮಾನ ಸೇವೆ ಒದಗಿಸಬೇಕು ಎನ್ನುವ ಒಬ್ಬ ಯುವಕನ ಕನಸಿನ ಕಥೆಯ ಸುತ್ತ ಸಿನಿಮಾ ಸುತ್ತುತ್ತದೆ. ಈ ಹಾದಿಯಲ್ಲಿ ಆತನ ಏಳು ಬೀಳುಗಳಿಗೆ ದೃಶ್ಯ ರೂಪ ಸಿಕ್ಕಿದೆ. ಸಿನಿಮಾದಲ್ಲಿ ಜಿ.ಆರ್ ಗೋಪಿನಾಥ್ ಆಗಿ ಅಕ್ಷಯ್ ಕುಮಾರ್ ಜೀವತುಂಬಿದ್ದಾರೆ. ಇನ್ನು ತಮಿಳು ನಟ ಸೂರ್ಯ ಕೂಡ 'ಸರ್ಫಿರಾ' ಚಿತ್ರದಲ್ಲಿ ಗೆಸ್ಟ್ ಅಪಿಯರೆನ್ಸ್ ಮಾಡಿದ್ದಾರೆ.

ಈ ಸಿನಿಮಾದಲ್ಲಿ ಪರೇಶ್ ರಾವಲ್, ರಾಧಿಕಾ ಮದನ್, ಸೀಮಾ ಬಿಸ್ವಾಸ್ ಚಿತ್ರದ ಮುಖ್ಯ ತಾರಾಗಣದಲ್ಲಿದ್ದಾರೆ. 'ಸೂರರೈ ಪೋಟ್ರು' ಸಿನಿಮಾದಂತೆಯೇ ಸರ್ಫಿರಾ ಅದ್ಧೂರಿಯಾಗಿ ಮೂಡಿ ಬಂದಿದೆ. ತಮಿಳು ನಟ ಸೂರ್ಯ ಮಾಡಿದ್ದ ಪಾತ್ರಕ್ಕೆ ಅಕ್ಷಯ್ ಕುಮಾರ್ ನ್ಯಾಯ ಸಲ್ಲಿಸುವ ಸುಳಿವು ಸಿಕ್ಕಿದೆ. 'ಸರ್ಫಿರಾ' ಟ್ರೈಲರ್ ಉತ್ತಮ ಪ್ರತಿಕ್ರಿಯೆ ಸಿಗುತ್ತಿದೆ. ಈ ಸಿನಿಮಾವನ್ನು ಕೂಡ ಸುಧಾ ಕೊಂಗರಾ ನಿರ್ದೇಶನ ಮಾಡಿದ್ದು, ಇದೇ ಜುಲೈ 12ಕ್ಕೆ ಸಿನಿಮಾ ರಿಲೀಸ್ ಆಗಲಿದೆ.

ಸರ್ಫಿರಾ ಟ್ರೈಲರ್ ಔಟ್

'ಗೌರಿ' ಸಿನಿಮಾ ರಿಲೀಸ್ ಯಾವಾಗ?

ಇಂದ್ರಜಿತ್ ಲಂಕೇಶ್ ನಿರ್ದೇಶಿಸಿರುವ 'ಗೌರಿ' ಸಿನಿಮಾ 100 ದಿನಗಳ ಶೂಟಿಂಗ್ ಮುಗಿಸಿ ಬಿಡುಗಡೆಗೆ ಸಿದ್ಧವಾಗಿದೆ. ಸದ್ಯದಲ್ಲೇ ಸಿನಿಮಾ ರಿಲೀಸ್ ಆಗಲಿದೆ ಎಂದು ಗೌರಿ ಚಿತ್ರದ ನಟ ಸಮರ್ಜಿತ್ ಲಂಕೇಶ್ ತಿಳಿಸಿದ್ದಾರೆ.

ಮಂಡ್ಯದಲ್ಲಿ ಸಮರ್ಜಿತ್ ಮಾತನಾಡಿ, ನೈಜ ಘಟನೆ ಆಧಾರಿತ ಕಥೆ ಇರುವ ಈ ಚಿತ್ರವನ್ನು ನಮ್ಮ ತಂದೆ ಇಂದ್ರಜಿತ್ ಲಂಕೇಶ್ ನಿರ್ದೇಶಿಸಿದ್ದಾರೆ. ಈ ಚಿತ್ರದಲ್ಲಿ ಎಂಟು ಹಾಡುಗಳಿದ್ದು, ಈ ಹಾಡುಗಳಲ್ಲಿ ಕೆಲವು ಹಾಡುಗಳು ಸೂಪರ್ ಹಿಟ್ ಆಗಿದೆ ಎಂದು ಮಾತನಾಡಿದ್ದಾರೆ. ತಮ್ಮ ಜೊತೆ ಸಾನ್ಯಾ ಅಯ್ಯರ್ ಅವರು ನಾಯಕಿಯಾಗಿ ಪರಿಚಯ ಆಗುತ್ತಿದ್ದಾರೆ. ಈ ಚಿತ್ರ ಬಹುತಾರಾಗಣವನ್ನು ಒಳಗೊಂಡಿದ್ದು ಬಿಗ್ ಬಜೆಟ್ ಚಿತ್ರವಾಗಿದೆ ಎಂದರು. ಚಿತ್ರದಲ್ಲಿ 80 ಕಲಾವಿದರು ನಟ